ಕರ್ಮವೀರ

ಸಂಪಾದಕರು: ಹ. ರಾ. ಪುರೋಹಿತ, ಎಂ. ಎ.
)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(
Editor: H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨೦—೧೦—೧೯೪೭ —(ಸಂಚಿಕೆ ೩೮)—

ಹಿಂದುಸ್ತಾನದ ಕೈಗಾರಿಕೆಗಳಲ್ಲಿ ಕ್ರಾಂತಿ ಅವಶ್ಯಕ

ಹಡಗುಗಳನ್ನು ಹೆಚ್ಚಿಸಬೇಕು— ಹೊಸ ಯಂತ್ರ ಸಾಮುಗ್ರಿಗಳನ್ನು ಕೊಳ್ಳಬೇಕು— ಕೈಗಾರಿಕೆಗಾಗಿ ವಿಶೇಷ ಮಂತ್ರಿಯೊಬ್ಬ ಬೇಕು— ಕೂಲಿ, ಬಂಡವಾಳ, ಸರಕಾರಗಳು ಸಹಕರಿಸಬೇಕು—

ದಂಗೆದಾಳಿಗಳಿಂದ ವಿತ್ತಜೀವಿತಗಳ ಹಾನಿಯೊದಗಿ ಹಿಂದುಸ್ತಾನವಿಂದು ಕಂಗಾಲಾಗಿದೆ. ಅದರ ಆರ್ಥಿಕ ದಶೆ ಕೆಟ್ಟುಹೋಗಿದೆ. ವ್ಯಾಪಾರೋದ್ಯಮಗಳು ಶೈಶವಾವಸ್ಥೆಯಲ್ಲಿವೆ. ಕೈಗಾರಿಕೆಗಳಲ್ಲಿ ಪ್ರಗತಿಯಿಲ್ಲ. ಈ ದುರ್ದಶೆಯಿಂದ ಪಾರಾಗಬೇಕಾದರೆ ವ್ಯಾಪಾರಕ್ಕೆ ರಕ್ಷಣೆ ಬೇಕು, ಪರರಾಷ್ಟ್ರಗಳೊಡನೆ ಧನವಿನಿಮಯವ್ಯವಸ್ಥೆ ಸರಿಯಾಗಬೇಕು, ಹೊಸ ಹೊಸ ಯಂತ್ರೋಪಕರಣಗಳನ್ನು ಶೀಘ್ರವಾಗಿ ತರಿಸಬೇಕು, ಈ ಬಗ್ಗೆ ಶತಪ್ರಯತ್ನ ಮಾಡಿ ಒಕ್ಕೂಟ ಸರಕಾರವು ದೇಶದ ವಣಿಗ್ವರ್ಗಕ್ಕೆ ನೆರವೀಯಬೇಕು ಎಂದು ಅ. ಭಾ. ವಾಣಿಜ್ಯ ಮಹಾಮಂಡಲದ ಅಧ್ಯಕ್ಷರೂ ವ್ಯಾಪಾರತಂತ್ರ ವಿಶಾರದರೂ ಆದ ಶ್ರೀ ಎಂ. ಎ. ಮಾಸ್ಟರರು ದೇಶದ ಪರಿಸ್ಥಿತಿಗೆ ಮನಕರಗಿ ಉತ್ಕಂಠೆಯಿಂದ ಜನತೆಯ ಮುಂದೆ ತಮ್ಮ ವಿಚಾರವನ್ನಿಟ್ಟಿದ್ದಾರೆ.

ಭಾರತದ ಒಕ್ಕೂಟ ಅದೃಷ್ಟಶಾಲಿ. ಅಲ್ಲಿ ಸಶಕ್ತರಾದ ಅನೇಕ ಮುಖಂಡರಿದ್ದಾರೆ. ಆದರೆ ಇಂದು ನರಳುತ್ತಿರುವ ನಮ್ಮ ಸೋದರರ ಆರ್ಥಿಕ ಜೀವನದ ಪುನರುತ್ಥಾನದ ಬಗ್ಗೆ ಅವರು ಏನು ಮಾಡಲು ಸಮರ್ಥರಾಗಿದ್ದಾರೆ? ಜನರ ಆರ್ಥಿಕ ದಶೆಯನ್ನು ಉತ್ತಮಗೊಳಿಸುವುದು ಸರಕಾರದ ಕರ್ತವ್ಯ; ಅವರಿಗಿಂದು ದೇಶದ ವ್ಯಾಪಾರಿ ವರ್ಗದ ಸಹಾಯ ಸಹಕಾರಗಳಗತ್ಯ. ಭಾರತದ ಬಹುಮುಖವಾದ ಕೈಗಾರಿಕೆಗಳ ಅಭಿವೃದ್ಧಿ ಇಂದು ಆಗಬೇಕಾಗಿದೆ, ಅದಾದ ಹೊರತು ರಾಷ್ಟ್ರದ ಅರ್ಥಿಕೋನ್ನತಿಯಾಗದು. ಭಾರತಕ್ಕೆ ಬಲವಾದ ವ್ಯಾಪಾರಿ ಹಡಗುಗಳು ಬೇಕು, ಉತ್ಪಾದನಕ್ಕಾಗಿ ಸರಿಯಾದ ವ್ಯವಸ್ಥೆಯಿಂದ ನಡೆವ ಕಾರಖಾನೆಗಳು ಬೇಕು, ಅಂತಹ ಕಾರಖಾನೆ, ಗಿರಣಿ ಮುಂತಾದವುಗಳ ಯಾಂತ್ರಿಕ ಆವಶ್ಯಕತೆಗಳನ್ನು ಪೂರಯಿಸುವ ಮೂಲಭೂತ ಯಂತ್ರೋಪಕರಣಗಳು ಬೇಕು, ಪರರಾಜ್ಯದ ವ್ಯಾಪಾರಿಗಳು ಪೈಪೋಟಿ ನಡೆಸದಂತೆ ನಮ್ಮ ಸರಕಾರ ನಮ್ಮ ವ್ಯಾಪಾರಕ್ಕೆ ರಕ್ಷಣೆ ಕೊಡಬೇಕು, ಸ್ವತಂತ್ರ ವ್ಯಾಪಾರೋದ್ಯಮಗಳು ನ್ಯಾಯವಾಗಿ, ಪ್ರಾಮಾಣಿಕವಾಗಿ ಅನುಭವಸ್ಥರಿಂದ ಸಾಗುವಂತಾಗಬೇಕು.

ಶ್ರೀ ಪ್ರಾಣಲಾಲಭಾಯಿಯವರು ಹೇಳಿದಂತೆ ನನ್ನ ಜೀವನದಲ್ಲಿ ಹಡಗಿನ ವ್ಯಾಪಾರಕ್ಕೆ ಪ್ರಥಮ ಸ್ಥಾನವನ್ನು ನಾನು ಕೊಟ್ಟಿರುವುದು ನಿಜ. ಇದೊಂದು ಬಹು ದೊಡ್ಡ ರಾಷ್ಟ್ರೀಯ ಕೈಗಾರಿಕೆ. ಹಿಂದುಸ್ತಾನ ಸರಕಾರದ ಇಂದಿನ ಸಮುದ್ರ ವ್ಯಾಪಾರ ಧೋರಣ ಅನುಕೂಲ ಪರಿವರ್ತನೆ ಹೊಂದಿರುವುದು ಸ್ತುತ್ಯವಾಗಿದೆ. ಇಂಗ್ಲಂಡು ಅಮೇರಿಕಗಳಂತೆ ಭಾರತವಾದರೂ ಒಂದು ಸಮರ್ಥ ವಾಣಿಜ್ಯ ನೌಕಾ ಬಲವನ್ನು ಕಟ್ಟಲಿದೆಯೆಂದು ನಮ್ಮ ಸರಕಾರ ಪ್ರಸಿದ್ಧಿಸಿರುವುದು ಸಂತಸದ ಸಂಗತಿ. ಆದರಲ್ಲಿ ಸರಕಾರ ಅತ್ಯಂತ ತೀವ್ರ ಪರಿಣಾಮಿಯಾದ ಧೋರಣ ವಹಿಸಬೇಕಾದುದಗತ್ಯ. ಆಗ ಮಾತ್ರ ಭಾರತದ ಭವಿಷ್ಯ ಬಹು ಉಜ್ವಲವಾಗಬಹುದಾಗಿದೆ.

ಬ್ರಿಟಿಶ ಮಿತ್ರರೊಡನೆ ಸಂಧಾನ ಬೇಡ

ಮೇಲೆ ಹೇಳಿದಂತೆ ತೀವ್ರಪರಿಣಾಮಿ ಧೋರಣ ವಹಿಸುವುದು ಬ್ರಿಟಿಶ ಮಿತ್ರರೊಡನೆ ಮಾಡುವ ಸಂಧಾನದಿಂದ ಸಾಧ್ಯವಿಲ್ಲವೆಂಬುದು ನಮ್ಮ ಇತ್ತೀಚಿನ ಅನುಭವ. ಈ ಕ್ಷೇತ್ರದಲ್ಲಿ ಮೊಟ್ಟ ಮೊದಲು ಮಾಡತಕ್ಕ ಮಹತ್ವದ ಕಾರ್ಯವೆಂದರೆ, ಭಾರತದಲ್ಲಿಯ ಅತ್ಯಲ್ಪ ಸಂಖ್ಯೆಯ ಹಡಗುಗಳುಳ್ಳ ವಾಣಿಜ್ಯ ನೌಕಾ ಬಲವನ್ನು ಹೆಚ್ಚಿಸಲು ಈ ಕೂಡಲೆ ಹೊಸ ಹಡಗುಗಳನ್ನು ಕೊಳ್ಳಬೇಕು ಇಲ್ಲವೆ ಇಲ್ಲಿಯೇ ಕಟ್ಟುವ ವ್ಯವಸ್ಥೆಯಾಗಬೇಕು. ಆದರೆ ನಮಗೆ ಅಗತ್ಯವಾದ ಬಹುಭಾರವಹ ನೌಕೆಗಳನ್ನು ಕಟ್ಟುವುದಕ್ಕೆ ಇಲ್ಲಿ ಈಗ ಅವಶ್ಯಕ ಸಾಮುಗ್ರಿಗಳಿಲ್ಲದುದರಿಂದ, ಸರಕಾರ ಆ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡುವವರೆಗೆ ಸಿಕ್ಕುವ ಕಡೆಯಿಂದ ಅಂತಹ ದೊಡ್ಡ ದೊಡ್ಡ ನೌಕೆಗಳನ್ನು ಕೊಂಡುಕೊಳ್ಳಬೇಕು. ನಮಗೀಗ ವಿವಿಧ ಸಮುದ್ರಗಳಲ್ಲಿ ಸಂಚರಿಸಬೇಕಾದರೆ ೫ ಲಕ್ಷ ಟನ್ ಭಾರದ ಸಾಮಾನುಗಳ ಸಾರಿಗೆಗೆ ಅನುಕೂಲವಾಗಬೇಕು. ಯುದ್ಧಕಾಲದಲ್ಲಿದ್ದ ನಮ್ಮ ಹಡಗಿನ ವ್ಯಾಪಾರ ಸ್ಥೂಲವಾಗಿ ೧ ಲಕ್ಷ ಟನ್ನಿಗೂ ಕಡಿಮೆಯೆಂದು ಹೇಳಬಹುದು. ಅದನ್ನು ನಮ್ಮ ಜನ ತಮ್ಮ ಸಾಹಸದಿಂದೀಗ ೨ ಲಕ್ಷ ೫೦ ಸಾವಿರ ಟನ್ನಿಗೇರಿಸಿದೆ. ಇದು ಸಾಲದು. ಇಂಗ್ಲೆಂಡು ೫ ಲಕ್ಷ ೮೦ ಸಾವಿರ ಟನ್ನುಗಳ ತೂಕದ ಸಾಮಾನು ಹೊರುವ ಹಡಗುಗಳನ್ನು ಕಟ್ಟುತ್ತಲಿದೆ; ಅವರ ಒಟ್ಟು ಹಡಗುಗಳಲ್ಲಿ ನೂರಕ್ಕೆ ೨೮ ರಷ್ಟಾಗುವ ಅವನ್ನು ಮಾರಾಟಕ್ಕಿಟ್ಟಿದ್ದಾರೆ. ಆದುದರಿಂದ ಭಾರತಕ್ಕೆ ಇಂಗ್ಲೆಂಡು ಕೊಡಬೇಕಾಗಿರುವ ಸ್ಟರ್ಲಿಂಗ್ ಸಾಲದ ಕೆಲವಂಶಕ್ಕೆ ಬದಲಾಗಿ ಬ್ರಿಟಿಶರಿಂದ ಹಡಗುಗಳನ್ನು ತರಿಸಬೇಕು. ೨೦ ಲಕ್ಷ ಟನ್ ತೂಕದ ಸಾಮಾನು ಸಾಗಿಸಲು ಬೇಕಾದ ಹಡಗುಗಳನ್ನು ತಯಾರಿಸಲು ಸಿದ್ಧ ಸಾಮುಗ್ರಿಯುಳ್ಳ ಇಂಗ್ಲೆಂಡಿನಿಂದ ನಮ್ಮ ಸಾಲಕ್ಕೆ ಬದಲು ಹಾಗೆ ಹಡಗುಗಳನ್ನು ಕೇಳುವುದು ಅನ್ಯಾಯವೂ ಅಲ್ಲ ಅಸಂಬದ್ಧವೂ ಎನಿಸದು. ಇದರಲ್ಲಿ ಭಾರತ ಸರಕಾರ ತಡಮಾಡದೆ ನಮ್ಮ ವ್ಯಾಪಾರಿಗಳಿಗೆ ಬೆಂಬಲವಾಗಿ ನಿಂತು ಅತ್ಯಂತ ಶೀಘ್ರವಾಗಿ ಅವಶ್ಯಕವಾದಷ್ಟು ಹಡಗುಗಳನ್ನು ತರಿಸಿ ಕೊಡಬೇಕಾದುದು ಅತಿ ಮಹತ್ವದ ಕರ್ತವ್ಯವಾಗಿದೆ.

ಧಾರಣೆಯ ಕುಸ್ತಿ

ನಮ್ಮ ಸಮುದ್ರ ವ್ಯಾಪಾರ ಹೆಚ್ಚಿಸಲು ಪ್ರಯತ್ನಿಸಿದರೆ ಬ್ರಿಟಿಶರು ಅಸಮಾಧಾನ ಪಟ್ಟುಕೊಂಡು ಧಾರಣೆ ಇಳಿಸಿ ನಮ್ಮ ಮೇಲೆ ಸ್ಪರ್ಧೆಗೆ ನಿಲ್ಲಬಹುದು. ಆದರೆ ನಾವು ಮಾತ್ರ ಧೈರ್ಯವಾಗಿ ಅದೆಲ್ಲವನ್ನೂ ಎದುರಿಸಲು ಸಿದ್ಧರಾಗಿರಬೇಕು. ಮತ್ತು ಈ ಸಾಹಸದಲ್ಲಿ ಒಕ್ಕೂಟ ಸರಕಾರವು, ಬ್ರಿಟಿಶ ಸರಕಾರ ಅಲ್ಲಿಯ ನೌಕೆಗಳ ಒಡೆಯರಿಗೆ ಹೇಳಿದಂತೆ, ಸ್ಪಷ್ಟವಾಗಿ ಭಾರತೀಯ ನೌಕಾ ವ್ಯಾಪಾರಿಗಳಿಗೆ ಹೊಸ ಹಡಗುಗಳ ವಿಕ್ರಯದಲ್ಲಿ ಮತ್ತು ಅವುಗಳನ್ನು ವ್ಯವಸ್ಥಿತವಾಗಿ ನಡೆಸುವಲ್ಲಿ ಅಗತ್ಯವಾದ ಸಹಾಯ ಸಹಕಾರವೊದಗಿಸುವುದಾಗಿ ಸಾರಬೇಕು.

ರಾಷ್ಟ್ರರಕ್ಷಕ ನೌಕಾ ಬಲ

ಸಮರ ನೀತಿಯನ್ವಯ ಜಗತ್ತಿನ ಪೂರ್ವದಲ್ಲಿ ಹಿಂದುಸ್ತಾನಕ್ಕಿರುವ ಸ್ಥಾನ ಮಹತ್ವದಿಂದ ದೇಶದ ರಕ್ಷಣೆಗಾಗಿ ಬೃಹತ್ಪ್ರಮಾಣದ ವಾಣಿಜ್ಯ ನೌಕಾ ಸೈನ್ಯ ಅವಶ್ಯವಾಗಿ ಬೇಕು. ಜಗತ್ತಿನ ವ್ಯಾಪಾರದಲ್ಲಿ ಭಾರತದಭಾಗ ನೂರಕ್ಕೆ ೩ರಷ್ಟು, ಆದರೆ ಭಾರತದ ಸ್ವಂತಹಡಗುಗಳಿಂದ ನಡೆವವ್ಯಾಪಾರದ ತೂಕ ನೂರಕ್ಕೆ ೨೫ಕ್ಕೂ ಕಡಿಮೆಯಾಗಿದೆ. ತನ್ನ ಸಾಲದಿಂದ ಕೊಳ್ಳಲಾಗುವ ತನ್ನ ಸಾಮುಗ್ರಿಗಳನ್ನು ತಾನೇ ತನ್ನ ಹಡಗುಗಳಲ್ಲಿ ಹೇರಿಕೊಂಡು ಆ ಸಾಲಗಾರ ದೇಶಕ್ಕೊಯ್ಯುವುದಾಗಿ ಅಮೇರಿಕ ಹೇಳುತ್ತದೆ. ಭಾರತಕ್ಕೆ ತರಿಸಲಾಗುತ್ತಿರುವ ಆಹಾರ ಧಾನ್ಯವನ್ನು ಕೂಡ ಕೈಯಿಂದ (ಅಮೇರಿಕದ ಸಾಲದಿಂದಲ್ಲ) ರೊಕ್ಕ ಕೊಟ್ಟು ಹಡಗಿನ ಬಾಡಿಗೆಯನ್ನು ನಾವು ಅವರಿಗೆ ತೆರಬೇಕಾಗಿ ಬಂದಿದೆ. ಅದಕ್ಕೆ ಕಾರಣವೆಂದರೆ ನಮ್ಮ ಸ್ವಂತ ಹಡಗುಗಳು ಸಾಕಷ್ಟಿಲ್ಲ. ಅದುದರಿಂದ ಭಾರತದ ನೌಕಾ ವ್ಯಾಪಾರಿಗಳ ಪ್ರಾರ್ಥನೆಯಂತೆ ಸರಕಾರದವರು ಒಂದು ಪರಿಷತ್ತನ್ನು ಕರೆದು ಅನುಭವಶಾಲಿಗಳ ಅನುಭವವನ್ನು ಪಡೆದು ಭಾರತದ ಸಮುದ್ರ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯವಾದ ಕ್ರಮ ತೆಗೆದುಕೊಳ್ಳುವರೆಂದು ನನ್ನ ನಿಸ್ಸಂದಿಗ್ಧವಾದನಂಬಿಗೆ.

ಉತ್ಪಾದನ ವೃದ್ಧಿ

ಶ್ರೀ ಪ್ರಾಣಲಾಲ ಭಾಯಿಯವರು ಸಮಯೋಚಿತವಾಗಿ ರಾಷ್ಟ್ರದ ಉತ್ಪಾದನವನ್ನು ವೃದ್ಧಿಗೊಳಿಸುವುದರತ್ತ ಗಮನವನ್ನು ಸೆಳೆದಿದ್ದಾರೆ. ಇದು ಸಾಧಾರಣದ ಪ್ರಶ್ನೆಯಲ್ಲ. ದೇಶದ ನಾನಾ ಕೈಗಾರಿಕೆಗಳ ಪುನರಭಿವೃದ್ಧಿಯೊಂದು ಕಡೆ ಮಾಡಬೇಕಾಗಿದೆ, ಮತ್ತೊಂದೆಡೆ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಬೇಕಾಗಿದೆ. ಹೀಗೆ ಉತ್ಪಾದನವನ್ನು ಅತಿತ್ವರೆಯಿಂದ ಬಹು ಮುಖವಾಗಿ ಹೆಚ್ಚಿಸಲು ಪ್ರಯತ್ನಿಸದಿದ್ದರೆ ಭೀಕರ ಪರಿಸ್ಥಿತಿಯುಂಟಾಗಬಹುದೆಂಬುದನ್ನು ಭಾರತದ ಸರ್ವ ಪಕ್ಷದವರೂ ಒಪ್ಪುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ವಿಷಯದಲ್ಲಿ ಮಾಡಬೇಕಾದ ಅನಿವಾರ್ಯ ಕರ್ತವ್ಯಗಳತ್ತ ವಣಿಗ್ವರ್ಗ ಹಾಗೂ ಸರಕಾರಗಳು ತೀವ್ರಲಕ್ಷ್ಯಕೊಡುವುದಗತ್ಯ.

ಸವೆದುಹೋದ ಯಂತ್ರೋಪಕರಣಗಳು

ಈಗ ಇರುವ ಕೈಗಾರಿಕೆಯ ಕಾರಖಾನೆಗಳಲ್ಲಿಯ ಯಂತ್ರಸಾಮುಗ್ರಿಗಳು ಯುದ್ಧದ ಕಾಲದಲ್ಲಿ ಹೆಚ್ಚು ಕೆಲಸಕ್ಕೆ ಬಳಸಲ್ಪಟ್ಟುದರಿಂದ ಸವೆದು ಹಾಳಾಗಿ ಹೋಗಿವೆ, ಮುರಿದು ಹೋಗುವ ಸ್ಥಿತಿಯಲ್ಲಿವೆ. ಅಂಥವನ್ನು ತೆಗೆದುಹಾಕಿ ಹೊಸ ಸಾಮುಗ್ರಿಗಳನ್ನು ತರಿಸಿ ಪುನರ್ವ್ಯವಸ್ಥೆ ಮಾಡಬೇಕಾಗಿದೆ. ಮುರಿದ ಭಾಗಗಳ ಬದಲು ಒಳ್ಳೆಯವನ್ನು ಹಾಕುವಲ್ಲಿ ನಮಗೆ ಉಪಕರಣಗಳೇ ಸಿಗದಂತಾಗಿವೆ. ಕಲ್ಲಿದ್ದಲಿಯ ಕೊರತೆ, ಅಗತ್ಯವಾದ ಯಂತ್ರ ನಡೆಸುವ ಶಕ್ತಿಯನ್ನು ಪೂರಯಿಸುವ ಪೆಟ್ರೋಲು ಮತ್ತು ವಿದ್ಯುತ್ತುಗಳ ಅಭಾವ, ಅಲ್ಲದೆ ಕಾಲಕ್ಕೆ ಸರಿಯಾಗಿ ಸಾಮಾನು ಹೊರಲು ಬೇಕಾದ ಸಾರಿಗೆ ವ್ಯವಸ್ಥೆಯಿಲ್ಲದಿರುವುದು—ಈಯೆಲ್ಲ ಅನಾನುಕೂಲತೆಗಳು ಅಪಹಾಸ್ಯಕ್ಕೆ ಗುರಿಯಾಗುವಷ್ಟು ಹೀನಸ್ಥಿತಿಯಲ್ಲಿವೆ. ಇವುಗಳಿಂದ ಯಥಾಸ್ಥಿತಿಯಲ್ಲಿ ಆಗಬೇಕಾದಷ್ಟು ಉತ್ಪಾದನೆ ಕೂಡ ಆಗುತ್ತಿಲ್ಲ; ಎಂದ ಮೇಲೆ ಅಧಿಕೋತ್ಪಾದನದ ಮಾತು ದೂರವೇ ಉಳಿಯಿತು. ಇವಲ್ಲದೆ, ಇವಕ್ಕೂ ಹೆಚ್ಚಾಗಿ, ಕೂಲಿಕಾರರಿಗೆ ಅಂಟಿಕೊಂಡಿರುವ ಮನಸ್ಥಿಯಾಗಿ ಗೈರುಹಾಜರಾಗುವ ದುರಭ್ಯಾಸದಿಂದಲೂ ನಿಯೋಜನೆಯ ಕರಾರುಗಳ ವಿಷಯದಲ್ಲಿ ದಿನೇ ದಿನೇ ವೃದ್ಧಿಯಾಗುತ್ತಿರುವ ಅವರ ಅತೃಪ್ತಿಯಿಂದಲೂ ತಕರಾರುಗಳ ನಿರ್ಣಯದ ಬಗ್ಗೆ ಪದೇ ಪದೇ ಅವರು ಮುಷ್ಕರದ ಅಸ್ತ್ರವನ್ನು ಹೂಡುತ್ತಿರುವುದರಿಂದಲೂ ನಮ್ಮ ಕಾರಖಾನೆಗಳ ಉತ್ಪಾದನದ ವೇಗ ಕುಂಠಿತವಾಗಿದೆ. ಆದುದರಿಂದ ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ ಬಂಡವಾಲಿಗ ಹಾಗೂ ಕೂಲಿಕಾರರಲ್ಲಿ ಯುಕ್ತವಾದ ಒಪ್ಪಂದವಾಗಬೇಕಾದ್ದು ಅತ್ಯಂತ ಅವಶ್ಯಕ. ಯಾವಾಗಲೂ ಕೂಲಿಕಾರರದೇ ತಪ್ಪೆಂದೂ ಬಂಡವಾಲಿಗರದೇ ಸರಿಯೆಂದೂ ನಾನು ಸೂಚಿಸಬಯಸುವದಿಲ್ಲ. ವಿತರಣ ವಿಧಾನವನ್ನು ವಿವೇಚಿಸುವ ಮೊದಲು ಸಂಪತ್ತನ್ನು ಅರ್ಜಿಸಬೇಕೆಂಬ ಅಭಿಪ್ರಾಯಕ್ಕೆ ನಾನು ಒಪ್ಪಿಗೆ ಕೊಡುತ್ತೇನೆ; ಆದರೆ ಈ ಜಟಿಲ ಸಮಸ್ಯೆಯ ಪರಿಹಾರಕ್ಕೆ ಬಂಡವಾಲಿಗರು ಹೆಚ್ಚು ಔದಾರ್ಯ ತೋರಿ ವಿಚಾರ ವಿನಿಮಯ ಮಾಡಿ ಕಾರ್ಯಪ್ರವೃತ್ತರಾಗುವುದು ಅವಶ್ಯವೆಂದು ನಾನು ಇಲ್ಲಿ ಹೇಳದಿರಲಾರೆ. ಮೊನ್ನೆ ಮೊನ್ನೆ ನಾನು ಹೇಳಿದಂತೆ ಕೂಲಿಕಾರರ ಹಕ್ಕು ಸಾಧನೆಗಳನ್ನೂ ಬಂಡವಾಲಿಗರ ಕರ್ತವ್ಯ ಸಹಾಯಗಳನ್ನೂ ಹೊಸ ರೀತಿಯಿಂದ ಹೊಂದಿಸಬೇಕಾದರೆ ಪೂರ್ವ ಸಿದ್ಧವಾದ ಆರ್ಥಿಕವಾದಗಳನ್ನು ಬದಿಗಿಟ್ಟು, ಸಾಂಪ್ರದಾಯಿಕ ಸಾಮಾಜಿಕ ನೀತಿಗಳನ್ನು ಮೂಲೆಗೊತ್ತಿ, ದೇಶದ ಇಂದಿನ ಅನಿವಾರ್ಯ ಅವಶ್ಯಕತೆ ಮತ್ತು ಕೂಲಿಕಾರರ ಯುಕ್ತವಾದ, ನ್ಯಾಯವಾದ ಬೇಡಿಕೆ ಇವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾವು ಮುನ್ನಡೆಯಬೇಕಾಗಿದೆ. ನೂತನ ಸರಕಾರಕ್ಕೆ ಬಂಡವಾಲ, ಕಾರಖಾನೆ ಮುಂತಾದ ಎಲ್ಲ ವಿಧದ ಆರ್ಥಿಕ ಉತ್ಪಾದಕ ಕ್ಷೇತ್ರಗಳಮೇಲೂ ನಿಯಂತ್ರಣವಿಡಲು ಅಧಿಕಾರವಿದೆಯೆನ್ನಲಾಗುತ್ತದೆ. ಹಾಗಿದ್ದರೆ ತಾನು ಕೂಲಿಕಾರರ ಮೇಲೂ ನಿಯಂತ್ರಣ ವಿಡುವ ಹೊಣೆಯನ್ನು ಹೊರಲೇಬೇಕಾಗುತ್ತದೆಂಬುದನ್ನು ಅದು ಮನ್ನಿಸಬೇಕು. ಇಲ್ಲದಿದ್ದರೆ ಬಂಡವಾಲ ಕೂಲಿಗಳ ಸಂಬಂಧ ಸುಧಾರಿಸದು, ಉತ್ಪನ್ನ ಹೆಚ್ಚದು, ದೇಶದ ಇಂದಿನ ಬೇಡಿಕೆಯನ್ನು ಪೂರಯಿಸಲಾಗದು.

ಬ್ರಿಟಿಶರನ್ನು ಕಂಡುಕಲಿಯಬೇಕು


ಪ್ರಮುಖ ಕೈಗಾರಿಕೆಗಳಲ್ಲಿ ಇಂಗ್ಲಂಡಿನ ಕೂಲಿಕಾರ ಸರಕಾರ ಸ್ವತಃ ದಿಗ್ದರ್ಶನವನ್ನು ಕೂಡ ಮಾಡುತ್ತಿರುವುದು ಸ್ತುತ್ಯವಾಗಿದೆ. ನಾವು ಕೇಳುವುದಿಷ್ಟೆ: ಕೂಲಿಕಾರರ ಮತ್ತು ಬಂಡವಾಲಿಗರ ಸಂಬಂಧ ಸುಧಾರಿಸಬೇಕು, ಉತ್ತಮಗೊಳ್ಳಬೇಕೆಂಬುದು; ಅದಕ್ಕೆ ನಮ್ಮ ಸರಕಾರ ನೆರವಾಗಬೇಕು. ಇಲ್ಲಿ ಒಂದು ವಿಷಯವನ್ನು ನಿಮ್ಮ ಮುಂದಿಡಲು ಸಂತೋಷವಾಗುತ್ತದೆ: ದೇಶದಲ್ಲಿಯ ಸದ್ಯದ ಗೊಂದಲ ಕಳೆದ ಮರುಕ್ಷಣದಲ್ಲಿ ಮಹಾಮಂಡಲವು ತ್ರಿಪಕ್ಷ ಸಮ್ಮೇಲನವೊಂದನ್ನು ಕೂಡಿಸಲು ಕೂಲಿಗರಿಗೆ ಕೇಳಿಕೊಂಡಿದೆ. ಅದರಿಂದ ಸದ್ಯದ ವೈಮನಸ್ಯವಿಲ್ಲದಂತಾಗಿ ಯಶಸ್ವಿಯಾಗಿ ಕೈಗಾರಿಕೆಗಳನ್ನು ನಡೆಸಲನುವು ದೊರೆಯುವುದೆಂದು ಆಶಿಸಲಾಗಿದೆ.

ದಂಗೆಗಳಿಂದಾದಹಾನಿ

ಪಂಜಾಬು ಮುಂತಾದ ಭಾಗಗಳಲ್ಲಾದ ದಂಗೆ ದರೋಡೆ ಕೊಲೆಸುಲಿಗೆಗಳಿಂದಾದ ಹಾನಿ ಅವರ್ಣನೀಯವಾದುದು. ಅದರಿಂದಾದ ಅಪಾರ ನಷ್ಟವನ್ನು ತುಂಬಿಕೊಳ್ಳಬೇಕಾದರೆ ನಾವು ಕೈ ಕಟ್ಟಿಕೊಂಡು ಅಳುತ್ತ ಕುಳಿತುಕೊಳ್ಳದೆ ಯೋಚಿಸಬೇಕು, ಯೋಜಿಸಬೇಕು ಮತ್ತು ಆಚರಿಸಬೇಕು.

ಕಳೆದ ಮುಂಗಡ ಪತ್ರದ ಸೂಚನೆಗಳಿಂದ ಹೊಸ ಉದ್ಯಮಗಳಲ್ಲಿ ಬಂಡವಾಲ ...

—[illegible]



ಮುಸುಕುತೆರೆ

ಬರೆದವರು ರಾಯಚೂರಿನ ಸಂಗಡಿಗರು. ಪ್ರಕಾಶಕರು ಸಂಗಡಿಗರ ಸಮಿತಿ ರಾಯಚೂರು. ಪುಟ ೧೧೯, ಬೆಲೆ ರೂ. ೧॥

'ಮುಸುಕುತೆರೆ' ಯಲ್ಲಿ ೧೭ ಕವನಗಳು, ೭ ಕತೆಗಳು, ೨ ಹರಟೆಗಳು ಮತ್ತು ೧ ಪ್ರಬಂಧ ಇವೆ. ಕವನಗಳಲ್ಲಿ ಅಲ್ಲಲ್ಲಿ ಕಾಣುವ ಛಂದೋ ವಿಶ್ಲೇಷ; ಗಂಗೆಯೊಡಲ, ಅವಕೊಡೆಯು, ತಪ್ಪನುಟ್ಟಿಪುದು ಮುಂತಾದ ಕೆಲವು ಅಪಶಬ್ದ ಪ್ರಯೋಗ ಇವುಗಳನ್ನು ಳಿದರೆ ಗುಣಾಂಶಗಳೇ ಹೆಚ್ಚಾಗಿವೆಯೆನ್ನಬಹುದು. ಕವನಗಳ ವಸ್ತು ಮತ್ತು ಭಾವಗಳು ಅತ್ಯಾಧುನಿಕವಿದ್ದು ಸ್ಫುಟವಾದ ಶೈಲಿಯಿಂದ ಪ್ರಕಾಶಿಸಲ್ಪಟ್ಟದ್ದರೂ ಭಾವಾವೇಶ ಕಡಿಮೆ. ಈ ಕವಿಗಳು ತಕ್ಕರಿದ್ದು ಮುಂದೆ ಇವರಿಂದ ಉತ್ತಮ ಕವಿತೆಗಳನ್ನು ನಿರೀಕ್ಷಿಸಬಹುದೆಂದು ಯಾರಾದರೂ ಹೇಳುವಂತಿದೆ. ಕಥೆಗಳಲ್ಲಿ 'ಶಿವರಾತ್ರಿ', 'ಸಾಹಿತಿಯ ಸನ್ಮಾನ' ಮೊದಲಾದವು ಚೆನ್ನಾಗಿವೆ. ಹರಟೆಗಳೂ ಸಾಧಾರಣ ಓದುವಂತಿವೆ. ಪ್ರಬಂಧ ಸೊಗಸಾಗಿದೆ. ಆದುದರಿಂದ ಒಳ್ಳೆಯ ಅಧುನಿಕ ಭಾವಗಳನ್ನು ವ್ಯಕ್ತಪಡಿಸುವ ಲೇಖನಗಳ ಸಂಕಲನವಾದ ಈ ಹೊತ್ತಿಗೆಯನ್ನು ಕನ್ನಡಿಗರೆಲ್ಲರೂ ಸ್ವಾಗತಿಸುವರೆಂದು ಹಾರೈಕೆ.

ಕನ್ನಡದಲ್ಲಿ ವಿಡಂಬನ ಸಾಹಿತ್ಯ

ಲೇಖಕರು ಶ್ರೀ ಎಚ್. ಎಸ್. ಕೃಷ್ಣಸ್ವಾಮಿ. ಪ್ರಕಾಶಕರು ಎಸ್ ಎಸ್ ಎನ್ ಬುಕ್ ಡಿಪೊ, ಬೆಂಗಳೂರು ನಗರ. ಪುಟ ೩೫, ಬೆಲೆ ೬ ಆಣೆ.

ಚಿಕ್ಕದಾದರೂ ಮುನ್ನುಡಿಗಾರರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಹೇಳಿರುವಂತೆ ಪುಸ್ತಕದಲ್ಲಿ ವಿಡಂಬನ ಸಾಹಿತ್ಯವನ್ನು ಕುರಿತು ಸಮಗ್ರ ಗ್ರಂಥವೊಂದನ್ನು ರಚಿಸಬಹುದಾದಷ್ಟು ವಿಷಯವಿದೆ. ಕನ್ನಡದಲ್ಲಿ ಅಭ್ಯಾಸಪೂರ್ಣವಾದ ಶಾಸ್ತ್ರೀಯ ಗ್ರಂಥಗಳ ಕೊರತೆಯನ್ನು ನೀಗಿಸಲು ಈ ಪುಟ್ಟ ಹೊತ್ತಿಗೆ ಯಥಾಶಕ್ತಿ ಪ್ರಯತ್ನಿಸುತ್ತದೆ. ಲೇಖಕರ ಸಾರಾಸಾರ ಗ್ರಾಹಿಯಾದ ವಿವೇಕವು ಪ್ರತಿಯೊಂದು ಪ್ರಕರಣದಲ್ಲೂ ಸ್ಫುಟವಾಗಿ ಕಂಡು ಬರುತ್ತದೆ. ವಿಡಂಬನದ ನಾನಾಮುಖ, ಹುಟ್ಟು, ಬೆಳವಣಿಗೆ, ಕನ್ನಡ ಸಾಹಿತ್ಯದಲ್ಲಿಯ ಉದಾಹರಣಗಳು ಈ ಎಲ್ಲವೂ ಶ್ಲಾಘ್ಯವಾಗಿವೆ; ಸಂಧಿ ತೋಚಿತವಾಗಿವೆ. ಗ್ರಂಥಕರ್ತರಿಂದ ಹೀಗೇ ಉತ್ತಮ ಶಾಸ್ತ್ರೀಯ ಪ್ರಬಂಧಗಳನ್ನು ಕನ್ನಡ ನಾಡು ಅಪೇಕ್ಷಿಸುತ್ತದೆಂದು ಧಾರಾಳವಾಗಿ ಹೇಳಬಹುದು. ಮಿದುಳಿನ ಜಾಡ್ಯವನ್ನು ಬದಿಗಿಟ್ಟು ಕನ್ನಡ ವಿದ್ವಾಂಸರು ಇಂತಹ ತೂಕದ ಬರಹಗಳನ್ನು ಮೆಚ್ಚಿ, ಓದಿ, ಅರಗಿಸಿಕೊಳ್ಳುವ ಅಭ್ಯಾಸವನ್ನು ಬೆಳೆಸಿಕೊಂಡು ತಮ್ಮ ಸಂಸ್ಕಾರ ಹಾಗೂ ವಿದ್ವತ್ಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲೆಂದು ಆಶಿಸುತ್ತೇವೆ.

ಚಿತ್ತಿದ ಬೆಳೆ

ಬರೆದವರು ಶ್ರೀ ಕೋ. ಶಿ. ಕಾರಂತರು. ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ ಧಾರವಾಡ. ಪುಟ ೧೨೪, ಬೆಲೆ ರೂ. ೧.

ಇದೊಂದು ನಾಟಕ, ಅವಿದ್ಧ ಪ್ರಯೋಗ. ಇದನ್ನು ನಾಟಕವಾಗಿ ಬರೆಯುವುದಕ್ಕಿಂತ ಕಾದಂಬರಿಯಾಗಿ ಬರೆದಿದ್ದರೆ ಹೆಚ್ಚು ಶೋಭಿಸುತ್ತಿತ್ತು. ಇದರಲ್ಲಿ ಅಂಕವೆಂಬ ಹೆಸರಿನ ಐದು ಅಧ್ಯಾಯಗಳಿವೆ. ಇದರಲ್ಲಿ ಅಭಿನಯಾಂಶ ಬಹಳ ಕಡಿಮೆಯಿರುವುದರಿಂದ ಇದನ್ನು 'ಓದುವ ನಾಟಕ' ಇಲ್ಲವೆ ಚಿಕ್ಕ ಕಾದಂಬರಿಯೆಂದೇ ಓದಬೇಕಾಗುತ್ತದೆ. ಹಾಗೇ ಅದರ ಗುಣದೋಷಗಳನ್ನು ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಮಾತ್ರ 'ಈ ನಾಟಕ' ಚೆನ್ನಾಗಿದೆಯೆನ್ನಬಹುದು. ಅಲ್ಲದೆ ರಸಾವೇಶ, ಭಾವಗಾಂಭೀರ್ಯಗಳು ಕಥಾವಸ್ತುವಿಗೆ ತೀರ ಅಡಿಯಾಳಾಗಿರುವುದರಿಂದ ಇದರಲ್ಲಿ ಕಥಾಕೌತಕವೇ ಪ್ರಧಾನವಾಗಿದೆ; ಅದರಿಂದ ನಾಟಕವೆಂದು ತೆಗೆದುಕೊಂಡು ವಿಮರ್ಶೆಗೆ ಹೊರಡಲು ಸಾಧ್ಯವಿಲ್ಲ.

ಸುರಿತ ಕಾದಂಬರಿಕಾರರಾದ ಶ್ರೀ ಕಾರಂತರು ವಾಸ್ತವಿಕತೆಯ, ಮನುಷ್ಯನಿಗೆ ಸ್ವಾಭಾವಿಕವಾದ ಏಡ್ಡೇಶವುಳ್ಳ ಲಕ್ಷ್ಮಣನನ್ನೂ; ಅಪೂರ್ವವಾಸ್ತವವಾದ, ನವೀನವೂ ಸುಂದರವೂ ಆದ ಸಾಕ್ಷಾರ ಪ್ರತೀಕಾರ ಉದ್ಭಿಜ್ಜನ್ಯ ಪ್ರೇಮವುಳ್ಳ ಶ್ರೀಮತಿಯ ಪಾತ್ರವನ್ನೂ ರಸವತ್ತಾಗಿ ಚಿತ್ರಿಸಿದ್ದಾರೆ. ಇದೊಂದು ಸುಂದರವಾದ, ಮನಃಶಾಸ್ತ್ರ ಸಮಂಜಸವಾದ, ಅಧುನಿಕ ಸಮಾಜಕ್ಕೆ ಪಾಠ ಕಲಿಸತಕ್ಕ ಕಲಾಕೃತಿ. ಸಂಕರರಾಯ ವಸಂತಿಯರು 'ಇಂದಿನ ಸೃಷ್ಟಿ'ಯ ಪ್ರತಿನಿಧಿಗಳು, ತತ್ವವಿವೇಕವಿಲ್ಲದ, ಧೈರ್ಯವಿಲ್ಲದ ಮುದ್ರಿತ... ಸಂಸಾರಿಗರ ಪ್ರತೀಕವಾಗಿದ್ದಾರೆ. ಸುಧಾಕರನು ಯೋಗ್ಯ ಸುಧಾರಕನಾದ ಸವಾಶಿವನ ಪ್ರತಿದ್ವಂದ್ವಿ. ರಸವತ್ತಾಗಿದ್ದೂ ಸುಧಾರಕವಾದ ವಾಸ್ತವವಾದಗರ್ಭಿತವಾದ ಈ ಕಥೆಯನ್ನು 'ನಾಟಕ' ವೆಂದೇಕೆ ಕರೆಯಲಾಯಿತೋ ತಿಳಿಯದು, ನಾಟಕೀಯತೆಯೆಂದರೇನೆಂಬುದನ್ನು ಬಲ್ಲ ಶ್ರೀ ಕಾರಂತರು ಹೀಗೇಕೆ ಮಾಡಿದರೆಂಬುದು ವಿಚಿತ್ರವಾಗಿದೆ. ಕಥಾರಚನೆ ಉತ್ತಮವಿರುವುದರಿಂದ ಇದನ್ನು ಸಂಭಾಷಣಾರೂಪದ ಕಾದಂಬರಿಯೆಂದು ಯಾರೂ ಓದಿ ಆನಂದಿಸಬಹುದು, ಕಾಂತಾ ಸಮ್ಮಿತಿಯ ಉಪದೇಶ ಪಡೆಯಬಹುದು.

ಕಲಿಕರ್ಣ

ಬರೆದವರು ಶ್ರೀ ಜಿ. ವರದರಾಜರಾವ್ ಎಂ. ಎ. ಪ್ರಕಾಶಕರು ಎಸ್ ಎಸ್. ಎನ್. ಬುಕ್ ಡಿಪೋ, ಹೊಸ ಮೂರುವ ಕಟ್ಟೆ, ಬೆಂಗಳೂರು ನಗರ. ಪುಟ (ಪುಸ್ತಕದಲ್ಲಿ ಇರುವವು) ೧೪೮. ಬೆಲೆ ರೂ. ೧॥.

"ಕಲಿಕರ್ಣ" ಎಂಬುದೊಂದು ವಿಮರ್ಶಾತ್ಮಕ ದೃಷ್ಟಿಯಿಂದ ಬರೆದ, ಸುಪ್ರಸಿದ್ಧ ಭಾರತ ವೀರನಾದ ಹಾಗೂ ಕುರುಕ್ಷೇತ್ರ ಕದನದ ಕಟ್ಟಾಳೆನಿಸಿದ ಕರ್ಣನ ದುರಂತ ಜೀವನವನ್ನು ಚಿತ್ರಿಸುವ ನವೀನ ಗ್ರಂಥ. "ಕರ್ಣ ರಸಾಯನ ಮಲ್ತೆ ಭಾರತಂ" ಎಂದು ಪಂಪ ಮಹಾಕವಿ ಕರ್ಣನನ್ನು ಉಲ್ಲೇಖಿಸಿರುವಾಗ ಕರ್ಣನದು ಎಷ್ಟು ಉದಾತ್ತವಾದ ಹಾಗೂ ಕರುಣ ರಸದ ಕಾರಂಜಿಯಂತಿರುವ ಪಾತ್ರವೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಇಂತಹ ಉತ್ಕೃಷ್ಟ ನಾಯಕನಾದ ಕರ್ಣನ ಹುಟ್ಟು, ಬಾಲ್ಯ, ಯೌವನ, ರಣರಸಿಕತೆ, ಸ್ವಾಮಿಭಕ್ತಿ, ಮಾತೃವಾತ್ಸಲ್ಯ ಮುಂತಾದ್ದನ್ನು ಈ ಗ್ರಂಥದಲ್ಲಿ ಹೃದಯಂಗಮವಾಗಿ ವಿವರಿಸಲಾಗಿದೆ. ಕರ್ಣನಿಗೊದಗಿದ ಧರ್ಮ ಸಂಕಟವು ಕಲ್ಲನ್ನಾದರೂ ಕರಗಿಸದಿರದು, ಬೃಹಸ್ಪತಿಯನ್ನಾದರೂ ಮಂಕುಬಡಿಸದಿರದು. ಈಯೆಲ್ಲ ಕರುಣ ಸನ್ನಿವೇಶ ಮತ್ತು ತತ್ಕಾಲದಲ್ಲಿಯ ಪಾಂಡವ ಕುಲದೀಪಕನ ಹೃದಯದ ಹೊಯ್ದಾಟ ಇವುಗಳನ್ನು ಮಾರ್ಮಿಕವಾಗಿ ಇಲ್ಲಿ ಚಿತ್ರಿಸಲಾಗಿದೆ. ಮಹಾಭಾರತದ ಮಹಾಸಮುದ್ರದ ಜಂಝಾವಾತದಿಂದ ಒಡೆದುಹೋದ ಮಹಾನೌಕೆಯಂತಿರುವ ಕಲಿಕರ್ಣನ ದುರಂತ ಜೀವನವನ್ನೋದಿ ಸಹೃದಯರು ಹೃದಯ ಪರಿಮಾರ್ಜನ ಮಾಡಿಕೊಳ್ಳಲೆಂದು ಪುಸ್ತಕವನ್ನು ಸ್ವಾಗತಿಸಿ ಗ್ರಂಥಕರ್ತರಾದ ಶ್ರೀ ಜಿ. ವರದರಾಜರಾಯರ ಲೇಖನಿಗೆ ಅಭಿನಂದನೆಗಳನ್ನರ್ಪಿಸುತ್ತೇವೆ.

ಶ್ರೀ ವೆಂಕಟೇಶ ಮಾಹಾತ್ಮ್ಯ

ಲೇ— ಕೌಜಲಗಿ ಬಂಡಾಚಾರ್ಯರು. ಪ್ರಕಾಶಕರು ಶ್ರೀ ಕೃಷ್ಣ ಪುಸ್ತಕಾಲಯ ಧಾರವಾಡ ಕ್ರೌನ ಅಷ್ಟಪತ್ರದ ೧೦೨ ಪುಟಗಳು ಬೆಲೆ ೧-೪-೦.

ಶ್ರೀ ಭವಿಷ್ಯೋತ್ತರ ಪುರಾಣದಲ್ಲಿ ಶ್ರೀ ವೆಂಕಟೇಶ ಮಾಹಾತ್ಮ್ಯವು ವರ್ಣಿಸಲ್ಪಟ್ಟದ್ದು ಸರ್ವಶ್ರುತ. ೧೫ ಅಧ್ಯಾಯಗಳ ಈ ಪುರಾಣವನ್ನು ಈಗಾಗಲೆ ಹಲವು ಪುಸ್ತಕಗಳನ್ನು ಬರೆದು ಪ್ರಸಿದ್ಧರಾಗಿರುವ ಶ್ರೀ ಕೌಜಲಗಿಯವರು ತಿಳಿಯಾದ ಕನ್ನಡದಲ್ಲಿ ಪರಿವರ್ತಿಸಿದ್ದಾರೆ. ಭಾರತಾಚಾರ್ಯರೆಂದು ವಿಖ್ಯಾತರಾದ ಶ್ರೀ ಶಿತ್ತೂರ ಹುಚ್ಚಾಚಾರ್ಯರು ಇದನ್ನು ಸಂಶೋಧಿಸಿದ್ದಾರೆ. ಅಂದಬಳಿಕ ಈ ಗ್ರಂಥದ ಉಪಯುಕ್ತತೆಯನ್ನು ಬೇರೆ ಹೇಳಬೇಕಿಲ್ಲ. ಸ್ತ್ರೀಪುರುಷ ಮಕ್ಕಳಿಗೆಲ್ಲ ಶ್ರೀನಿವಾಸನ ಮಾಹಾತ್ಮ್ಯವು ತಿಳಿಯಬೇಕೆಂದು ಕಥಾರೂಪದಲ್ಲಿಯೆ ಇದನ್ನು ಪ್ರಸಿದ್ಧಿಸಲಾಗಿದೆ. ಸಂಸ್ಕೃತಾನಭಿಜ್ಞರಿಗೆ ತಿರುಪತಿ ತಿಮ್ಮಪ್ಪನ ಮಾಹಾತ್ಮ್ಯ ತಿಳಿಯಲಿಕ್ಕೆ ಇದು ಒಳ್ಳೆ ಉಪಯುಕ್ತವಾಗಿ ನಿತ್ಯವೂ ಪಾರಾಯಣ ಮಾಡಲು ಯೋಗ್ಯವಾಗಿದೆ. ತಿಮ್ಮಪ್ಪನ ಭಕ್ತರೆಲ್ಲರೂ ಇದನ್ನು ತರಿಸಿಕೊಂಡು ನಿತ್ಯವೂ ಪಾರಾಯಣ ಮಾಡಿ ಅವನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸೂಚಿಸುತ್ತೇವೆ.

ಬೆಳಕಿನ ಬಾಳು

ಲೇಖಕರು:— ದೇಶಪಾಂಡೆ ಮನೋಹರರಾಯರು. ಪ್ರಕಾಶಕರು:— ಮಿಂಚಿನ ಬಳ್ಳಿ ಧಾರವಾಡದ ೪ ನೇ ವರುಷದ ೪ ನೇ ಕುಡಿ- ಪುಟ ೧೫೩, ಬೆಲೆ ರೂ. ೨॥

ಭಾರತದಲ್ಲಿಯ ಮಹರ್ಷಿಗಳು ಮತ್ತು ಶ್ರೀಕೃಷ್ಣನನ್ನು ಮೊದಲ್ಗೊಂಡು ಇಂದಿನ ವರೆಗೆ ಭಕ್ತಿಪಂಥ ಪ್ರತಿಪಾದಕರಾದ ಕೆಲ ಆಚಾರ್ಯರ ತತ್ವ ಮಾರ್ಗಗಳ ಬಗ್ಗೆ ತಿಳಿವನ್ನು ನೀಡುವ ಪುಸ್ತಕವಿದು. ಲೇಖಕರು ಪ್ರತಿಯೊಬ್ಬ ಆಚಾರ್ಯರ ಬಗ್ಗೆ ಆಳವಾಗಿ ಅಭ್ಯಸಿಸಿ ಅದನ್ನರಗಿಸಿಕೊಂಡು ಅದರ ತಿರುಳನ್ನು ಮಾತ್ರ ತಿಳಿಗನ್ನಡದಲ್ಲಿ ನೀಡಿದ್ದಾರೆ. ನಿಜವಾಗಿಯು ತಮ್ಮ ಬಾಳ್ವೆಯನ್ನು ಬೆಳಕಿನದಾಗಿಸಬೇಕಾದರೆ ಅನನ್ಯ ಭಕ್ತಿಯಿಂದ ಪರಮಾತ್ಮನಿಗೆ ಶರಣುಹೊಗುವದೊಂದೇ ಮಾರ್ಗವೆಂಬದನ್ನು ಮನನೀಯವಾಗಿ ಚಿತ್ರಿಸಿದ್ದಾರೆ.

ದೇಶ ಸೇವೆಯೇ ಈಶ ಸೇವೆಯೆಂಬದೊಂದು ಎಲ್ಲೆಡೆಗೆ ಗುಡುಗುತ್ತಿರುವ ಪಡೆಮಾತು. (Slogan) ಇದರಲ್ಲಿಯ ಸಂತ್ಯಾಂಶವೆಷ್ಟು? ಕೆಲ ರಾಜಕಾರಣಪಟುಗಳು ದೇಶ ಸೇವೆಯ ಅಧ್ವರ್ಯುಗಳಾಗಿರುತ್ತಾರೆ. ಅವರ ಸೇವೆಯೇ ದೇಶ ಸೇವೆಯೇ? ಭಿನ್ನಾಭಿಪ್ರಾಯ ಬಿತ್ತಿ ಬೇರೆ ಬೇರೆ ಪಕ್ಷಪಂಗಡಗಳನ್ನು ರಚಿಸುವದು ಅವರ ಮುಖ್ಯ ಮಾರ್ಗ. ಯಾವ ಮಾರ್ಗ ಸರಿಯೆಂದು ಅನುಸರಿಸುವದು? ಯಾರನ್ನು ನೇತಾರರೆಂದು ಹಿಂಬಾಲಿಸುವದು? ಆದರೆ ತನ್ನ ಜೀವನವನ್ನು ಬೆಳಗಿಸಿಕೊಂಡು ಜನತೆಯ ಜೀವನಕ್ಕೂ ಬೆಳಕನ್ನು ನೀಡಲು ಹೆಣಗಾಡುತ್ತಿರುವ ದಾಸಪಂಥವೆಷ್ಟೊಂದು ಆದರ್ಶವಾದುದು? ತಾನು ತೇಜಃಪುಂಜನಾಗಿ ಇತರರಿಗೆ ಆ ತೇಜವನ್ನು ನೀಡುವದೇ ಆದರ್ಶ ಧ್ಯೇಯ. ಜನತೆಯ ಜೀವನದಲ್ಲಿ ದಾಸರು ಮುಟ್ಟಿದ ಆಳವನ್ನು ಮಹಾತ್ಮ ರಾಜಕಾರಣಿಯಾಗಲೀ, ಅರಸ, ಸೇನಾಪತಿಯಾಗಲೀ ಮುಟ್ಟಿದ್ದಾನೆಯೋ? ದಾಸರು, ಶರಣರು, ಜನತೆಯ ಜೀವನದ ರೀತಿಯಲ್ಲಿ, ವಿಚಾರ ಪ್ರಣಾಲಿಯಲ್ಲಿ, ನಿತ್ಯದ ರೀತಿ ನೀತಿಗಳಲ್ಲಿಯೇ ಕ್ರಾಂತಿ ಉತ್ಕ್ರಾಂತಿಗಳನ್ನು ಮಾಡಿ ತೋರಿಸಿದ್ದಾರೆ. ಸಾಮಾನ್ಯ ಜನತೆಯ ತಿಳಿವಿಗೆ ಬೆಳಕನ್ನು ನೀಡಿದ್ದಾರೆ. ಈ ಸೇವೆಯೇ ನಿಜವಾದ ಸೇವೆಯಲ್ಲವೇ? ಈ ಮಾರ್ಗವನ್ನೇ ಪ್ರತಿಯೊಬ್ಬನೂ ಏಕೆ ಅನುಸರಿಸಬಾರದು? ಈ ಮಾರ್ಗವನ್ನನುಸರಿಸಿದ ಕೆಲವರ ಯತ್ನ ಪ್ರಯತ್ನಗಳನ್ನು, ಅನುಭವಗಳನ್ನು ಮನೋಹರರಾಯರುಒಳ್ಳೆಯ ಮನೋಹರವಾಗಿ ಬಣ್ಣಿಸಿದ್ದಾರೆ. ದೇಶಪಾಂಡೆ ಮನೋಹರರಾಯರ ಕನ್ನಡ ಭಾಷೆ ಕುದುರಿದ ಭಾಷೆ, ಕುಳಿತ ಭಾಷೆ. ಕನ್ನಡದಲ್ಲಿ ಅವರದು ಪಳಗಿದ ಕೈ. ಅದ್ದರಿಂದ ಪುಸ್ತಕವು ಸರ್ವ ವಿಧದಿಂದಲೂ ಉತ್ಕೃಷ್ಟವಾಗಿದೆ. ಕನ್ನಡ ಸಾಹಿತ್ಯಕ್ಕೆ ಇದೊಂದು ಅಮೌಲ್ಯ ಕಾಣಿಕೆಯೆಂದೇ ಹೇಳಬಹುದು. ಆದರೂ ಪರಮಹಂಸ, ಅರವಿಂದ ಘೋಷ ಮೊದಲಾದಂಥ ಅಧುನಿಕ ಭಕ್ತರ ವಿಷಯವಾಗಿಯೂ ಬರೆದು ಸೇರಿಸಿದ್ದರೆ ಪುಸ್ತಕವು ಇನ್ನೂ ಹೆಚ್ಚು ಪರಿಪೂರ್ಣವಾಗುತ್ತಿತ್ತೆಂದು ಸೂಚಿಸದಿರಲಾರೆವು. ಅಥವಾ ಅಂತಹ ಇನ್ನೊಂದು ಭಾಗವನ್ನು ಬರೆದು ಪ್ರಕಟಿಸಲು ಅವರಿಗೆ ಬಿನ್ನವಿಸುತ್ತೇವೆ.

ಬಾಡದ ಹೂವು

ಬರೆದವನು ಶ್ರೀ ಎಸ್ ಅನಂತನಾರಾಯಣ. ಪ್ರಕಾಶಕರು ಸಾಹಿತ್ಯ ಮಂದಿರ ಮೈಸೂರು. ಪುಟಗಳು ೬೦, ಬೆಲೆ ರೂ. ೧.

'ಬಾಡದ ಹೂವಿ'ನಲ್ಲಿ ೩೭ ಕವನಗಳಿವೆ. ಇದು ಕವಿಯ ಪ್ರಥಮ ಪ್ರಯತ್ನವೆಂದು ಕಂಡಕೂಡಲೆ ಹೇಳಬಹುದು. 'ಕಾರ್ಖಾನೆಯಚ್ಚಂತೆ ಮಾಡಿ ಜೀವನವೆಲ್ಲ' ಎಂಬ ಕವಿಯ ಮಾತಿನಂತೆ ಅಚ್ಚಿಸುತ್ತಿರುವ ಇಂದಿನ ಕವನಗಳ ಗದ್ಯಗಂಧ, ಛಂದೋ ಭಂಗ, ವಾಗಾಡಂಬರದ ಭಾವಶೂನ್ಯತೆ ಮತ್ತು ಅಸ್ಪಷ್ಟತೆ ಇವು ಅಲ್ಲಲ್ಲಿ ತಲೆದೋರಿವೆ. ಪದ್ಯಗಳ ಸರಳತೆ ಗುಣವಾಗಬಹುದಾದ ಸ್ಥಳಗಳಲ್ಲಿ ಗುಣವೆನಿಸಿದೆ. 'ಹೊನ್ ಪದಕ ವೇಕೆ?' ಎಂದು ಹೊನ್‌ಪದಕ ಪಡೆದ ಬಾಡದ ಹೂವಿನ ಕರ್ತನು ಬರೆವುದು ವಿನಯ ಸೂಚಕವಾಗಿದೆ; ಯಥಾರ್ಥವೂ ಒಮ್ಮೆ ಆಗಬಹುದು ಕೆಲವೆಡೆ. 'ಹೆಣ್ಣಿನ ಕಣ್ಣಿನ ಕರುಣೆಯ ಭರದಿ. ಕವಿಯ ಕಣ್ಣು ತೆರೆಯಿತಿತ್ತು.' ಎಂದು ಕವಿ ಹೇಳಿರುವುದು ಇಂದಿನ ಅನೇಕ ತರುಣಕವಿಗಳ ವಿಷಯದಲ್ಲಿ ಅರ್ಥಪೂರ್ಣವೆನಿಸುವಂಥದಾಗಿದೆ. 'ಹಿಗ್ಗುವೆಯೇತಕೆ ಚೆಲುವಿಗೆ ಹೆಣ್ಣೇ? ಎಂದ ಕವಿಯ ಮಾತಿಗಿಂತ ಮೇಲಿನ ಮಾತು ಅರ್ಥವಯುಕ್ತವಾಗಿದೆ. ಆ ಬಗ್ಗೆ ಕವಿಗೆಭಿನಂದನೆ. 'ಬಾಡದ ಹೂವಿ'ನ ಕಥಾನಾಯಕನನ್ನು ಹೆಸರಿಸಿದ್ದಕ್ಕೆ, ನ್ಯಾಯಕತೆಗಳಲ್ಲಿಲ್ಲದ... ಸಂಪೂರ್ಣ ಚಂದವೆನಿಸುತ್ತಿತ್ತು. ಒಟ್ಟಿನಲ್ಲಿ ಕವನ ಸಂಗ್ರಹ ಅಚ್ಚುಹಾಕಿದ ಸಾಹಿತ್ಯ ಮಂದಿರದ ಶ್ರೀ ದೊರೆಸ್ವಾಮಿಯವರ ಪ್ರಯತ್ನ ಪ್ರೋತ್ಸಾಹಾರ್ಹವೆನ್ನದಿರಲಾಗದು.

ಮೇಘಪುರ

ಬರೆದವರು ಶ್ರೀ ಕುವೆಂಪು. ಪ್ರಕಾಶಕರು ಕಾವ್ಯಾಲಯ ಮೈಸೂರು ಅವರು. ಪುಟ ೨೪, ಬೆಲೆ ಆರಾಣೆ.

ಇದೊಂದು ದೊಡ್ಡವರು ಚಿಕ್ಕವರಿಗಾಗಿ ಬರೆದ ಕವನ ಸಂಗ್ರಹ. ಆದುದರಿಂದ ವಯಸ್ಕರಾದ ಓದುಗರು ಇದಕ್ಕಧಿಕಾರಿಗಳಲ್ಲ; ಎಳೆಯ ಮಕ್ಕಳಿಗೆ ನೀರಿಳಿಯದ ಗಂಟಲಲ್ಲಿ ತುರುಕಿದ ಕಡುಬು. "ನಿತ್ಯಕಿಶೋರತೆ ನಿದ್ರಿಸುತಿರುವುದು ವಿಸ್ಮೃತ ನಾಕದಲಿ; ಮುಕ್ತ ಚೈತನ್ಯದಿಂ ಪೊರಮಡುವ ಲೀಲೆಯಂ ಬಂಧಿಪೆಯ ಜಡಶಾಸ್ತ್ರ ನಿಯಮದಿಂದ; ಎಲ್ಲವನು ಮೀರಬಲ್ಲೆ ನೀ । ಧೀರ; ರಶ್ಮಿರೂಪ ಮಿತ್ರವೃಂದ," ಮುಂತಾದ ಗಂಭೀರ ಪದಭಾವಪಾಂಡಿತ್ಯದಿಂದ ಮಕ್ಕಳಿಗೆ ಅಜೀರ್ಣ ಉಂಟಾಗದಿರದು. ಇನ್ನು ಈ ಕವೀಶ್ವರರ 'ಯಮ ನಿಯಮ ಬೇಡ, ಆಚಾರ ಬೇಡ, ಆಟವನು ಕಸಬಾಗಿ ಮಾಡಬೇಡ; ಪಂಡಿತರ ಬಲೆಯೊಳಗೆ ಸಿಲುಕದಿರಿ ನೀವು, ಖಂಡಿಪರು ಶೋಧಿಸಲು" ಎಂಬ ಅಪ್ರಸ್ತುತವಾದ ಮಾತುಗಳು ಸದಾ ಇವರ ಹೃದಯಸಮುದ್ರವನ್ನು ಮಥಿಸುತ್ತಿರುವ ಪಂಡಿತ ಭಯ, ತಮ್ಮ ಶಾಸ್ತ್ರಜ್ಞಾನದ ಅಭಾವವನ್ನರಿತುಕೊಂಡ ಆತ್ಮಾಧಮಭಾವ ಇವನ್ನು ಹೊರಗೆಡುಹುತ್ತಿರುವದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಹೀಗೆ ಆಟವನ್ನು (ಕಾವ್ಯ ಬರೆವ ಕಲೆಯನ್ನು) ಕಸಬಾಗಿ ಮಾಡಿಕೊಂಡು ಕವಿಗಳು ಮಾತಿನಿಂದ ಕೃತಿಗೆ ಮುನ್ನೂರು ಮೈಲು ಅಂತರವಿಟ್ಟಿರುವುದು ಶ್ಲಾಘ್ಯವೆನ್ನಲಾ...

ಮಕ್ಕಳ ಓದು

ಬರೆದವ:— "ಭಗವಂತ"

ಚುಟುಕ ೧

ಇಂದು ಬೆಳಿಗ್ಗೆ ನಾವು ನಾಲ್ಕಾರು ಜನ ಗೆಳೆಯರು ಆ ಮಾತು ಈ ಮಾತು ಹರಟುವಾಗ ಹರಟೆಯ ಹಕ್ಕಿ ಹಾರುತ್ತ ಹಾರುತ್ತ ಸಾಲಿಯ ಕುಂಬಿಯ ಮೇಲೆ ಇಳಿಯಿತು. ಒಬ್ಬರು "ಈಗ ನೋಡಿರಿ ಸಾಲಿಯ ಅಭ್ಯಾಸದ ಸ್ಟಾಂಡರ್ಡ ಬಹಳ ಕಡಿಮೆಯಾಗಿದೆ ಅದಕ್ಕೆ ಮಾಸ್ತರರೇ ಕಾರಣ" ಎಂದು ಸುರುವು ಮಾಡಿದರು. ಅದಕ್ಕೆ ಮಾಸ್ತರರ ಪಕ್ಷ ವಹಿಸಿ ಮತ್ತೊಬ್ಬರು "ನೀವು ಅವರಿಗೆ ಸಾಕಷ್ಟು ಸಂಬಳ ಕೊಡುವದಿಲ್ಲ. ಅದಕ್ಕೆ ಅವರು ಎರಡನೆ ಉದ್ಯೋಗಗಳನ್ನು ಕೈಕೊಳ್ಳಬೇಕಾಗುತ್ತದೆ" ಎಂದರು. ಮೊದಲನೆಯವರು "ಮಾಸ್ತರರು ದುಡ್ಡಿಗೆ ಆಶೆ ಮಾಡಬಾರದು. ಹಿಂದಿನ ಕಾಲಕ್ಕೆ ಋಷಿಗಳು ಹೇಗಿದ್ದರು?" ಎಂದು ವಾದವನ್ನು ಮುಂದೆ ಚಾಚಿದರು. ಗುಂಪಿನಲ್ಲಿಯವರೊಬ್ಬರು "ಅಲ್ಲರಿ ಮಾಸ್ತರರೆಂದ ಮಾತ್ರಕ್ಕೆ ಅವರೂ ಮನುಷ್ಯರಲ್ಲವೆ? ಅವರಿಗೆ ಹೊಟ್ಟೆ ಬಟ್ಟೆ ಮನೆಮಾರು ಹೆಂಡಿರು ಮಕ್ಕಳು ಸಂಸಾರಗಳಿಲ್ಲವೇ? ಅದಕ್ಕೆ ದುಡ್ಡು ಬೇಡವೇ?" ಎಂದರು. ಅದಕ್ಕೆ ಮಹನೀಯರೊಬ್ಬರು ಅಯ್ಯಾ ಇದೆಂತಹ ಅನ್ಯಾಯ, ಅವಿಚಾರ? ಶಿಕ್ಷಣವೆಂದರೆ ದುಡ್ಡು ತಕ್ಕೊಂಡು ಕಲಿಸುವ ಉದ್ಯೋಗವಲ್ಲ; ಅದು ಬಹಳ ಉದಾತ್ತವಾದ ಧರ್ಮ. ಹೊಟ್ಟೆ ಹೊರಕೊಳ್ಳುವ ಧಂದೆಯಲ್ಲ. ಆದರೆ ಕಾಲ ಮಹಿಮೆ ಹೀಗಾಗಿದೆ" ಎಂದರು. ಇನ್ನೊಬ್ಬರು "ಹಾಗಾದರೆ ಇಂಥ ಹದಗೆಟ್ಟ ಸಾಲೆಗಳಿಗೆ ನಿಮ್ಮ ಮಕ್ಕಳನ್ನು ಏಕೆ ಕಳಿಸುವಿರಿ? ಸುಮ್ಮನೆ ಬಿಡಿಸಿ ನಿಮಗೆ ಬೇಕಾದ ಮಾಸ್ತರರು ಬೇಕಾದಂಥ ಸಾಲೆ ಆಶ್ರಮ ನೀವೇ ಮಾಡಿಕೊಳ್ಳಬಹುದಲ್ಲವೆ?" ಉತ್ತರವಾಗಿ ಅವರು "ಮಾಸ್ತರರು ಸಾಲಿ ತಾವೇ ಬಂದು ಮಾಡಬೇಕು. ಇಂಥ ಪರಿಯಿಂದ ಯಾಕೆ ನಡಿಸಬೇಕು? ಅವರು ಬಂದ ಮಾಡಿದರೆ ನಾವು ಕಳಿಸುವದಿಲ್ಲ" ಎಂದರು.

ಮೇಲಿನ ಸಂಭಾಷಣೆಯಲ್ಲಿ ಭಾಗ ವಹಿಸಿದ ಮಹನೀಯರು ಅಶಿಕ್ಷಿತರಲ್ಲ. ಅವಿವೇಕಿಗಳೆಂದು ಯಾರೂ ಯಾವ ಕಾಲದಲ್ಲಿಯೂ ಹೇಳುವ ಧೈರ್ಯ ಮಾಡಲಾರರು. ಸಂಭಾಷಣೆಯೆಲ್ಲ ವಿನೋದದ ಧಾಟಿಯಲ್ಲಿ ಹರಿಯುತ್ತಿದ್ದಿತು. ಆದರೆ ನನಗೆ ಮಾತ್ರ ಆ ಮಾತು ಅಲ್ಲಿಗೆ ಮುಗಿಯಲಿಲ್ಲ. ಶಿಕ್ಷಣದ ವಿಷಯ, ಪದ್ಧತಿ ಸದ್ಯದ ಲೋಪದೋಷಗಳು ಅವುಗಳ ಕಾರಣಗಳು ಮುಂತಾದ ವಿಚಾರ ತರಂಗಗಳು ತಲೆಯಲ್ಲಿ ಏಳಹತ್ತಿದವು. ನನಗೆ ಹೊಳೆದ ನಾಲ್ಕು ಮಾತುಗಳನ್ನು ತಮ್ಮ ಮುಂದೆ ಆಗಾಗ ಇಡಲು ಪ್ರಯತ್ನ ಮಾಡುವೆ. ಅಭಿಜ್ಞರಾದ ಓದುಗರು ಅವನ್ನು ವಿಮರ್ಶಿಸಿ, ಖಂಡಿಸಿ, ಪೋಷಿಸಿ ತಮ್ಮ ವಿಚಾರಗಳನ್ನು ಪ್ರಕಟಗೊಳಿಸುತ್ತ ಹೋದರೆ ಶಿಕ್ಷಣದಂತಹ ಮಹತ್ವವಾದ ಸಾಮಾಜಿಕ ಅಂಗವನ್ನು ಪೂರ್ಣಗೊಳಿಸಲು ಅನುಕೂಲವಾಗುವದು.

ಮೈಸೂರ ಕಾಂಗ್ರೆಸಿನ ವಿಜಯ

೧೯೪೭ ಅಕ್ಟೋಬರ ೧೩ ಮೈಸೂರ ಸಂಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನ. ಮೈಸೂರ ಕಾಂಗ್ರೆಸು ಹತ್ತುವರುಷಗಳ ವರೆಗೆ ಅವಿಶ್ರಾಂತ ಹೋರಾಡಿ, ತ್ಯಾಗ ಬಲಿದಾನ ಮಾಡಿ ಸಂಪಾದಿಸಿದ ಸ್ವಾತಂತ್ರ್ಯ ಶುಭದಿನವದು. ಮೈಸೂರ ಸರಕಾರದ ಪ್ರತಿಗಾಮಿ ಧೋರಣೆಯನ್ನು ಪ್ರತಿಭಟಿಸಿ ಕಾಂಗ್ರೆಸು ಈ ಸಲ ಅಲ್ಪಕಾಲಿಕ ಆದರೆ ಅತ್ಯಂತ ವೇಗದ ಅಹಿಂಸಾತ್ಮಕ ಹೋರಾಟವನ್ನು ಪ್ರಾರಂಭಿಸಿ ಅಲ್ಪಾವಧಿಯಲ್ಲಿಯೇ ಪೂರ್ಣ ವಿಜಯವನ್ನು ಸಂಪಾದಿಸಿತು. ಸಂಸ್ಥಾನಗಳ ಸ್ವಾತಂತ್ರ್ಯ ಹೋರಾಟದಲ್ಲಿ ಇದೊಂದು ಅಪೂರ್ವ ವಿಜಯ. ಸರಕಾರವು ಈ ರೀತಿ ಪೂರ್ಣ ಸೋಲನ್ನೊಪ್ಪಿಕೊಂಡ ಉದಾಹರಣೆಗಳು ಅತಿ ವಿರಳ. ಮಹಾತ್ಮರ ಅನುಯಾಯಿಯಾದ ಕಾಂಗ್ರೆಸು ಅಹಿಂಸಾತ್ಮಕ ಧೋರಣೆಗನುಸರಿಸಿ ಸತ್ಯದ ಶಕ್ತಿಯನ್ನೇ ಆಧಾರವಾಗಿಟ್ಟುಕೊಂಡು ಹೋರಾಡಿತು. ಸರಕಾರದ ಪೇದೆಗಳು ಸತ್ಯಾಗ್ರಹಿಗಳ ರಕ್ತಹರಿಸಿದರೂ ಸತ್ಯಾಗ್ರಹಿಗಳು ಮಾತ್ರ ಅವರ ಕೂದಲನ್ನು ಕೊಂಕಿಸಲಿಲ್ಲ. ಹಿಂಸೆಯ ಕಲಂಕ ತಟ್ಟದಂತೆ ಈ ಪ್ರಚಂಡ ಹೋರಾಟವನ್ನು ಸಾಗಿಸಿದ ಮೈಸೂರಿನ ಪ್ರಜೆಗಳು ಅಭಿನಂದಾರ್ಹರಿರುವರು. ಅದರಲ್ಲಿಯೂ ಸತ್ಯಾಗ್ರಹ ಸಮರದಲ್ಲಿ ಹುರುಪಿನಿಂದ ಧುಮುಕಿ ವಿಚಾರಹೀನ ಕೆಲವು ಹಿರಿಯರಲ್ಲಿ ಮತ್ತು ಅಧಿಕಾರಿಗಳಲ್ಲಿ ವಿವೇಕ ತುಂಬಿದ ಮೈಸೂರಿನ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ ಸರಿ. ಮೈಸೂರ ಸರಕಾರವು ಕೊನೆಯಲ್ಲಿ ಪ್ರಜಾಭಿಪ್ರಾಯಕ್ಕೆ ತಲೆವಾಗಿ ಅವರ ಬೇಡಿಕೆಯನ್ನು ಚಾಚೂ ತಪ್ಪದಂತೆ ಪೂರೈಸಿತು. ಗೌರವ ಕಳೆದುಕೊಂಡು ಶರಣು ಬರುವದಕ್ಕಿಂತ, ಮೊದಲೇ ಗೌರವದಿಂದ ಕೊಟ್ಟಿದ್ದರೆ ಮೈಸೂರಿನ ಕೀರ್ತಿ ಪರಿಮಳದ ಸುವಾಸನೆ ಇನ್ನಷ್ಟು ಹಬ್ಬುತಿದ್ದಿತಲ್ಲದೆ ಕಡಿಮೆಯಾಗುತ್ತಿದ್ದಿಲ್ಲ. ಆಗ ಸರಕಾರಕ್ಕೆ ಅಂಥ ತಿಳವಳಿಕೆ ಬಾರದಿದ್ದುದು ವಿಷಾದಕರ. ಮೈಸೂರು ಕಾಂಗ್ರೆಸು ಮೇ ತಿಂಗಳಿಂದ ಹೇಳುತ್ತ ಬಂದಿತ್ತು, ಸಾಕಷ್ಟು ಮುನ್ನೆಚ್ಚರಿಕೆಯನ್ನೂ ಕೊಟ್ಟಿತ್ತು. ಸರಕಾರದವರು ನಾಡಿನ ನಾಡಿಗಳ ಸ್ಪಂದವನ್ನರಿತು ಹೊಣೆಗಾರ ಸರಕಾರವನ್ನು ಕೊಟ್ಟು ಆಗಸ್ಟ ೧೫ನೇ ದಿನ ಹಿಂದೀ ಒಕ್ಕೂಟ ಧ್ವಜವನ್ನು ಗೌರವಿಸಿದ್ದರೆ, ನಿರಪರಾಧಿಗಳ ರಕ್ತಪಾತವಾಗುತ್ತಿದ್ದಿಲ್ಲ. ಇರಲಿ, ಕೆಟ್ಟಮೇಲಾದರೂ ಬುದ್ಧಿ ಬಂದುದು ಸಂತೋಷ. ಇದು ಮೈಸೂರಿನ ಮುಂದಿನ ಸರ್ವತೋಮುಖ ಪ್ರಗತಿಗೆ ಕಾರಣವಾಗಲಿ.

ಒಪ್ಪಂದದ ಕರಾರುಗಳು

ಮೈಸೂರ ಕಾಂಗ್ರೆಸ ಮತ್ತು ಸರಕಾರದ ನಡುವೆ ಆದ ಒಪ್ಪಂದದ ಕರಾರುಗಳು ಬಹಳವಿಲ್ಲ. ಮಂತ್ರಿ ಮಂಡಲ ಹಾಗೂ ಘಟನಾ ಸಮಿತಿಯ ರಚನೆಗೆ ಅವು ಸಂಬಂಧಿಸಿರುತ್ತವೆ. ಈಗಿನ ಮಂತ್ರಿಮಂಡಲವನ್ನು ವಿಸರ್ಜಿಸಿ ಒಂಬತ್ತು ಲೋಕನಿಯುಕ್ತರ ಮಂತ್ರಿ ಮಂಡಲ ಸ್ಥಾಪಿಸಬೇಕು. ಇದರಲ್ಲಿ ಆರು ಸ್ಥಾನಗಳು ಕಾಂಗ್ರೆಸಿಗೂ ಉಳಿದ ಮೂರು ಕಾಂಗ್ರೇಸತರರಿಗೂ ಕೊಡಲ್ಪಡುವವು. ಮಂತ್ರಿಗಳನ್ನು—ಕಾಂಗ್ರೆಸ್ಸೇತರ ಮಂತ್ರಿಗಳನ್ನು ಸಹ ಕಾಂಗ್ರೆಸಿನ ಸಲಹೆಯಂತೆ ಆರಿಸಲಾಗುವದು. ಕಾಂಗ್ರೆಸಿನವರೊಬ್ಬರು ಮುಖ್ಯ ಮಂತ್ರಿಗಳಾಗುವರು. ಈ ಮಂತ್ರಿ ಮಂಡಲವು ದಿವಾಣರನ್ನು ಕೂಡಿಕೊಂಡು ಸಂಯುಕ್ತ ಹೊಣೆಗಾರಿಕೆಯಿಂದ ಕಾರ್ಯ ಮಾಡಬೇಕು. ಶಾಸನಸಭೆಯ ಅವಿಶ್ವಾಸಕ್ಕೆ ಗುರಿಯಾದರೆ ಮಂತ್ರಿ ಮಂಡಲವು ರಾಜೀನಾಮೆ ಕೊಡಬೇಕು. ಹೊಸ ಮಂತ್ರಿ ಮಂಡಲವೇ ಚುನಾಯಿತ ಪ್ರಜಾ ಪ್ರತಿನಿಧಿಗಳಿಂದ ಯುಕ್ತವಾದ ಘಟನಾ ಸಮಿತಿಯನ್ನು ರಚಿಸುವದು. ಹೊಣೆಗಾರಿಕೆಯ ಹೊಸ ರಾಜ್ಯ ಘಟನೆ ರಚಿಸುವಲ್ಲಿ ಇದಕ್ಕೆ ಯಾವ ನಿರ್ಬಂಧಗಳೂ ಇಲ್ಲ. ದಿವಾಣರು ಇತ್ತೀಚೆಗೆ ಪ್ರಕಟಿಸಿದ ಮೂಲ ಹಕ್ಕುಗಳಲ್ಲಿ ಸಹ ಹೆಚ್ಚು ಕಡಿಮೆ ಮಾಡಲು ಅಧಿಕಾರವಿರುತ್ತವೆ. ಇದು ಕರಾರುಗಳ ತಿರುಳು. ಪ್ರಜೆಗಳು ಬೇಡಿದ್ದು ಇದರಲ್ಲಿರುವದರಿಂದ ಭಿನ್ನಾಭಿಪ್ರಾಯಕ್ಕೆ ಆಸ್ಪದವಿರುವದಿಲ್ಲ. ಆದರೆ ದಿವಾಣರನ್ನು ಉಳಿಸಿಕೊಂಡುದು ಸ್ವಲ್ಪ ಟೀಕೆಗೆ ಕಾರಣವಾಗಿರುವದು. ಮಂತ್ರಿಮಂಡಲದಲ್ಲಿ ಅವರ ಸ್ಥಾನಮಾನದ ಬಗ್ಗೆ ಅನೇಕ ತರ್ಕವಿತರ್ಕಗಳು ಈಗಾಗಲೇ ನಡೆದಿರುತ್ತವೆ. ದಿವಾಣರ ಈಗಿನ ಸ್ಥಾನಮಾನ ನೋಡಿದರೆ ಮಂತ್ರಿಗಳಿಗಿಂತ ಅವರಿಗೆ ಹೆಚ್ಚಿನ ಅಧಿಕಾರಗಳಿರುತ್ತವೆ. ಇದುವರೆಗೆ ಅವರೇ ಮುಖ್ಯ ಮಂತ್ರಿಗಳಂತೆ ಕೆಲಸ ಮಾಡುತ್ತಿದ್ದರು. ಇನ್ನು ಅವರ ಪಕ್ಕದಲ್ಲಿ ಲೋಕನಿಯುಕ್ತ ಮುಖ್ಯಮಂತ್ರಿಗಳು ಕುಳಿತುಕೊಳ್ಳುವುದರಿಂದ, ಅಧಿಕಾರ ಸೂತ್ರಗಳನ್ನು ನಿಜವಾಗಿಯೂ ನಿರ್ವಹಿಸುವವರು ಯಾರು ಎಂಬ ಸಂದೇಹ ಉತ್ಪನ್ನವಾಗಿರುವದು. ಅವರ ಸ್ಥಾನ ತಾತ್ಪೂರ್ತಿಕವಿದ್ದು ಅವರಿಂದ ವಿಘ್ನವುಂಟಾಗುವುದಿಲ್ಲೆಂದು ಕಾಂಗ್ರೆಸ್ ಧುರೀಣರು ಆಶ್ವಾಸನವಿತ್ತಿರುವರು. ಆದರೆ ಉಭಯತರಲ್ಲಿ ಅದಾವ ತಿಳಿವಳಿಕೆಯಾಗಿದೆಯೋ ನಮಗೆ ಗೊತ್ತಿಲ್ಲ. ಅವರ ಕೆಲಸ ಏನೂ ಇಲ್ಲದಿರುವಾಗ ಕೇವಲ ಉತ್ಸವ ಮೂರ್ತಿಯಂತೆ ಅವರನ್ನಿರಿಸಿಕೊಳ್ಳುವುದರ ಉಪಯೋಗವಾದರೂ ಏನು? ಸರ್ ರಾಮಸ್ವಾಮಿಯವರೇ ಇದನ್ನು ವಿಚಾರಿಸಿ, ಹಿಂದೆ ಸರಿಯಬೇಕಾಗಿತ್ತು. ಇನ್ನೊಂದು ಮಾತು. ಮಂತ್ರಿ ಮಂಡಲದಲ್ಲಿ ಒಂಬತ್ತು ಜನರಿರಬೇಕೆಂದು ನಿರ್ಣಯಿಸಲಾಗಿದೆ. ಹತ್ತುಕೋಟಿ ರೂ. ಉತ್ಪನ್ನದ ಆಡಳಿತೆಯನ್ನು ನಿರ್ವಹಿಸಲು ಈ ಸಂಖ್ಯೆ ಹೆಚ್ಚೆಂದು ನಮಗೆನಿಸುತ್ತದೆ. ಇರಲಿ, ಮೈಸೂರ ಪ್ರಜಾಪ್ರತಿನಿಧಿಗಳು ಹೊಸದಾಗಿ ದೊರೆತಿರುವ ಅಧಿಕಾರದ ಸದುಪಯೋಗ ಮಾಡಿಕೊಂಡು ಸಕಲ ಪ್ರಜಾವರ್ಗದ ಹಾಗೂ ವಿಶ್ವಾಸವಿಟ್ಟು ಅಧಿಕಾರ ತ್ಯಾಗ ಮಾಡಿದ ಶ್ರೀಮನ್ಮಹಾರಾಜರ ಮೆಚ್ಚುಗೆಗೆ ಪಾತ್ರರಾಗುವರೆಂದು ಹಾರೈಸುತ್ತೇವೆ.

ಸಂಪಾದಕೀಯ ಟೀಕಾಟಿಪ್ಪಣಿಗಳು

ಇನ್ನು ಹೈದರಾಬಾದ

ಮೈಸೂರ ಹೋರಾಟ ನಿಂತಿತು; ಇನ್ನು ಹೈದರಾಬಾದದ ಸರತಿ. ಅಲ್ಲಿಯ ಕಾಂಗ್ರೆಸು ಹೂಡಿದ ಹೋರಾಟ ಇನ್ನೂ ಸಾಗಿರುತ್ತದೆ. ಮೈಸೂರಿನಷ್ಟು ರಭಸ ಅದರಲ್ಲಿರದಿದ್ದರೂ ಒಮ್ಮೆ ಹೊತ್ತಿದ ಸ್ವಾತಂತ್ರ್ಯ ಕಿಡಿ ಮೆಲ್ಲನೆ ಹಬ್ಬುತಿರುವದು. ಇದುವರೆಗೆ ಮೈಸೂರಿಗೆ ತನುಮನ ಧನದಿಂದ ಸಹಾಯ ಮಾಡಿದ ಕನ್ನಡಿಗರು ಮತ್ತು ಇತರರು ಇನ್ನು ತಮ್ಮ ಲಕ್ಷವನ್ನು ಅತ್ತ ಹೊರಳಿಸಬೇಕಾಗಿರುವದು. ಹೈದರಾಬಾದ ಪರಿಸ್ಥಿತಿ ಮೈಸೂರಿಗಿಂತ ಬಹಳ ಭಿನ್ನವಿರುವದರಿಂದ ಎಷ್ಟು ಸಹಾಯ ಮಾಡಿದರೂ ಕಡಿಮೆಯೇ. ಹೈದರಾಬಾದದ ಹೋರಾಟದ ಉದ್ದೇಶಗಳು ಎರಡು: (೧) ಅದು ಹಿಂದುಸ್ತಾನ ಒಕ್ಕೂಟ ಸೇರಬೇಕು. (೨) ಹೊಣೆಗಾರಸರಕಾರ ಸ್ಥಾಪಿಸಬೇಕು. ಮೊದಲನೆಯ ವಿಷಯದ ಬಗ್ಗೆ ಹಿಂದುಸ್ತಾನ ಮತ್ತು ಹೈದರಾಬಾದ ಸರಕಾರಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಮಾತುಕತೆಗಳು ಸಾಗಿದ್ದು ಸಕಲ ಭಾರತೀಯರ ಲಕ್ಷ ಅತ್ತ ವೇಧಿಸಿರುತ್ತದೆ. ಆ ಸಂಸ್ಥಾನದಲ್ಲಿಯ ಇತ್ತಿಹಾದುಲ್ ಮುಸಲ್ಮೀನ ಸಂಸ್ಥೆಯ ಜಾತೀಯತೆಯ ಪ್ರಭಾವವು ನಿಜಾಮ ಪ್ರಭುಗಳ ಮೇಲಿರುವದರಿಂದ ಅವರು ಮುಂಗಾಣದಂತಾಗಿರುವರು. ಅತ್ತ ಮುಸಲ್ಮಾನರ ಸಂಬಂಧವನ್ನೂ ಬಿಡದವರಾಗಿದ್ದಾರೆ; ಇತ್ತ ಹಿಂದುಸ್ತಾನದ ವೈರವನ್ನು ಕಟ್ಟಿಕೊಳ್ಳುವ ಧೈರ್ಯವೂ ಇಲ್ಲದಂತಾಗಿದೆ. ಅದುದರಿಂದ ಮುಸಲ್ಮಾನರಿಗೆ ಅಸಮಾಧಾನವಾಗದಂತೆ ಹಿಂದುಸ್ತಾನದೊಡನೆ ಒಪ್ಪಂದ ಮಾಡಿಕೊಳ್ಳುವ ಹವಣಿಕೆಯಲ್ಲಿ ಅವರಿರುವರು. ಹಿಂದೀ ಒಕ್ಕೂಟವನ್ನು ಅವರು ಸೇರಿದುದಾದರೆ—ಸೇರುವರೆಂದು ಹಾರೈಸೋಣ—ಹೈದರಾಬಾದ ಹೋರಾಟದ ಅರ್ಧ ಉದ್ದೇಶ ಪೂರೈಸಿದಂತಾಗುವದು. ಆದರೆ ಕಾಂಗ್ರೆಸಿಗರು ಮತ್ತು ಅವರ ಬೆಂಬಲಿಗರು ಇತ್ತ ಲಕ್ಷ ಕೊಡದೆ ಹೋರಾಟವನ್ನು ಒತ್ತರದಿಂದ ಮುಂದೆ ಸಾಗಿಸಬೇಕು. ಹೈದರಾಬಾದು ಒಕ್ಕೂಟ ಸೇರಿದರೂ ಇನ್ನರ್ಧ ಧ್ಯೇಯ ಸಾಧನೆಗಾಗಿ ಹೋರಾಟ ನಡೆಯತಕ್ಕದ್ದೆ. ಇದರಲ್ಲಿ ಸಹ ಹೈದರಾಬಾದಿಗಳಿಗೆ ವಿಜಯ ಸಿಕ್ಕ ಹೊರ್ತು ಹೈದರಾಬಾದು—ಹಿಂದುಸ್ತಾನವು ಶಾಂತವಾಗುವದು ಶಕ್ಯವಿಲ್ಲ.

ಮತ್ತೊಂದು ಪ್ರಗತಿಪರ ಹೆಜ್ಜೆ

ಜಮುಖಂಡಿ ಸಂಸ್ಥಾನದ ನ್ಯಾಯ ಮತ್ತು ಪೋಲೀಸ ಆಡಳಿತೆಯನ್ನು ಮುಂಬಯಿ ಸರಕಾರಕ್ಕೆ ಒಪ್ಪಿಸುವ ವಿಚಾರವಿದೆಯೆಂದು ಹೇಳಿ ಅಲ್ಲಿಯ ಪ್ರಗತಿಪರ ಯುವಕ ಮಹಾರಾಜರು ಮತ್ತೊಂದು ಪ್ರಗತಿಪರ ಹೆಜ್ಜೆಯನ್ನಿಟ್ಟಿದ್ದಾರೆನ್ನಬಹುದು. ಸಂಸ್ಥಾನ ಪ್ರಜೆಗಳಿಗೆ ಇಂದು ಬೇಕಾದುದು ವಿತ್ತಜೀವಿತಗಳ ರಕ್ಷಣೆ. ಸಂಸ್ಥಾನಗಳ ಆಡಳಿತೆ ಸಂಸ್ಥಾನಿಕರ ಚಿತ್ತಲಹರಿಯಂತೆ ನಿರ್ವಹಿಸಲ್ಪಡುವದರಿಂದ ಪ್ರಜೆಗಳಿಗೆ ಸ್ವಾಸ್ಥ್ಯ ಸಿಕ್ಕುವದು ಕಡಿಮೆ. ಒಂದು ವೇಳೆ ನಿಷ್ಪಕ್ಷಪಾತದ ಆಡಳಿತ ನಡೆಸಬೇಕೆಂಬ ಇಚ್ಛೆ ರಾಜಮಹಾರಾಜರಲ್ಲಿದ್ದರೂ ಅವರ ಸಂಸ್ಥಾನಗಳ ಸಾಂಪತ್ತಿಕ ಸ್ಥಿತಿ ಸಮಾಧಾನಕರವಿಲ್ಲದ್ದರಿಂದ ಸ್ವತಂತ್ರ ವಿಚಾರದ ನ್ಯಾಯಾಧೀಶರನ್ನೂ ಕಾರ್ಯಕ್ಷಮ ಪೋಲೀಸ ಪಡೆಯನ್ನೂ ಇಡುವದು ಸಾಧ್ಯವಿಲ್ಲ. ಸಂಸ್ಥಾನದ ಕೀರ್ತಿ ಇವೆರಡು ಶಾಖೆಗಳ ಕರ್ತವ್ಯದಕ್ಷತೆಯನ್ನವಲಂಬಿಸಿರುವದು. ಆದುದರಿಂದ ಇವುಗಳನ್ನು ಸಮರ್ಥವಾದ ಮುಂಬಯಿ ಸರಕಾರದ ಆಡಳಿತಕ್ಕೊಪ್ಪಿಸುವ ವಿಚಾರವನ್ನು ಜಮುಖಂಡಿಯ ರಾಜಾಸಾಹೇಬರು ಮುಂದಿಟ್ಟದ್ದು ಅತ್ಯಂತ ಸಮರ್ಪಕವೆಂದು ನಾವು ಹೇಳದಿರಲಾರೆವು. ಮುಂಬಯಿ ಸರಕಾರವಾದರೂ ಅವರ ವಿಚಾರವನ್ನು ಸ್ವಾಗತಿಸಿ, ಜಮುಖಂಡಿ ಪ್ರಜೆಗಳ ಕೃತಜ್ಞತೆಗೆ ಪಾತ್ರವಾಗುವದೆಂದು ನಾವು ಹಾರೈಸುತ್ತೇವೆ. ಇನ್ನುಳಿದ ದಕ್ಷಿಣ ಸಂಸ್ಥಾನಿಕರು ಜಮುಖಂಡಿಕರರ ಮಾರ್ಗವನ್ನು ತುಳಿದರೆ ಅವರ ಸಂಸ್ಥಾನಗಳಲ್ಲಿ ಸಹ ನೆಮ್ಮದಿಯುಂಟಾಗದಿರದು.

ಕಾಲು ಕೆದರಿ ಜಗಳ ಹೂಡುವಿಕೆ

ವಿಚ್ಛೇದನೆಯ ನಂತರ ಹಿಂದುಸ್ತಾನದೊಡನೆ ಶಾಂತಿ ಮತ್ತು ಸ್ನೇಹದಿಂದ ಇರುವದಾಗಿ ಆಶ್ವಾಸನ ಕೊಟ್ಟದ್ದ ಪಾಕಿಸ್ತಾನ ಪ್ರಭೃತಿಗಳು ಈಗ ಅದನ್ನು ಮರೆತಿರುವಂತೆ ಕಾಣುತ್ತದೆ. ವಿಭಜನೆಯಾದ ಮೇಲೆ ಹಿಂದುಸ್ತಾನದಲ್ಲಿ ಸಂಸ್ಥಾನಗಳು ಭೌಗೋಲಿಕ ಸಾಮಿಪ್ಯವನ್ನನುಲಕ್ಷಿಸಿ ತಮ್ಮ ಒಲವಿನಂತೆ ಬೇಕಾದ ರಾಷ್ಟ್ರವನ್ನು ಸೇರಬಹುದೆಂದು ಒಪ್ಪಿಕೊಳ್ಳಲಾಗಿತ್ತು. ಅದರಂತೆ ಪಾಕಿಸ್ತಾನದ ಪಕ್ಕದಲ್ಲಿರುವ ಕೆಲವು ಸಂಸ್ಥಾನಗಳು ಪಾಕಿಸ್ತಾನವನ್ನು ಕೂಡಿವೆ. ಆದರೆ ನವಾಬರ ಅಧೀನದಲ್ಲಿ ಹಿಂದುಸ್ತಾನದ ಮಧ್ಯೆ ಇರುವ ಸಂಸ್ಥಾನಗಳು ಮಾತ್ರ ಕೆಲ ಕಾಲದಿಂದ ಹೊಯ್ದಾಡುತಿದ್ದವು. ಪಾಕಿಸ್ತಾನದ ಮೇಲೆ ನವಾಬರಿಗೆ ಸಹಜವಾದ ಪ್ರೇಮವಿದ್ದದರಿಂದ ಒಂದು ಕಣ್ಣು ಆಚೆಯ ಕಡೆಗಿತ್ತು. ಆದರೆ ಸುತ್ತಲೂ ಹಿಂದುಸ್ತಾನದಿಂದ ಆವರಿಸಲ್ಪಟ್ಟ ಸಂಸ್ಥಾನಗಳಿಗೆ ಅನ್ಯಮಾರ್ಗವಿದ್ದಿಲ್ಲ. ನರೇಂದ್ರಪ್ರಮುಖರೆನಿಸಿದ ಭೋಪಾಲ ನವಾಬರು ಮೀನ ಮೇಷ ಮಾಡಿ ಕೊನೆಗೆ ಹಿಂದುಸ್ತಾನದಲ್ಲಿ ಸೇರಿದರು. ಆದರೆ ಅವರ ಅಳಿಯಂದಿರಾದ ಜುನಾಗಡ ನವಾಬರು ಮಾತ್ರ ನೂರಾರು ಮೈಲು ದೂರವಿರುವ ಪಾಕಿಸ್ತಾನ ಕೂಡಿಕೊಳ್ಳುವ ಧೈರ್ಯ ತೋರಿಸಿದ್ದಾರೆ. ಅದರ ಪ್ರತಿಫಲವನ್ನು ಅವರೀಗ ಉಣ್ಣುತಿರುವರು. ಇರಲಿ, ಇದರಲ್ಲಿ ದುರ್ದೈವದ ಸಂಗತಿಯೆಂದರೆ, ಪಾಕಿಸ್ತಾನವು ತನ್ನ ಕುತಂತ್ರದಿಂದ ಹಿಂದುಸ್ತಾನದೊಡನೆ ಕಾಲುಕೆದರಿ ಜಗಳ ಹೂಡುತ್ತಿರುವದು. ಜುನಾಗಡದ ನವಾಬರು ಮೊದಲು ಹಿಂದುಸ್ತಾನ ಸೇರಬೇಕೆಂದು ನಿರ್ಣಯಿಸಿದ್ದರು. ಆದೇಕೋ, ಅವರು ಹಿಂದಿನಿಂದ ಅದನ್ನು ಬದಲಿಸಿದರು. ಇದರಲ್ಲಿ ಪಾಕಿಸ್ತಾನದ ಅಂಗವಿಲ್ಲೆಂದು ಹೇಳಲಿಕ್ಕಾಗದು. ಹಿಂದುಸ್ತಾನವು ಈ ವಿಷಯದಲ್ಲಿ ಪಾಕಿಸ್ತಾನಕ್ಕೆ ಖಂಡತುಂಡ ಪತ್ರ ಬರೆದು, ಜುನಾಗಡ ನವಾಬರ ಪಾಕಿಸ್ತಾನ ಪ್ರವೇಶ ಪತ್ರವನ್ನು ರದ್ದುಗೊಳಿಸಬೇಕು. ಇಲ್ಲವೆ ಜನಮತದಂತೆ ಆ ಸಂಸ್ಥಾನದ ಭವಿತವ್ಯವನ್ನು ನಿರ್ಣಯಿಸಬೇಕೆಂದು ಸೂಚಿಸಿರುವದು. ಪಾಕಿಸ್ತಾನವು ಇದಕ್ಕಿನ್ನೂ ನಿರ್ದಿಷ್ಟ ಉತ್ತರ ಕೊಟ್ಟಿಲ್ಲ. ಈ ಬಿಕ್ಕಟ್ಟು ಇಲ್ಲಿಗೇ ಮುಗಿದಿಲ್ಲ. ಜುನಾಗಡದ ಮಾಂಡಲಿಕ ಸಂಸ್ಥಾನಗಳಾಗಿದ್ದ ಬಾಬರಿವಾಡ ಮತ್ತು ಮಂಗ್ರೋಲಗಳು ಹಿಂದುಸ್ತಾನ ಸೇರಿದ್ದರಿಂದ ಪರಿಸ್ಥಿತಿ ಮತ್ತಷ್ಟು ಬಿಕ್ಕಟ್ಟನದಾಗಿದೆ. ಮಂಗ್ರೋಲದ ಶೇಖರು ಹಿಂದುಸ್ತಾನದ ಪ್ರವೇಶ ಪತ್ರಕ್ಕೆ ಸಹಿ ಹಾಕಿದನಂತರ ಜುನಾಗಡ ಸೈನ್ಯವು ಅವರಿಂದ ಒತ್ತಾಯದಿಂದ ಪಾಕಿಸ್ತಾನ ಪ್ರವೇಶಪತ್ರಕ್ಕೆ ಸಹಿ ತೆಗೆದುಕೊಂಡಿರುವದು. ಅಧೀನ ಸಂಸ್ಥಾನಗಳಿಗೆ ಈ ತರದ ಸ್ವಾತಂತ್ರ್ಯವಿಲ್ಲೆಂದು ಪಾಕಿಸ್ತಾನದ ಅಭಿಮತ. ಜುನಾಗಡದ ದೈವದೊಡನೆ ಅವುಗಳ ದೈವವೂ ಹೆಣೆದುಕೊಂಡಿದೆಯೆಂದು ಅವರ ಮತ. ಆದರೆ ಬ್ರಿಟಿಶರ ನಿರ್ಗಮನದಿಂದ ಎಲ್ಲರಂತೆ ಇವರೂ ಸ್ವತಂತ್ರರಾಗುವೆಂಬಲ್ಲಿ ಸಂಶಯವಿಲ್ಲ. ಇದೇ ತತ್ವದನ್ವಯ ಚಿತ್ರಾಲ ಸಂಸ್ಥಾನವು ಪಾಕಿಸ್ತಾನವನ್ನು ಸೇರಿಲ್ಲವೇ? ಹಿಂದುಸ್ತಾನವು ಅದನ್ನು ಆಕ್ಷೇಪಿಸಿಲ್ಲ. ಪಾಕಿಸ್ತಾನವು ಮಾತ್ರ ನೂರಾರು ಮೈಲು ದೂರದಲ್ಲಿರುವ ಹಾಗೂ ಕಾಠೇವಾಡ ಸಂಸ್ಥಾನಗಳಿಂದ ಸುತ್ತುವರಿಯಲ್ಪಟ್ಟ ಜುನಾಗಡಕ್ಕಾಗಿ ಹಟ ಹಿಡಿದಿರುವದು. ಈ ತರದ ಧೋರಣೆ ಭೂಷಣವಲ್ಲ. ಇದರ ಪರಿಣಾಮವಾಗಿ ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ನಡುವೆ ಕಿಡಿ ಹಾರಿದರೆ, ಅದರ ಹೊಣೆ ಪಾಕಿಸ್ತಾನದ ಮೇಲೆಯೇ ಇದೆ. ಹಿಂದುಸ್ತಾನವು ಈ ವಿಷಯದಲ್ಲಿ ಬಿಗುವಿನ ಧೋರಣೆ ತಳೆದಿದ್ದು ಜುನಾಗಡಕ್ಕೆ ಬುದ್ಧಿ ಬರುವವರೆಗೆ ಸಡಿಲುಗೊಡುವದಿಲ್ಲೆಂದು ಆಶಿಸುತ್ತೇವೆ.

ಪಾಲಿಸ್ತಾನ ಭವಿತವ್ಯ

ಪಾಲಿಸ್ತಾನ ಭವಿತವ್ಯವು ಅಧಿಕಾರ್ಯಕವಾಗಿ ಸಕಲರ ತಲೆ ತಿನ್ನುತ್ತಿರುವದು. ಪಾಲಿಸ್ತಾನದಲ್ಲಿ ಯಹೂದಿಗಳಿಗೆ ಮನೆ ಮಾಡಿಕೊಡುವದಾಗಿ ಬ್ರಿಟನದ ವಿದೇಶ ಮಂತ್ರಿ ಬಾಲಫೋರರು ೧೯೧೭ ರಲ್ಲಿ ಸಾರಿದಂದಿನಿಂದ ಅರಬ ಮತ್ತು ಯಹೂದಿಗಳಲ್ಲಿ ಘರ್ಷಣವುಂಟಾಗಿರುವದು. ಅದೀಗ ವಿಕೋಪಕ್ಕೆ ಹೋಗಿರುತ್ತದೆ. ಅರಬ ಮತ್ತು ಯಹೂದಿಗಳು ಆ ರಾಷ್ಟ್ರವು ತಮ್ಮದೆಂದು ಸಾಧಿಸುತ್ತಿರುವದರಿಂದ ಅವರ ನ್ಯಾಯ ಬಗೆಹರಿಸಲು ಸೊಲೊಮನ್ನನು ಬರದೆ ಗತ್ಯಂತರವಿಲ್ಲದಾಗಿದೆ. ಬ್ರಿಟಿಶರು ಹಲವು ಯೋಜನೆಗಳನ್ನು ಪ್ರಯತ್ನಿಸಿ ನೋಡಿದರೂ ಸಾಧ್ಯವಾಗಿಲ್ಲ. ಬಾಲಫೋರರ ವಚನದಂತೆ ಪಾಲಿಸ್ತಾನದಲ್ಲಿ ಯಹೂದಿ ರಾಷ್ಟ್ರ ಕಟ್ಟುವದು ಸಾಧ್ಯವಾಗದೇ, ಯಹೂದಿಗಳ ವೈರವನ್ನು ಮಾತ್ರ ಕಟ್ಟಿಕೊಂಡಂತಾಯಿತು. ಈಗ ಆ ದೇಶವನ್ನು ಬಿಟ್ಟು ಹೋಗುವದಾಗಿ ನಿರ್ಣಯಿಸಿರುತ್ತಾರೆ. ಅಮೇರಿಕೆಯು ಸಹ ಇದರಲ್ಲಿ ಆಸ್ಥೆ ತಳೆದಿರುವದು. ಯಹೂದಿಗಳ ಬಗ್ಗೆ ಅದರಲ್ಲಿ ಸಹಾನುಭೂತಿ ಇದೆ. ಯುಕ್ತ ರಾಷ್ಟ್ರ ಸಂಘವು ಸಹ ಪಾಲಿಸ್ತಾನ ಸಮಿತಿಯೊಂದನ್ನು ರಚಿಸಿತ್ತು. ಅದು ಪಾಲಿಸ್ತಾನದ ವಿಚ್ಛೇದನೆಯನ್ನು ಸೂಚಿಸಿ ಒಂದು ಭಾಗವನು ಅರಬರಿಗೂ ಇನ್ನೊಂದನ್ನು ಯಹೂದಿಗಳಿಗೂ ಕೊಡಬೇಕೆಂದಿರುವರು. ಅಮೇರಿಕೆಯ ಪ್ರತಿನಿಧಿ ಮೊನ್ನಿನ ಯುಕ್ತ ರಾಷ್ಟ್ರ ಸಂಘದ ಸಭೆಯಲ್ಲಿ ಇದಕ್ಕೆ ಬೆಂಬಲ ಕೊಟ್ಟು ಅಂತರರಾಷ್ಟ್ರೀಯ ಪೋಲೀಸ ಪಡೆಯ ಸಹಾಯದಿಂದ ವಿಭಜನೆಯನ್ನು ಪೂರ್ತಿಗೊಳಿಸಬೇಕೆಂದು ಹೇಳಿದ್ದಾನೆ. ರಶಿಯವೂ ವಿಭಜನೆ ತತ್ವವನೊಪ್ಪಿದೆ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರಾರು? ವಿಚ್ಛೇದನೆಯನ್ನು ಅರಬರು ಕಡು ವಿರೋಧಿಸುತ್ತಿರುವದರಿಂದ ಯುಕ್ತ ರಾಷ್ಟ್ರ ಸಂಘದ ಮಾನ್ಯ ಸದಸ್ಯರು ಈ ಗೊಂದಲ ತಮಗೇಕೆನ್ನುವ ಪ್ರವೃತ್ತಿಯಲ್ಲಿದ್ದಾರೆ. ಒಟ್ಟಿನಲ್ಲಿ ಪಾಲಿಸ್ತಾನ ಸಮಸ್ಯೆ ಅರಬ ಮತ್ತು ಯಹೂದಿಗಳ ರಕ್ತದ ಕಾಲುವೆ ಹರಿಯದೆ ಬಗೆಹರಿಯುವಂತೆ ಕಾಣುವದಿಲ್ಲ.

ಮಾರ್ಶಲ್ಲರಿಗೆ ಆಹ್ವಾನ

ಪೂರ್ವ ಯುರೋಪದಲ್ಲಿ ರಶಿಯದ ವರ್ಚಸ್ಸು ದಿನ ದಿನಕ್ಕೆ ಹೆಚ್ಚಾಗುತ್ತಿರುವದರಿಂದ ಅದನ್ನೆದುರಿಸಲು ಅಮೇರಿಕೆಯ ವಿದೇಶ ಮಂತ್ರಿ ಜಾರ್ಜ ಮಾರ್ಶಲ್ಲರು ಯುರೋಪಕ್ಕೊಂದು ಆರ್ಥಿಕ ಸಹಾಯದ ಯೋಜನೆಯನ್ನು ಕಲ್ಪಿಸಿರುವರಷ್ಟೆ. ಇದನ್ನು ಮಣ್ಣುಗೂಡಿಸಲು ರಶಿಯದ ವಿದೇಶ ಮಂತ್ರಿ ಮೊಲಟೋವರು ಸ್ವತಃ ಪ್ಯಾರಿಸಿಗೆ ವಿಮಾನದಲ್ಲಿ ಹಾರಿ ಬಂದು ಪ್ರಯತ್ನಿಸಿದರು. ಆದರೂ ಸಾಧ್ಯವಾಗಲಿಲ್ಲ. ಆರ್ಥಿಕ ಅಡಚಣೆಯಿಂದ ಕಂಗಾಲಾದ ಹದಿನಾರು ಯುರೋಪಿಯನ್ ರಾಷ್ಟ್ರಗಳು ಮಾರ್ಶಲ್ಲರ ಬೆನ್ನು ಬಿದ್ದವು. ಇದು ರಶಿಯಕ್ಕೆ ಸಹಿಸದಾಗಿ, ಏನಕೇನ ಪ್ರಕಾರೇಣ ಅಮೇರಿಕೆಯ ಡಾಲರ ವರ್ಚಸ್ಸನ್ನು ಮುರಿದು ಹಾಕಿ ತನ್ನ ಪ್ರಸ್ಥ ಬೆಳೆಸಲು ೧೯೪೩ ರಲ್ಲಿ ವಿಸರ್ಜನೆ ಹೊಂದಿದ್ದ ಅಂತರರಾಷ್ಟ್ರೀಯ ಕಮ್ಯೂನಿಸ್ಟ ಸಂಘವನ್ನು ಮೊನ್ನೆ ಮೊನ್ನೆ ಬೆಲಗ್ರೇಡದಲ್ಲಿ ಹೊಸದಾಗಿ ಪುನರುಜ್ಜೀವಿಸಿರುವರು. ಇಡೀ ಜಗತ್ತಿನಲ್ಲಿಯೇ ಕಮ್ಯೂನಿಸ್ಟ ತತ್ವ ಪ್ರಸಾರ ಮಾಡುವ ಹಟ ಹಿಡಿಯುವದು ಯೋಗ್ಯವಲ್ಲವೆಂದು ೧೯೪೩ ರಲ್ಲಿ ಈ ಸಂಘವನ್ನು ವಿಸರ್ಜಿಸಲಾಗಿತ್ತು. ಬ್ರಿಟನ ಮತ್ತು ಅಮೇರಿಕೆಯ ಪ್ರೇಮ ಸಂಪಾದನೆಯ ಒಳಉದ್ದೇಶವೂ ಅದರಲ್ಲಿತ್ತೆನ್ನಬಹುದು. ಅವರೀಗ ಅದೇ ರಾಷ್ಟ್ರಗಳ ಜೆಜ್ಜಳವನ್ನ ಡಗಿಸಲು ಆ ಸಂಘವನ್ನು ಮತ್ತೆ ಪುನರುದ್ಧರಿಸಲಾಗಿದೆ. ಇದು ಮಾರ್ಶಲ್ಲರಿಗೆ— ಅಮೇರಿಕೆಗೆ ರಶಿಯದ ಆಹ್ವಾನವೇ ಆಗಿರುವದು. ಯುಕ್ತರಾಷ್ಟ್ರಸಂಘದಲ್ಲಿ ದಿನಾಲೂ ಈ ರಾಷ್ಟ್ರಗಳ ನಡುವೆ ದ್ವಂದ್ವ ತಪ್ಪಿರುವದಿಲ್ಲ. ಜಗತ್ತು ಪುನಃ ಇಬ್ಭಾಗವಾಗಿ ಮೂರನೆಯ ಮಹಾಯುದ್ಧದ ಕಡೆಗೆ ಓಡುತ್ತಿದೆಯೆಂದು ಭಾಸವಾಗಹತ್ತಿದೆ. ಎರಡನೆಯ ಮಹಾಯುದ್ಧದಿಂದ ಪ್ರಮುಖ ರಾಷ್ಟ್ರಗಳು ಕಲಿತ ಪಾಠ ಇದು ಆಗಿದ್ದರೆ, ಮಾನವ ಜನಾಂಗವನ್ನು ಪರಮಾತ್ಮನೇ ಕಾಪಾಡಬೇಕು.

ಭಾರತದ ಮುನ್ನಡೆಯಲ್ಲಿ ಅಡೆತಡೆಗಳು

ಲಿಯಾಕತರ ಅಪಲಾಪ—ಸರದಾರರ ಸಂತಾಪ— ನಿಜಾಮರ ದೋಲಾಚಲ ಧೋರಣ— ಜುನಾಗಡದ ಕುಯುಕ್ತಿ—

ಅಸ್ತ್ರ ಪ್ರತ್ಯಸ್ತ್ರಗಳು

“ಪಾಕಿಸ್ತಾನವು ಅಲ್ಪ ಸಂಖ್ಯಾಕರಿಗೆ ಕೊಟ್ಟ ಅಶ್ವಾಸನಗಳನ್ನೇ ಮತ್ತೆ ಮತ್ತೆ ಕೊಡುತ್ತಿದೆ. ಕಡುಬಿನ ರುಚಿಯು ತಿಂದಮೇಲೇ ತಿಳಿಯುತ್ತದೆ. ಈ ಅಶ್ವಾಸನಗಳ ಪರಿಣಾಮವೇನೆಂಬುದು ಸಾವಿರಗಟ್ಟಲೆ ಜನರ ಕೊಲೆ, ಸುಲಿಗೆ, ಮತ್ತು ಕನ್ಯಾಪಹಾರ ಇವುಗಳ ಮೇಲಿಂದ ಚೆನ್ನಾಗಿ ಗೊತ್ತಾಗುವುದು. ಕಾಗದದ ಮೇಲಿನ ಅಶ್ವಾಸನಗಳಿಂದ ಪಾಕಿಸ್ತಾನದಿಂದ ಅಲ್ಪಸಂಖ್ಯಾಕರ ನಿರ್ಗಮನವು ನಿಲ್ಲಲಾರದು” ಎಂದು ಹಿಂದುಸ್ತಾನದ ಉಪಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಪಾಕಿಸ್ತಾನ ಮುಖ್ಯಮಂತ್ರಿ ಲಿಯಾಖತರ ಪ್ರಕಟನೆಗೆ ಉತ್ತರವೆಂದು ಪ್ರತಿ ಪ್ರಕಟನೆ ಹೊರಡಿಸಿದ್ದಾರೆ. ಈ ಮಾತಿಗೆ ಮಿಯಾನವಾಲಿಯ ಮೇಲೆ ೧೦ ಸಾವಿರ ಮುಸಲ್ಮಾನ ಸಶಸ್ತ್ರ ಪುಂಡರು ದಾಳಿಮಾಡಿ ೪ ಸಾವಿರ ಮುಸಲ್ಮಾನೇತರ ಅಬಾಲವೃದ್ಧ ಸ್ತ್ರೀ ಪುರುಷರನ್ನು ಸಂಹರಿಸಿದ್ದೂ ಜಯಸಿಲಮೀರ ಗಡಿಯಲ್ಲಿ ೭ ನೂರು ಹುಡುಗಿಯರನ್ನು ಅಪಹರಿಸಿಕೊಂಡು ಹೋಗಿ ಅತ್ಯಾಚಾರಕ್ಕೆ ಗುರಿಪಡಿಸಿರುವುದೂ ಹಿಮಾಲಯ ಸದೃಶ ಸಾಕ್ಷಿಯಾಗಿ ನಿಂತಿದೆ. ಈ ಘೋರ ಅನ್ಯಾಯಕ್ಕೆ ಕೆಲ ದಿನಗಳ ಹಿಂದೆ ಅಲ್ಲಿಟ್ಟಿದ್ದ ತಮ್ಮ ಸೈನ್ಯವನ್ನು ಹಿಂದೀ ಸರಕಾರ ವಾಪಸು ಕರೆಸಿಕೊಂಡದ್ದು ಕಾರಣವಾಯಿತೆಂದು ತಿಳಿದು ಮತ್ತೆ ಅಲ್ಲಿಗೆ ಸಶಸ್ತ್ರ ಭಟರನ್ನು ಕಳುಹಲಾಗಿದೆಯೆಂದು ತಿಳಿಯುತ್ತದೆ. ಹೇಳುವುದೆಲ್ಲ ಕುರಾಣ ಮಾಡುವುದೆಲ್ಲ ಕುರ್ಬಾನಿಯೆಂದು ತಿಳಿದ ಪಾಕಿಸ್ತಾನದ ಪುಂಡರ ಪಕ್ಷಕಟ್ಟಿಕೊಂಡು ಅಲ್ಲಿಯ ಅಧಿಕಾರಿಗಳು ಹಿಂದುಸ್ತಾನ ಸರಕಾರದ ಮೇಲೆ ಇಲ್ಲದ ಅರೋಪ ಹೊರಿಸುತ್ತಿರುವುದಕ್ಕೆ ತುದಿಮೊದಲಿಲ್ಲವಾಗಿದೆ. ಪಾಕಿಸ್ತಾನದ ನಿರ್ವಾಸಿತರ ವಲಸೆಯ ಮಂತ್ರಿಗಳಾದ ಘಜಲೂಲ ರಹಮಾನರು ಕರಾಚಿಯ ಸುದ್ದಿಗಾರರ ಸಭೆಯಲ್ಲಿ ಮಾತನಾಡುತ್ತ, ಪೂರ್ವ ಪಂಜಾಬಿನ ಶೀಖರ ದಾಳಿಗಂಜಿ ಅಲ್ಲಿಂದ ೫೪ ಲಕ್ಷ ಮುಸಲ್ಮಾನ ನಿರಾಶ್ರಿತರು ಬರಲಿರುವುದರಿಂದ ಅವರ ಪಾಲನೆ ಪೋಷಣೆಗಾಗಿ ಪಾಕಿಸ್ತಾನವು ಶಕ್ತಿಮೀರಿ ಹೆಣಗಬೇಕಾಗಿದೆಯೆಂದೂ ಪೂರ್ವ ಪಂಜಾಬು ಮತ್ತು ದಿಲ್ಲಿಯಲ್ಲಿ ಮುಸಲ್ಮಾನ ಗಾಯಾಳುಗಳ ಮತ್ತು ಸಂಹೃತರ ಸಂಖ್ಯೆ ಆರರ ಅಂಕೆಯನ್ನು ದಾಟಿರುತ್ತದೆಯೆಂದೂ ಪಶ್ಚಿಮ ಪಂಜಾಬಿನಲ್ಲಿ ಸಾವುನೋವುಗಳಿಗೀಡಾದ ಮುಸಲ್ಮಾನೇತರರ ಸಂಖ್ಯೆ ಅದಕ್ಕಿಂತ ಬಹಳ ಕಡಿಮೆಯಿದೆಯೆಂದೂ ಸಾರಿದರು. ಹರಿದಾಸರು ಹೇಳುವ ಸಾವಿರ ಸುಳ್ಳುಗಾರನ ಕತೆ ಇಂದು ಸತ್ಯ ಸೃಷ್ಟಿಯಲ್ಲಿ ಪ್ರಕಟವಾದಂತಾಯಿತು. ಹೇಗೆಂದರೆ ಪೂರ್ವ ಪಂಜಾಬಿನಿಂದ ಹೊರಹೋಗುವಾಗ ಅಲ್ಲಿಯ ಮುಸಲ್ಮಾನರು ದಾರಿಯಲ್ಲಿದ್ದ ಪೈರುಪಚ್ಚೆಗಳನ್ನು ಧ್ವಂಸ ಮಾಡುತ್ತ, ಪ. ಪಂಜಾಬಿನಿಂದ ಬರುತ್ತಿರುವ ಮುಸಲ್ಮಾನೇತರರನ್ನು ತರುಬುತ್ತ ಶುದ್ಧ ಕೇಡಿಗಳಂತೆ ವರ್ತಿಸುತ್ತಿರುವುದು ಕಂಡು ಬಂದಿದೆ.

ವಸ್ತುಸ್ಥಿತಿ ಹೀಗಿರುವಾಗ “ಪಾಕಿಸ್ತಾನದಲ್ಲಿ ದಿಲ್ಲಿ ಅಥವಾ ಸಂಯುಕ್ತಪ್ರಾಂತದ ಮುಸಲ್ಮಾನರಿಗೆ ಆಸ್ಪದಕೊಡಲಾಗದು. ಅಲ್ಪಸಂಖ್ಯಾಕರು ತಮ್ಮ ಮಾತೃಭೂಮಿಯಲ್ಲಿ ಉಳಿಯುವದೇ ಎರಡೂ ರಾಷ್ಟ್ರಗಳ ದೃಷ್ಟಿಯಿಂದ ಹಿತಕರ, ಹಿಂದುಸ್ತಾನ ಸರಕಾರವು ತನ್ನ ಅಲ್ಪಸಂಖ್ಯಾಕರಿಗೆ ಸುರಕ್ಷಿತತೆಯನ್ನು ಕಲ್ಪಿಸಿಕೊಟ್ಟು ಇದ್ದಲ್ಲಿಯೇ ಇರಲು ಅವರಿಗೆ ಶಕ್ಯವಾಗುವಂತೆ ಮಾಡಿಕೊಡದಿದ್ದರೆ ಪಾಕಿಸ್ತಾನವು ತಕ್ಕ ಕ್ರಮ ತೆಗೆದುಕೊಳ್ಳಬೇಕಾಗುವದು” ಎಂದು ಪಾಕಿಸ್ತಾನದ ಮುಖ್ಯಮಂತ್ರಿಗಳಾದ ಲಿಯಾಖತ ಅಲ್ಲಿಖಾನರು ಭಾಷಣ ಮಾಡಿರುವುದು ಪಿತ್ತಪ್ರಕೋಪದಿಂದಲ್ಲದೆ ಬೇರೆಯಲ್ಲವೆನ್ನಬೇಕಾಗುತ್ತದೆ. ಇದರಮೇಲೆ ದಿಲ್ಲಿ ಮತ್ತು ಸಂಯುಕ್ತಪ್ರಾಂತಗಳಲ್ಲಿ ಸುಶಿಕ್ಷಿತ ಮುಸಲ್ಮಾನರು ಸ್ವಚ್ಛಂದವಾಗಿ ಅನಧಿಕೃತ ಆಯುಧ ಮದ್ದುಗುಂಡುಗಳನ್ನು ಸಂಗ್ರಹಿಸಿಕೊಂಡಿರುವುದು ಅನೇಕಕಡೆ ಪೋಲೀಸರ ಕಣ್ಣಿಗೆಬಿದ್ದಿರುವಾಗ ಹಿಂದುಸ್ತಾನದಲ್ಲಿರುವ ಮುಸಲ್ಮಾನರು ದೇಶದ್ರೋಹಿಗಳೆನ್ನಕೂಡದೆಂದು ಕರಾಚಿಯಲ್ಲಿ ಕುಳಿತು ಚೌಧರಿ ಖಲಿಕುಜಮಾನಸಾಹೇಬರು ಉಪದೇಶಮಾಡಬಂದಿದ್ದಾರೆ! ಈಯೆಲ್ಲ ಪರೋಕ್ಷ ಶಾಂದಿತ್ಯಕ್ಕೆ ಪಟೇಲರು ಕನ್ನಡಿಹಿಡಿದು ತೋರಿಸಿದ್ದಾರೆ— “ಇದ್ದದ್ದು ಬಿದ್ದದ್ದನ್ನು ಕಳೆದು [illegible] ಕಂಗಾಲ ಸ್ಥಿತಿಯಲ್ಲಿ ಬಂದ ಮುದ್ರಿತ [illegible] ದ ಅಲ್ಪಸಂಖ್ಯಾಕರು ಹೊರಟರೂ ಮತ್ತೆ ಮತ್ತೆ ಅವರನ್ನು ಸುಲಿಯಲಾಗುತ್ತದೆ. ಹೆಂಗಸರ ಮೈಮೇಲಿನ ಆಭರಣಗಳನ್ನೆಲ್ಲ ಅಪಹರಿಸಿ ಅವರನ್ನು ಉಟ್ಟಬಟ್ಟೆಯ ಮೇಲೆ (ಕೆಲವೊಮ್ಮೆ ಅದೂ ಇಲ್ಲ) ಹೊರದೂಡಲಾಗುತ್ತಿದೆ. ಹುಡುಗರ ಕೈಯೊಳಗಿದ್ದ ಮಿಠಾಯಿಯನ್ನು ಕೂಡ ಕಸಿದುಕೊಳ್ಳಲಾಗುತ್ತಿದೆ— ಏಕೆಂದರೆ ಪಾಕಿಸ್ತಾನದ ಸರಕುಗಳನ್ನು ಹೊರಗೆ ಬಿಡಬಾರದೆಂದು!” ಹೀಗೆ ಕುತ್ತಿಗೆ ಕೊಯ್ಯುತ್ತ ಬಾಯಲ್ಲಿ “ರಸೂಲಲ್ಲಾ” ಎಂದು ಹಿಂದುಸ್ತಾನ ಸರಕಾರದ ಸಹನೆಗೆಡಿಸಲು ಬಾಯಿಗೆ ಬಂದಂತೆ ವಾಕ್ಯಾಘಾತವನ್ನೂ ಮಾಡುತ್ತ ಬಂದರೆ ಪಾಕಿಸ್ತಾನದ ಮೇಲೆ ಯುದ್ಧ ಹೂಡಬೇಕಾದ ಪ್ರಸಂಗವೇ ತಲೆದೋರದಿರದು. ಶಿಶುಪಾಲನ ಶತಾಪರಾಧಗಳನ್ನು ಮಾತ್ರ ಶ್ರೀಕೃಷ್ಣನು ಸಹಿಸಿದನು. ನೂರೊಂದನೆಯ ನಿಂದಾಶಬ್ದವನ್ನು ನುಡಿದ ನಿಮಿಷಾರ್ಧದಲ್ಲಿ ಮುರಾರಿಯು ಚಕ್ರಾಯುಧವನ್ನು ಪ್ರಯೋಗಿಸಿ ಅವನ ಜೀವನಕ್ಕೆ ಇತಿಶ್ರೀ ಬರೆದನು. ಹಾಗೇ ಪಾಕಿಸ್ತಾನ ಮುತ್ಸದ್ದಿಗಳು ಅಪಲಾಪ ಅಪಪ್ರಚಾರಗಳನ್ನು ಮುಂದುವರಿಸುತ್ತ ಹೋದರೆ ಕಾರ್ಯರೂಪದಲ್ಲಿ ದಂಡನೆಯನ್ನು ವಿಧಿಸಲು ಹಿಂದುಸ್ತಾನ ಸರಕಾರವು ಹಿಂದೆಗೆಯದೆಂಬುದಕ್ಕೆ ಪಟೇಲರ ಸಂತಾಪಜನ್ಯ ವಾಕ್ಯಗಳು ಸಾಕ್ಷಿಯಾಗಿ ನಿಲ್ಲುತ್ತವೆ. “ನಾನ್ಯಃ ಪಂಥಾ ವಿದ್ಯತೇಽಯನಾಯ!”

ಹೈದ್ರಾಬಾದಿನ ಹದಗೇಡಿತನ

ಸೆಟ್ಟಿಯೇನುಮಾಡುತ್ತಾನೆ? ಅಳಿಯುತ್ತಾನೆ, ಸುರಿಯುತ್ತಾನೆ- ಎಂಬ ಗಾದೆಯಂತೆ ಹಿಂದೀ ಒಕ್ಕೂಟವನ್ನು ಸೇರುವಲ್ಲಿ ನಿಜಾಮ ಸರಕಾರವು ಮೀನ ಮೇಷ ಎಣಿಸುತ್ತ ದಿನ ದಬ್ಬುತ್ತಿರುವದು ಹಾಸ್ಯಾಸ್ಪದವಾಗಿದೆ. ಕರಾರು ಪತ್ರ ಬೇಡವಂತೆ ಸ್ನೇಹ ಪತ್ರಬೇಕಂತೆ! ಈ ಕೌರವರಾಯನ ಮಾನಕ್ಕೇನೆನ್ನಬೇಕು? ಇಂಥವರನ್ನು ಅಳಿಯನನ್ನು ಕರೆದು ಪಚರಿಸುವಂತೆ ಉಪಚರಿಸುವರಾರು? ಛತ್ತಾರಿ ನವಾಬರ ಗುಂಪು ದಿಲ್ಲಿಯಿಂದ ಹೈದರಾಬಾದಿಗೆ ಈಗ ಮರಳಿಬಂದಿದೆ — ಮುಂದೇನುಮಾಡಬೇಕೆಂದ್ಯು ಸಾಹೇಬರನ್ನು ಕೇಳಿಕೊಂಡು ಹೋಗಲಿಕ್ಕೆ. ನಿಜಾಮರು ಸೇರ್ಪಡೆ ಪತ್ರಕ್ಕೆ ಅಂಕಿತಹಾಕುವುದು ಅಥವಾ ಒಪ್ಪಂದ ಕಾಗದಕ್ಕೆ ಹಿಂದುಸ್ತಾನ ಸರಕಾರವು ಒಪ್ಪುವುದು ಅಸಾಧ್ಯವಾಗಿರುವುದರಿಂದ ಈಗ ನಡೆದ ಸಂಧಾನದಲ್ಲಿ ಮಧ್ಯಮಾರ್ಗವೊಂದನ್ನು ಹಿಡಿಯಬೇಕೆಂದು ಹೈದರಾಬಾದಿನ ಶಿಷ್ಟಮಂಡಲದವರು “ಸಮಾನತೆ ಮತ್ತು ಪಾಲುಗಾರಿಕೆಯ ಪತ್ರ” ದ ಹೊಸಕಲ್ಪನೆಯ ತಳಹದಿಯಮೇಲೆ ಇನ್ನೊಂದು ಪತ್ರವನ್ನು ಬರೆಯುವ ಕಾರ್ಯದಲ್ಲಿ ಈಗ ತೊಡಗಿದ್ದು ಅದಕ್ಕೆ ನಿಜಾಮರ ಒಪ್ಪಿಗೆಯ ಅಂಕಿತ ಪಡೆದು ದಿಲ್ಲಿಗೆ ಹೊರಡಬಹುದೆಂದು ತಿಳಿದುಬರುತ್ತದೆ. ಸಾಹೇಬರು ಎಷ್ಟೇ ತಲೆ ಖರ್ಚುಮಾಡಲಿ, ವ್ಯಾಪಾರಿ ಕಮಿಶನರರೊಬ್ಬನನ್ನು ಪರದೇಶದಲ್ಲಿ ಸ್ವತಂತ್ರವಾಗಿ ನಿಯಮಿಸುವದೊಂದನ್ನು ಬಿಟ್ಟು ಯಾವ ಕಾಲಕ್ಕೂ ಹೈದರಾಬಾದಿಗೆ ಸ್ವತಂತ್ರ ರಾಯಭಾರಿಯನ್ನು ವಿದೇಶಗಳಿಗೆ ಕಳುಹುವ ಸವಲತ್ತನ್ನು ಹಿಂದೀ ಒಕ್ಕೂಟ ಕೊಡದೆಂಬುದು ನಿಶ್ಚಿತವಾದುದರಿಂದ, ಹೈದರಾಬಾದಿನಲ್ಲಿ ಇನ್ನು ಎಂಟು ಹತ್ತು ದಿನಗಳಲ್ಲಿ ಒಪ್ಪಂದವಾಗಬಹುದೆಂದು ವರ್ದಿಯಿದ್ದರೂ ದಿಲ್ಲಿಯಲ್ಲಿ ಮುರಿದು ಹೋದರೂ ಹೋಗಬಹುದೆಂದು ಹೇಳಲಾಗುತ್ತಿದೆ. ಸಂಧಾನ ಯಶಸ್ವಿಯಾಗುವವರೆಗೆ ಮೊದಲಿದ್ದ ಆರ್ಥಿಕಸಂಪರ್ಕ ಮುಂತಾದ್ದನ್ನು ಇಡಲಾಗದೆಂದು ಹಿಂದುಸ್ತಾನ ಸರಕಾರ ಅದನ್ನು ಹಿಂತೆಗೆದುಕೊಳ್ಳುವುದಾಗಿ ತಿಳಿದುಬಂದಿದೆ. ಪಾಕಿಸ್ತಾನ ಹಿಂದುಸ್ತಾನಗಳನಡುವೆ ಯುದ್ಧ ನಡೆದರೆ ನಿಜಾಮರಿಗೆ ತಟಸ್ಥರಿರುವ ಅನುಕೂಲ ಮಾಡಿಕೊಡಬೇಕಂತೆ! ಇದು ಪುಣ್ಯಕ್ಕಿದ್ದೇನೆ, ಪಾಪಕ್ಕೆ ನಾನಿಲ್ಲ—ಎಂದಂತಾಯಿತು. ಹೀಗೆ ಪಾಕಿಸ್ತಾನ ಹಿಂದುಸ್ತಾನಗಳ ನಡುವೆ ತ್ರಿಶಂಕುವಾಗಿ ನಿಲ್ಲಬಯಸುವ ನಿಜಾಮಸಾಹೇಬರ ತೂಗುಬಗೆಗೇನೆನ್ನಬೇಕು! ಹಕ್ಕಿಯೂ ಅಲ್ಲ, ಮೃಗವೂ ಅಲ್ಲ— ಉಗುಳಿದರೆ ತುಪ್ಪ ಕೆಡುತ್ತದೆ, ನುಂಗಿದರೆ ಗಂಟಲು ಸುಡುತ್ತದೆ ಎಂಬಂತಾಗಿದೆ ಹೈದರಾಬಾದಿನಧಿಪತಿಗಳ ಪೀಕಲಾಟ! ಸರ್ ಸುಲ್ತಾನ ಅಹಮ್ಮದ್, ಛತ್ತಾರಿನವಾಬರು ಹಾಗೂ ಸರ್ ವಾಲ್ಟರ ಮಾಂಕ್ಟನ್ನರು ನಿಜಾಮರನ್ನು ನಿತ್ಯ ಕಂಡು ಕೆಲವು ದಿನ ಈ ವಿಷಯದಲ್ಲಿ ಚರ್ಚೆ ನಡೆಸುವರೆಂದೂ ಇದೇ ಕಾಲಕ್ಕೆ ಮಂತ್ರಿಮಂಡಲದ ಸಭೆಯು ಪ್ರತಿ ದಿನವೂ ಸೇರಿ ಒಪ್ಪಂದದ ಕರಡಿನ ಮೇಲೆ ವಿಚಾರ ಮಾಡುವುದೆಂದೂ ಗೊತ್ತಾಗಿದೆ. ಕಡೆಗೆ ಇವರ ಸದ್ಬುದ್ಧಿ ಇವರನ್ನು ಹಾದಿಗೆ ತರುವುದೋ ಇಲ್ಲವೆ ಪ್ರಜೆಗಳ ಸತ್ಯಾಗ್ರಹ ಸಾಹೇಬರನ್ನು ಬಗ್ಗಿಸುವುದೋ ನೋಡಬೇಕಾಗಿದೆ. ಅಂತೂ ಅಜಸ್ರ ಹೋರಾಟ ನಡೆದೇ ಇದೆ. ಕಲಬುರ್ಗಿಯ ಜೇಲಿನಲ್ಲಿ ಉದ್ದಾಮ ಅಧಿಕಾರಿಗಳು ಮಹಾತ್ಮರ ಭಾವಚಿತ್ರವನ್ನು ಕಸಿದುಕೊಂಡದ್ದು, ಸತ್ಯಾಗ್ರಹಿಗಳಿಗೆ ೧೩ ತಿಂಗಳು ೧೪ ತಿಂಗಳು ಹೀಗೆಲ್ಲ ಶಿಕ್ಷೆ ವಿಧಿಸುವುದು, ಪೋಲೀಸರ ದಬ್ಬಾಳಿಕೆ ಸಹಿಸಲಾರದೆ ಅರಳುಗುಂಪಿಯಿಂದ ೨ ಸಾವಿರ ಜನ ಹಿಂದುಸ್ತಾನಕ್ಕೆ ಹೊರಟುಹೋದಂತೆ ಅಲ್ಲಲ್ಲಿ ಪ್ರಜೆಗಳು ಸಾವಿರಗಟ್ಟಲೆಯಲ್ಲಿ ಸಂಸ್ಥಾನದಿಂದ ಹೊರ ಹೊರಟು ಹೋಗುವುದು, ಭಾಲಕಿಗ್ರಾಮದಲ್ಲಾದಂತೆ ಗೋಳೀಬಾರಿನಿಂದ ನಿರಪರಾಧಿಗಳು ಮರಣ ಹೊಂದುವುದು, ಔರಂಗಾಬಾದಿನಲ್ಲಿ ಮಾಡಿದಂತೆ ಮೆರವಣಿಗೆಗಳಲ್ಲಿ ಪೋಲೀಸರು ಹೆಂಗಸರ ಮೇಲೆ ಕೈಮಾಡುವುದು. ಜತಾಪುರ, ಸೂಡಿ, ಕೊಪ್ಪಳ, ಕಾತರಕಿ, ಕನಲೂರು, ನಾರಾಯಣಪೇಡ ಮುಂತಾದ ಸ್ಥಳಗಳಲ್ಲಿ ಅರಣ್ಯ ಸತ್ಯಾಗ್ರಹ, ಧ್ವಜ ಸತ್ಯಾಗ್ರಹ ಮುಂತಾದ್ದನ್ನು ಮಾಡಿದವರಿಗೆ ಹೊಡೆತ ಬಡಿತ, ಶಿಕ್ಷೆ, ದಂಡ, ಗುಂಡು ಬಂಡು ಇತ್ಯಾದಿಗಳಿಂದ ಹಿಂಸೆಪಡಿಸುವುದು— ಇವೆಲ್ಲ ಯಥಾ ಪ್ರಕಾರ ಸಾಗಿರುತ್ತವೆ. ಒಂದು ಕಡೆ ದಬ್ಬಾಳಿಕೆ, ಇನ್ನೊಂದು ಕಡೆ ಸಾಹೇಬರ ಸಂಧಾನದ ಹೇಳಿಕೆ—ಒಳಗೆ ನಾಗರ, ಹೊರಗೆ ನ್ಯಾಯ ಸಾಗರ! ಸಂಸ್ಥಾನದ ಪ್ರಜೆಗಳನ್ನು ಹಿಂಸಿಸುತ್ತ ದಿಲ್ಲಿಯಲ್ಲಿ ಸಂಧಾನ ನಡೆಸುತ್ತ ಹೀಗೆ ತಮ್ಮ ಎಷ್ಟು ಆಯುಷ್ಯವನ್ನು ಘನಹೊಂದಿದ ಸಂಸ್ಥಾನಪತಿಗಳು ಕಳೆಯುವರೋ ನೋಡಬೇಕಾಗಿದೆ. ನಡೆಯಲಿ, ನಡೆಯಲಿ. ಪ್ರಜೆಗಳ ಬಲವನ್ನು ಹತ್ತಿಕ್ಕುವುದು ಈ ಯುಗದಲ್ಲಿ ಸಾಧ್ಯವಾಗುವ ಮಾತಲ್ಲವೆಂಬುದು ಮೈಸೂರಿನ ಪ್ರಭುದೇವರಿಗೆ ತಿಳಿದು ಬಂದಿರುವಂತೆ ಇವರಿಗಾದರೂ ಅಲ್ಪ ಕಾಲದಲ್ಲಿ ತಿಳಿದು ಬರದಿರದು, ತಿಳಿಸಿ ಕೊಡದಿರರು.

ದೇಶಸೇವಕ ಸೇನೆ

ನಿಸ್ವಾರ್ಥ ಮತ್ತು ಪಕ್ಷಾತೀತ ದೇಶಸೇವೆ ಮಾಡುವುದಕ್ಕಾಗಿ ತಾವು ದೇಶಸೇವಕ ಸೇನೆ ಎಂಬ ದಲವನ್ನು ಸಂಘಟಿಸಲು ನಿರ್ಧರಿಸಿದುದಾಗಿ [illegible] ಸೇನೆಯ ಹಿಂದಿನ ಸೇನಾಪತಿಗಳಾದ ಮೋಹನಸಿಂಗ್, ನಿರಂಜನಸಿಂಗ ಗಿಲ್ ಮತ್ತು ಧಿಲನರು ಸಾರಿದ್ದಾರೆ. ಸೇನೆಯ ಧ್ಯೇಯ ಧೋರಣಕ್ಕೆ ಒಪ್ಪಿಗೆಯಿರುವವರಿಗೆಲ್ಲ ಅದರಲ್ಲಿ ಪ್ರವೇಶವಿದೆಯೆಂದೂ ಸೇನೆಯ ಪ್ರಾರಂಭ ಸಭೆ ನಾಳಿನ ೨೫ಕ್ಕೆ ಅಮೃತಸರದಲ್ಲಿ ಸೇರುವುದೆಂದೂ ಹೇಳಲಾಗಿದೆ. ಮುಸ್ಲಿಂಲೀಗಿನವರು ಪಂಜಾಬ, ಸಿಂಧ, ಗಡಿನಾಡು ಮುಂತಾದೆಡೆಗಳಲ್ಲಿ “ಮುಸ್ಲಿಂ ನ್ಯಾಶನಲ್ ಗಾರ್ಡ್”ಯೆಂಬ ಸಂಘವನ್ನು ಸಂಘಟಿಸಿಕೊಂಡು ಸಾಯುಧರಾಗಿ ಅಲ್ಲಲ್ಲಿ ಗಲಭೆಯೆಬ್ಬಿಸಿದ್ದು ದೇಶದ ನಿದರ್ಶನಕ್ಕೆ ಬಂದಿದೆ. ಅಹಿಂಸಾವ್ರತಿಗಳಾದ ಹಿಂದುಸ್ತಾನದ ಪ್ರಜೆಗಳಿಗೂ ಕೂಡ ಆತ್ಮರಕ್ಷಣೆಗಾಗಿ ಇಂದು ಧನುರ್ಧಾರಣ ಮಾಡಬೇಕಾದ ಪ್ರಸಂಗ ಉಂಟಾಗಿದೆಯೆಂಬುದಕ್ಕೆ ದುರ್ಘಟನೆಗಳನ್ನು ಪ್ರತಿಬಂಧಿಸಲು ಪೂರ್ವ ಪಂಜಾಬ ಸರಕಾರದವರು ಗಡಿಭಾಗಗಳಲ್ಲಿಯ ಹಳ್ಳಿಗರಿಗೆ ಶಸ್ತ್ರಾಸ್ತ್ರಗಳನ್ನು ಅನಿರ್ಬಂಧವಾಗಿ ಪೂರಯಿಸಲು ಆಜ್ಞೆ ಕೊಟ್ಟಿರುವುದು ಉದಾಹರಣೆಯಾಗಿದೆ. ಹಿಂದುಸ್ತಾನದ ಒಂದೊಂದು ಪ್ರಾಂತಗಳೆಂದರೆ ಯುರೋಪು ಮೊದಲಾದ ಖಂಡಗಳಲ್ಲಿಯ ಒಂದೊಂದು ದೇಶಗಳಷ್ಟು ಜನಸಂಖ್ಯೆ ಮತ್ತು ಕ್ಷೇತ್ರ ಪರಿಮಿತಿಯುಳ್ಳವಾಗಿವೆ. ಇದನ್ನರಿತರೆ ಹಿಂದುಸ್ತಾನದ ರಕ್ಷಣೆಗೆ ಎಂತಹ ಅಜಯ್ಯವಾದ ಆಧುನಿಕ ಸೇನೆಯಿರುವುದವಶ್ಯಕವೆಂಬುದು ಹೊಳೆಯುತ್ತದೆ. ಅದರಲ್ಲೂ ಸದ್ಯದಲ್ಲಿ ಪಾಕಿಸ್ತಾನ ಭಕ್ತರು ಅಲ್ಲಲ್ಲಿ ಮಾಡುತ್ತಿರುವ ಹಲ್ಲೆಗಳಿಂದ ಬಾಲ ವೃದ್ಧ ಸ್ತ್ರೀಯರ ರಕ್ಷಣೆಗೆ ಮೇಲೆ ಹೇಳಿದಂತಹ ನಿಷ್ಪಕ್ಷಪಾತವಾಗಿ ವರ್ತಿಸತಕ್ಕ ಸೇನೆಯೊಂದಿರುವುದು ಅತ್ಯಗತ್ಯ. ಆತ್ಮರಕ್ಷಣೆಗೆ ಅರ್ಥಾತ್ ದೇಹ ಧನ ಮಾನಗಳ ರಕ್ಷಣೆಗೆ ಇಂದು ಹಿಂದುಸ್ತಾನದ ಪ್ರಜೆಗಳು ಎಲ್ಲೆಲ್ಲೂ ಸಿದ್ಧರಾಗಿರಬೇಕಾಗಿದೆ. ಹೈದರಾಬಾದಿಗೆ ಆ-

ಕನ್ನಡಿಗರ ಕರ್ತವ್ಯ

ಏಕೀಕರಣ ಮಹಾಸಮಿತಿಯ ಗೌ. ಕಾರ್ಯದರ್ಶಿಗಳಾದ ಶ್ರೀ ರಾ ಮಂಗಳವೀಡುರವರು ಹೀಗೆ ಸಾರಿದ್ದಾರೆ:—

ಕರ್ನಾಟಕ ಪ್ರಾಂತ ನಿರ್ಮಾಣದ ವಿಷಯದಲ್ಲಿ ನಾವು ಮಾಡತಕ್ಕ ಕಾರ್ಯ ಮೂರು ವಿಧವಾಗಿದೆ. (೧) ಘಟನಾ ಸಮಿತಿಯಲ್ಲಿ ನಮ್ಮ ಬೇಡಿಕೆಯನ್ನು ಪೂರ್ತಿ ಮಾಡಿಕೊಳ್ಳುವದು. ಈ ಕಾರ್ಯದಲ್ಲಿ ಘಟನಾಸಮಿತಿಯಲ್ಲಿಯ ಕರ್ನಾಟಕದ ಸದಸ್ಯರೂ ಮುಂಬೈ ಮದ್ರಾಸ ಪ್ರಾಂತಗಳ ಕಾಯದೆ ಮಂಡಳದಲ್ಲಿರುವ ಕರ್ನಾಟಕದ ಪ್ರತಿನಿಧಿಗಳೂ ಏಕೀಕರಣ ಮಹಾಸಮಿತಿಯೂ ಮುಂಬರಿದು ಕಾರ್ಯಮಾಡಲಿದ್ದಾರೆ. ಇದು ಒಂದನೆಯ ಕ್ಷೇತ್ರ. ಈ ಪ್ರಯತ್ನದಫಲವಾಗಿ ವಸಾಹತು ಭಾಗದ (ಡೋಮಿನಿಯನ್) ಕರ್ನಾಟಕವು ಅಂದರೆ ಹತ್ತು ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ಪ್ರಾಂತವು ನಿರ್ಮಾಣವಾಗುವದು. ಅವು— ೧) ಧಾರವಾಡ ೨) ಬೆಳಗಾವಿ ೩) ವಿಜಾಪುರ ೪) ಕೊಡಗು ೫) ಉತ್ತರಕನ್ನಡ ೬) ನೀಲಗಿರಿ ೭) ದಕ್ಷಿಣಕನ್ನಡ ೮) ಸೇಲಂ ಮತ್ತು ಕೊಯಿಮುತ್ತೂರು ಜಿಲ್ಲೆಗಳಲ್ಲಿಯ ಕನ್ನಡ ತಾಲೂಕಗಳನ್ನು ಸೇರಿಸಿ ಹೊಸದೊಂದು ಜಿಲ್ಲೆಯ ನಿರ್ಮಾಣ (೯ ಮತ್ತು ೧೦) ಬಳ್ಳಾರಿ ಜಿಲ್ಲೆಯ ಒಂಬತ್ತು ತಾಲೂಕುಗಳು ಮತ್ತು ಬಳ್ಳಾರಿಯ ಪಕ್ಕದಲ್ಲಿರುವ ಅನಂತಪುರ ಜಿಲ್ಲೆಯ ಐದು ತಾಲೂಕಾಗಳು ಸೇರಿ ಎರಡು ಜಿಲ್ಲೆಗಳು.

(೨) ಈ ಬಗೆಯ ಹತ್ತು ಜಿಲ್ಲೆಗಳ ಪ್ರದೇಶವು ಎಂಬತ್ತೈದು ಲಕ್ಷ ಜನಸಂಖ್ಯೆಯುಳ್ಳದೂ ಮೂವತ್ತೈದು ಸಾವಿರ ಚದುರ ಮೈಲು ವಿಸ್ತಾರವುಳ್ಳದ್ದೂ ಆಗುವದು. ಕರ್ನಾಟಕ ಪ್ರಾಂತವು ವಸಾಹತು ಹಿಂದುಸ್ತಾನದಲ್ಲಿ ನಿರ್ಮಾಣವಾಯಿತೆಂದರೆ ಈ ಕರ್ನಾಟಕವು ಹಂಚಿಹೋದ ಹದಿನಾರು ಸಂಸ್ಥಾನಗಳ ಪ್ರದೇಶವನ್ನು ಸಹ ಈ ವಸಾಹತು ಕರ್ನಾಟಕಕ್ಕೆ ಸೇರಿಸಿಕೊಳ್ಳಲು ಶಕ್ತಿ ಬರುವದು. ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣ ಮಾಡದೆ ಕರ್ನಾಟಕಕ್ಕೆ ಸಮಾಧಾನವಾಗದೆಂಬುದಾಗಿ ಧಾರವಾಡ ಏಕೀಕರಣ ಪರಿಷತ್ತಿನಲ್ಲಿ ೧೯೪೪ ರಲ್ಲಿ ಕನ್ನಡಿಗರು ಸಾರಿದ್ದಾಗಿದೆ. ಸಂಸ್ಥಾನಗಳೆಲ್ಲ ಕರ್ನಾಟಕದ ಭಾವೀ ಪ್ರಾಂತದಲ್ಲಿ ಸೇರುವಂತೆ ವಸಾಹತು ಕರ್ನಾಟಕ ಸರಕಾರದ ಶಕ್ತಿಯು ಕರ್ನಾಟಕ ಸಂಸ್ಥಾನಗಳಲ್ಲಿ ನಡೆದ ಪ್ರಜಾಜನರ ಅಂದೋಲನಕ್ಕೆ ಇಮ್ಮಡಿ ಮುಮ್ಮಡಿಯಾಗಿ ಬಲವನ್ನುಂಟು ಮಾಡುವದರಲ್ಲಿ ಸಂದೇಹವಿಲ್ಲ. ಸಾರ್ವಜನಿಕ ಸಂಘಗಳ ಬೇಡಿಕೆಗೆ ಪ್ರಾಂತಿಕ ಸರಕಾರದ ಬೆಂಬಲವು ದೊರೆತ ಕೂಡಲೆ ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣದ ಧ್ಯೇಯವು ಹಸುರಾಗಿ ಸಫಲವಾಗುವದು. ಆದುದರಿಂದ ವಸಾಹತು ಕರ್ನಾಟಕದ ನಿರ್ಮಾಣಕ್ಕೆ ಸಂಸ್ಥಾನೀ ಭಾಗದ ಪ್ರಜೆಗಳು ಈಗ ನೆರವಾಗುವದು ಅತ್ಯವಶ. ಸಂಸ್ಥಾನದ ಪ್ರಜೆಗಳ ಅಂದೋಲನಕ್ಕೆ ಈ ಏಕೀಕರಣ ಮಹಾ ಸಮಿತಿಯು ಎಲ್ಲ ರೀತಿಯಿಂದಲೂ ಸಹಾಯ ಮಾಡುವದೇ ಈ ಮಹಾಸಮಿತಿಯ ದ್ವಿತೀಯ ಕಾರ್ಯಕ್ಷೇತ್ರವು. ಸಂಸ್ಥಾನದ ಚಟುವಟಿಕೆಗೆ ನೆರವಾಗಲು ಓರ್ವ ಕಾರ್ಯಕರ್ತರನ್ನು ಗೊತ್ತುಪಡಿಸಿ ಈ ಮಹಾಸಮಿತಿಯು ಎಲ್ಲ ಕನ್ನಡ ಸಂಸ್ಥಾನಗಳ ಚಟುವಟಿಕೆಗಳಿಗೆ ನೆರವಾಗುವ ಹವ್ಯಾಸವನ್ನಿಟ್ಟುಕೊಂಡಿದೆ. ಈ ದಿಶೆಯಲ್ಲಿ ಈಗ ಪ್ರಯತ್ನವು ನಡೆದಿದೆ.

(೩) ಇನ್ನು ಈ ಮಹಾಸಮಿತಿಯ ಮೂರನೆಯ ಕಾರ್ಯ ಕ್ಷೇತ್ರವೆಂದರೆ ಗಡಿನಾಡಿನ ಸಂಘಟನೆ. ಉತ್ತರ,ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲೆಲ್ಲ ನಮ್ಮ ಗಡಿ ತಾಲೂಕಗಳಲ್ಲಿಯ ಕನ್ನಡಿಗರಲ್ಲಿ ಸಾಕಷ್ಟು ಜಾಗ್ರತೆಯಿಲ್ಲ. ಅಲ್ಲಿ ಕನ್ನಡ ಶಿಕ್ಷಣಕ್ಕಾಗಿ ಪ್ರಾಥಮಿಕ ಶಾಲೆಗಳಿಲ್ಲ. ಕೋರ್ಟು ಕಚೇರಿ ನೋಂದಣಿ ಖಾತೆಯಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ. ಜನಗಣನೆಯ ವರದಿಗಳಲ್ಲಿ ಕನ್ನಡಿಗರ ಸಂಖ್ಯೆ ಕುಗ್ಗಿ ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರದಿಂದ ಸೀಮಾ ಸಮಿತಿಯು(Boundary Commission) ವಿಚಾರಣೆಗಾಗಿ ಬಂದಿತೆಂದರೆ ಕರ್ನಾಟಕಕ್ಕೆ ಹಾನಿಯಾಗವದು. ಎಂಟು ಗಡಿ ಕೇಂದ್ರಗಳನ್ನು ಮಾಡಿದ್ದು ಒಂದೊಂದರಲ್ಲಿ ಒಬ್ಬೊಬ್ಬರಂತೆ ಎಂಟು ಜನ ಕಾರ್ಯಕರ್ತರು ಈ ಗಡಿಗಳಲ್ಲಿ ನಿಂತು ಹೊಣೆಯಿಂದ ಕಾರ್ಯಮಾಡಲು ಬೇಕಾಗಿದ್ದಾರೆ. ವೇತನ ಅಪೇಕ್ಷಿಸುವವರಿಗೆ ಸಾಕಷ್ಟು ವೇತನವನ್ನು ಕೊಡಲಾಗುವದು. ಆದರೆ ಸಾರ್ವಜನಿಕ ಜೀವನಕ್ಕಾಗಿ ಕಾರ್ಯದ ಮಹತ್ವವರಿತು ಪ್ರೀತಿಯಿಂದ ದುಡಿಯುವವರು ಮಾತ್ರ ಇರಬೇಕು. ಕೇವಲ ವೇತನಕ್ಕಾಗಿ ದುಡಿಯುವವರು ಅರ್ಜಿ ಹಾಕುವ ಅವಶ್ಯವಿಲ್ಲ.

ಮೇಲಿನ ಕರೆಗೆ ಓ ಗೊಟ್ಟು ಕನ್ನಡ ತರುಣರು ನಾ ಮೇಲೆ ತಾ ಮೇಲೆಂದು ಬಂದು ಕಾರ್ಯಕ್ಷ

ಅಂತರ್ರಾಷ್ಟ್ರೀಯ

ಅಂತರ್ರಾಷ್ಟ್ರೀಯ ಸುಂಕಸಮಿತಿಯ ಸಭೆ

ಏಪ್ರಿಲ್ಲಿಂದ ಕುಳಿತು ಕೆಲಸ ಪ್ರಾರಂಭಿಸಿದ ಅಂತರ್ರಾಷ್ಟ್ರೀಯ ಸುಂಕಸಮಿತಿಯಲ್ಲಿ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟಿಶ ಅಧಿರಾಜ್ಯ ಮಂಡಲಗಳ ನಡುವೆ ಉಂಟಾದ ಬಿಕ್ಕಟ್ಟನ್ನು ಪರಿಹರಿಸಲು ಜಾರ್ಜಮಾರ್ಶಲರೂ ಅ. ಸಂಯುಕ್ತ ಸಂಸ್ಥಾನದಲ್ಲಿಯ ಬ್ರಿಟಿಶ ರಾಯಭಾರಿಗಳಾದ ಲಾರ್ಡ ಇನ್ವರ್ ಚಾಪೆಲರೂ ಕೂಡಿ ಒಂದು ಯೋಜನೆಯನ್ನು ತಯಾರಿಸಿರುವರೆಂದು ತಿಳಿಯುತ್ತದೆ. ಉಭಯ ಸರಕಾರಗಳು ತಮ್ಮ ಇಂದಿನ ಸುಂಕದ ಧೋರಣವನ್ನು ಹಾಗೇ ಇಟ್ಟುಕೊಂಡು ಅಂಗ್ಲೋ—ಅಮೇರಿಕನ್ನರ ಒಟ್ಟು ವ್ಯಾಪಾರದಲ್ಲಿ ಕೇವಲ ನೂರಕ್ಕೆ ೫ ರಷ್ಟರ ಮೇಲೆ ಮಧ್ಯಸ್ತಿಕೆಯ ನಿಯಮದಂತೆ ನಡೆಯಬೇಕೆಂಬ ಮಾತು ಬಂದಿತೆಂದು ಬ್ರಿಟಿಶ ವಕ್ತಾರನೊಬ್ಬನಿಂದ ತಿಳಿದು ಬರುತ್ತದೆ. ಈ ಹೊಸ ಯೋಜನೆಯು ಸಾಮಾನುಗಳ ಯೋಗ್ಯತೆಯನ್ನಳಿದು ಪರಿಮಾಣದ ಮೇಲೆ ಪುನರ್ವ್ಯವಸ್ಥೆಗೊಳಿಸುತ್ತದೆಂದು ಅಮೇರಿಕದ ವಕ್ತಾರನೊಬ್ಬನ ಅಭಿಪ್ರಾಯ. ಪುನಃ ಈ ಸಂಧಾನ ಮುಂದುವರಿಯುವುದೆಂದು ಹೇಳಲಾತ್ತದೆ.

ವೀಟನಾಮದಲ್ಲಿ ಘೋರ ಕೊಲೆ

ಇಂಡೋಚೀನದ (ವೀಯಟನಾಮ) ಹಾನೋಯಿಯ ಆಡಳಿತ ಸಮಿತಿಯ ಅಧ್ಯಕ್ಷರಾದ ಡಾ. ತ್ರೂ ಅಂಗದೀನ ತ್ರೀಯವರತ್ತ ಕೈಬಾಂಬೆಸೆದು ಯಾರೋ ದುಷ್ಟರು ಕೊಲೆ ಮಾಡಲು ಉದ್ಯುಕ್ತರಾದರು. ಅದರಿಂದ, ಅವರಿಗೆ ಮರಣಾಂತಿಕ ಅಪಾಯವುಂಟಾಗಿ ಅವರು ಅಸ್ಪತ್ರೆಯಲ್ಲಿ ಮಡಿದರೆಂಬ ಸುದ್ದಿ ಬಂದಿದೆ. ಡಾ. ತ್ರೀಯವರು ಫ್ರೆಂಚರ ಬೆಂಬಲದಿಂದ ಎದ್ದ ಇಂಡೋಚೀನ ಅಂತರ್ರಾಷ್ಟ್ರೀಯ ಪಕ್ಷದ ಹಾನೋಯಿಯ ಆಡಳಿತಗಾರರು. ಇವರಲ್ಲದೆ ಅದೇ ಸಮಯದಲ್ಲಿ ವೀಟನಾಮ ಪ್ರಜಾರಾಜ್ಯದ ಅಧ್ಯಕ್ಷರಾದ ಡಾ. ಹೋಚಿಮಿನ್ನರಿಗೆ ವಿರುದ್ಧವಾದ ಮತ್ತು ಕಮ್ಯುನಿಸ್ಟ್ ಶತ್ರುವಾದ ವೀಟನಾಮ ಸಂಯುಕ್ತ ರಾಷ್ಟ್ರೀಯ ಪಕ್ಷದ ಮುಖಂಡರಾದ ಶ್ರೀ ಗುಯೇನವಾನ ಸ್ಯಾಮರನ್ನು ಕೋಲೋನಿನಲ್ಲಿ (ಸೈಗಾನಿನಿಂದ ೨ ಮೈಲು ದೂರ) ಕೊಲೆ ಮಾಡಲಾಯಿತು. ಶ್ರೀ ಸ್ಯಾಮರು ಒಬ್ಬನೊಡನೆ ಮೋಟಾರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವನು ಇವರಿಗೆ ಗುಂಡು ಹಾಕಿ ಕೊಲೆ ಮಾಡಿದನೆಂದು ಹೇಳಲಾಗಿದೆ. ಅಪಾದಿತನ ಕುರುಹೇನೂ ಸಿಕ್ಕಿಲ್ಲವೆಂದು ಗೊತ್ತಾಗುತ್ತದೆ.

ಜಪಾನಿನಲ್ಲಿ ಜಲಪ್ರಳಯ ?

ಮೊನ್ನೆ ಮೊನ್ನೆ ಜಲವಾತೋತ್ಸದಿಂದ ಹಾನಿಗೀಡಾದ ಟೋಕಿಯೋಕ್ಕೆ ಈಗ ಅದಕ್ಕಿಂತಲೂ ಭಯಂಕರವಾದ "ರೋಜಾಲಿಂಡ್" ಎಂಬ ಅದ್ಭುತ ಜಲವಾತೋತ್ಸವು ಹೊನ್ಶುವಿನ ತೆಂಕಲಿನಲ್ಲಿ ಹೊಡೆತಕೊಡಬಹುದೆಂಬ ಭಯವುಂಟಾಗಿದೆ. ಗಂಟೆಗೆ ೪೦ ಮೈಲಿಗಿಂತ ಹೆಚ್ಚು ವೇಗವಿರುವ ಗಾಳಿಬೀಸಿ ತೀರಪ್ರದೇಶದೊಳಗೆ ೧೦೦ ಮೈಲು ಜಲಾಘಾತ ಬರಬಹುದೆಂಬ ಅಂಜಿಕೆಯೆದ್ದಿದೆ. ಯುದ್ಧಕಾಲದಲ್ಲಿ ಮುರಿಯಲಾದ ಸೇತುವೆಗಳಿನ್ನೂ ಪುನರುದ್ಧರಿಸಲ್ಪಟ್ಟಿಲ್ಲವಾಗಿ ಮಹಾಪೂರವುಂಟಾದರೂ ಅದೀತೆಂದು ಹೇಳಲಾಗುತ್ತಿದೆ; ಜಡಿಮಳೆ ಹೊಡೆಯುತ್ತಿದ್ದು ಸೇತುಬಂಧ ಕಾರ್ಯಗಳು ಗಡಿಬಿಡಿಯಿಂದ ಸಾಗುತ್ತಿವೆ. ಐವಾಜಿಮ ಎಂಬಲ್ಲಿ ಗಂಟೆಗೆ ೧೪೦ ಮೈಲು ವೇಗದ ಜಂಝಾಮಾರುತ ಬೀಸಿ ಮನೆಮಾರುಗಳನ್ನು ಪುಡಿ ಪುಡಿ ಮಾಡಿದೆಯೆಂದು ತಿಳಿಯುತ್ತದೆ. ೪ ವಾರಗಳ ಹಿಂದೆ ಜಪಾನಿಗೆ ಹೊಡೆತ ಕೊಟ್ಟ ಜಲವಾತೋತ್ಸದಿಂದ ಸುಮಾರು ೨ ಸಾವಿರ ಜನರು ಮರಣಕ್ಕೆ ಗುರಿಯಾದರೆಂದೂ ೨೮ ಲಕ್ಷ ಜನರು ಮನೆ ಮಠ ಕಳೆದುಕೊಂಡರೆಂದೂ ಸುದ್ದಿ!

೨ ನೆಯ ಮಹಾಯುದ್ಧದಲ್ಲಿ ಅಣು ಬಾಂಬಿನಿಂದ ಹತವಾಗಿ ಬಸವಳಿದು ಬಿದ್ದು ಮ್ಯಾಕ್ ಆರ್ಥರರ ಉಗ್ರಾಧಿಕಾರಕ್ಕೊಳಗಾಗಿ ಹೇಗೆ ಹೇಗೋ ಚೇತರಿಸಿಕೊಳ್ಳುತ್ತಿರುವ ಜಪಾನಿನಮೇಲೆ ಇಂದು ದೈವ ಮುಳಿದೆದ್ದಂತಿದೆ. ಮೊದಲೇ ಅಲ್ಲಿ ಯಾವಾಗಲೂ ಜ್ವಾಲಾಮುಖಿಗಳ ದೆಸೆಯಿಂದ [illegible] ಪ್ರಳಯ ಅನೇಕಸಲ ಸಂಭವಿಸುತ್ತಿತ್ತು. [illegible] ಜಲದೇವತೆ ತನ್ನ ಸರತಿಯನ್ನು ಪೂರ[illegible]ದಂತಿದೆ. ಮುಳುಗುತ್ತಿರುವವನ ತಲೆಯ [illegible] ಮತ್ತೊಂದು ಕಲ್ಲು !

[illegible]ರಬೀ ಸೈನಿಕರ ದಂಡಯಾತ್ರೆ

ಪಾಲಿಸ್ತಾನಿನಲ್ಲಿಯ ಅರಬ ಲೀಗಿಗೆ ನೆರವೀಯಲೆಂದು ಅರಬ ರಾಷ್ಟ್ರಗಳು ೨,೩೦,೦೦೦ ಸೈನಿಕರನ್ನು ಸಿದ್ಧಗೊಳಿಸಿದ್ದಾರೆ. ಇದು ಸಂಯುಕ್ತ ಸಂಸ್ಥಾನವು ಸಂ. ರಾ. ಸಂಘದೆದುರು ಪಾಲಿಸ್ತಾನ ವಿಭಜನೆಗೆ ತನ್ನ ಒಪ್ಪಿಗೆಯಿದೆಯೆಂದು ಹೇಳಿದ್ದರ ಪರಿಣಾಮವೆಂದು ಹೇಳಲಾಗಿದೆ. ಬ್ರಿಟಿಶ ಸೈನ್ಯವೆಲ್ಲ ಹೋದ ಮರುಗಳಿಗೆಯಲ್ಲಿ ಅರಬ ಲೀಗಿಗೆ ಬೆಂಬಲ ವೀಯಲೆಂದು ಅದರ ೫ ಸದಸ್ಯ ರಾಷ್ಟ್ರಗಳು ೨೦ ಸೈನ್ಯಖಂಡಗಳನ್ನು ಕಳುಹುವದಕ್ಕಾಗಿ ವ್ಯವಸ್ಥೆ ಮಾಡಿವೆ. ಇಜಿಪ್ತ ಮತ್ತು ಸಿರಿಯಗಳಿಂದ ಹೊರಟವರ ಸಂಖ್ಯೆ ೧೨,೦೦೦ ವೆಂದೂ ತಿಳಿಯುತ್ತದೆ. ಪಾಲಿಸ್ತಾನ ಪರಿಸ್ಥಿತಿ ಗಂಭೀರವಿರುವ ಪ್ರಯುಕ್ತ ಅರಬಲೀಗ ಕೌನ್ಸಿಲ ಸಭೆ ಕುಳಿತೇ ಇರುವುದೆಂದು ಹೇಳಲಾಗಿದೆ. ಜಾಗತಿಕ ಯೆಹೂದಿಮಂಡಲದ ಸಂಸ್ಥಾಪಕ ಅಧ್ಯಕ್ಷ ಮೇಜರ್ ಸ್ಯಾಮ್ಯುಯಲ್ ಮೇಜರರು ಇದಕ್ಕೆ ಪ್ರತ್ಯುತ್ತರವೆಂದು ಒಂದು ಹೇಳಿಕೆ ಹೊರಡಿಸಿ, ಯೆಹೂದಿಗಳು ಕ್ಷಣಾರ್ಧದಲ್ಲಿ ೨ ಲಕ್ಷ ಯೋಧರನ್ನು ಸಂಗ್ರಹಿಸಬಲ್ಲರು ಎಂದು ಹೇಳಿದ್ದಾರೆ.

ಇದರಿಂದ ಪಾಲಿಸ್ತಾನದಲ್ಲೊಂದು ಸಂಗ್ರಾಮ ಸಂಭವಿಸಲಿದೆಯೆಂಬುದು ನಿಶ್ಚಯ. ಸಂ ರಾ.ಸಂಘಕ್ಕೆ ಕಾಯದೆ ಪಾಸುಮಾಡುವ ಶಕ್ತಿಯಿದೆಯಲ್ಲದೆ ಅವುಗಳನ್ನು ಅಮಲಿನಲ್ಲಿ ತರುವ ಆಡಳಿತ ಸಾಧನವಿಲ್ಲ. ಅದಕ್ಕೆ ಸೈನ್ಯಬಲ ವಿಲ್ಲ.ಹೀಗಿರುವುದರಿಂದ. ಪಾಲಿಸ್ತಾನದ ವಿಭಜನೆಯನ್ನು ಶಾಂತಿಯುತವಾಗಿ ಅರಬರ ಮೇಲೆ ಹೇರಲು ಅದು ಸಾಮರ್ಥ್ಯವಿಲ್ಲ. ಸದ್ಯಕ್ಕೆ ಸದಸ್ಯ ರಾಷ್ಟ್ರಗಳ ಸಹಾಯವನ್ನಾದರೂ ಅದು ಪಡೆದು ತನ್ನ ತೀರ್ಪನ್ನು ಅಮಲಿನಲ್ಲಿ ತರಲು ಯತ್ನಿಸಿದರೆ ಒಳ್ಳೆಯದು; ಹಾಗಲ್ಲದೆ ತೀರ್ಪು ಹೇಳಿ ಕೈಕಟ್ಟಿಕೊಂಡು ಕುಳಿತರೆ ಘನಘೋರ ಕದನವೊಂದು ಅರಬ ಯೆಹೂದಿಗಳ ನಡುವೆ ನಡೆದು ಜಗತ್ತಿನ ಶಾಂತಿಗೇ ಭಂಗವುಂಟಾಗಬಹುದು. ಅದೂ ಅಲ್ಲದೆ ಆಯಾ ಪಕ್ಷಗಳ ಬೆಂಬಲಕ್ಕೆಂದು ಅನಧಿಕೃತ ಸೈನ್ಯಗಳನ್ನು ಪರಸ್ಪರ ವೈರಿಭಾವವಿರುವ ರಶಿಯ ಅಮೇರಿಕದಂತಹ ರಾಷ್ಟ್ರಗಳು ಕಳುಹಿಬಿಟ್ಟರೆಂದರೆ ಉರಿಯುವ ಬೆಂಕಿಗೆ ತುಪ್ಪಹಾಕಿದಂತಾಗುವದು. ಇದನ್ನೆಲ್ಲ ಯೊಚಿಸಿ ಸಂ. ರಾ ಸಂಘವು ಯಾವ ಉಪಾಯವನ್ನು ಕೈಕೊಳ್ಳುವುದೆಂಬುದು ಸದ್ಯಕ್ಕೆ ದುರೂಹ್ಯ.

ಅಮೇರಿಕನ್ನರ ಔದಾರ್ಯ !

ಅಮೇರಿಕದ ಔದಾರ್ಯವನ್ನು ನಂಬಿದ ಜನಾಂಗಗಳಿಂದು ಕಣ್ಣು ತೆರೆಯ ಬೇಕಾಗಿದೆ. ನಾವು ಈ ಹಿಂದೆ ಟ್ರೂಮನ್ನರ ಉಚಿತೋಪದೇಶವನ್ನು ಸ್ವಾಗತಿಸುವಾಗಲೇ ಈಗ ಹೇಳಲಾಗುವ ಪರಿಣಾಮಗಳನ್ನು ಸೂಚ್ಯವಾಗಿ ನಿರ್ದೇಶಿಸಿದ್ದೇವೆಂಬುದು ವಾಚಕರಿಗೆ ಸ್ಪಷ್ಟವಾಗದಿರದು. ಅಧ್ಯಕ್ಷ ಟ್ರೂಮನ್ನರು ಮಿತಾಹಾರೋಪದೇಶ ಮಾಡಿದ್ದು ಕೋಣನ ಮುಂದೆ ಕಿಂದರಿ ಬಾರಿಸಿದಂತಾಗಿದೆಯೆಂದು ತಿಳಿಯುತ್ತದೆ. ನಾವು ಹೇಳಿದಂತೆ ಈಗ ಉಪದೇಶಾನಂತರ ಅಮೇರಿಕನ್ನರ ಬಕಲಾಲಸೆ ಮೂರು ಪಟ್ಟು ಹೆಚ್ಚಾಗಿದೆಯಂತೆ. ಮೊದಲು ೧ ಕೋಟಿ ಪೌಂಡುಗಳಷ್ಟು ಐಸ್‌ಕ್ರೀಂ ತಿನ್ನುತ್ತಿದ್ದ ಜನರಿಂದು ೩ ಕೋಟಿ ಪೌಂಡುಗಳಷ್ಟು ತಿನ್ನಲಾರಂಭಿಸಿದ್ದಾರೆಂದು ಸುದ್ದಿ. ಅಮೇರಿಕದ ಯಾವ ಹೊಟೇಲೂ ಇದು ಮಾಂಸಾಭಾವದ, ಅಂಡಾಭಾವದ ಇಲ್ಲವೆ ಕುಕ್ಕುಟಾಭಾವದ ದಿನವೆಂದು ಜಾಹೀರು ಪಡಿಸಿಲ್ಲ. ಎಂದೂ ಉಪವಾಸವಿದ್ದು ಗೊತ್ತಿಲ್ಲದ ಮತ್ತು ಯುದ್ಧ, ಭೂಕಂಪ, ಕ್ಷಾಮ, ರೋಗ ಅಟಂಬಾಂಬಿನೇಟು ಈ ಯಾವುದೊಂದನ್ನೂ ಕಾಣದ ಅಮೇರಿಕದ ಉಂಡುಮುಲಗರಿಗೆ ಜಗತ್ತಿನ ಕಷ್ಟ ಸುಖ ತಿಳಿಯುವ ಬಗೆಯೆಂತು ? ಯುದ್ಧ ಕಾಲದಲ್ಲಿ ಎಲ್ಲ ದೇಶಗಳಿಗೆ ಅನ್ನ ಅಸ್ತ್ರ ವಸ್ತ್ರ ವಗೈರೆಗಳನ್ನು ಮಾರಿ ಕುಬೇರರಾದ ಅಮೇರಿಕನ್ನರು ಟ್ರೂಮನ್ನರ ಉಪದೇಶವನ್ನು ಗಾಳಿಗೆ ತೂರಿದ್ದು ಆಶ್ಚರ್ಯವಲ್ಲ.ಜಗತ್ತಿನ ಇತರ ದೇಶಗಳಲ್ಲಿಯಂತೆ ರೇಶನ್ ಪದ್ಧತಿಯನ್ನು ಜಾರಿಗೆ ತರಲು ಕಾಯಿದೆ ಪಾಸುಮಾಡಲು ಟ್ರೂಮನ್ನರಿಗೆ ಧೈರ್ಯವಿಲ್ಲ. ಗಟ್ಟಿಯಾಗಿ ಕೇಳಿದರೆ ಅವರಿಗಾದರೂ ಏನು ಜನತ್ತಿನ ಸುಖದುಃಖದ ಬಗ್ಗೆ ಹೊಣೆ? ಚುನಾವಣೆಯಲ್ಲಿ ತಮ್ಮ ಸ್ಥಾನ ಕಾದುಕೊಳ್ಳುವುದಕ್ಕೆ ಯೇನ ಕೇನ ಪ್ರಕಾರೇಣ ಪ್ರಯತ್ನಿಸಿ ಬಿಟ್ಟರೆ ಅವರ ಚತುರ್ವಿಧ ಪುರುಷಾರ್ಥ ಕೈಗೂಡಿದಂತಲ್ಲವೆ? ಸುಂಕದವನ ಮುಂದೆ ಸುಖದುಃಖ ಹೇಳಿಕೊಂಡಂತೆ ಜಗತ್ತು ಅಮೇರಿಕದ ಮುಂದೆ ಅಂಗಲಾಚುವುದು ನಿಷ್ಫಲವೇ ಸರಿಯೆಂದು ಇನ್ನಾದರೂ ಜಗತ್ತಿನ ಗೋಸ್ವಭಾವದ ಸಜ್ಜಂಭಟ್ಟರು ತಿಳಿದುಕೊಂಡು ತಮ್ಮ ಕಾಲ ಮೇಲೇ ಅವಲಂಬಿಸಲು ಹೆಣಗ ಬೇಕಾಗಿದೆ ಯೆಂಬುದು ನಗ್ನಸತ್ಯ, ಅನಿವಾರ್ಯ ಕಾರ್ಯ.

ಮಂಚೂರಿಯದಲ್ಲಿ ಭೀಕರ ಕಾಳಗ

ಚೀನದ ಯಾದವಿಯಲ್ಲಿ ಮಂಚೂರಿಯದ ಕಾಳಗವೊಂದು ಮಹಾ ಘೋರಾಂಕವೆನಿಸಿದೆ. ಕಮ್ಯೂನಿಸ್ಟರು ಶಕ್ತಿಮೀರಿ ಉಗ್ರದಾಳಿ ಮಾಡುತ್ತಿರುವರೆಂದೂ ಅದನ್ನು ಭಗೀರಥ ಪ್ರಯತ್ನದಿಂದ ಚಿಯಾಂಗರ ಸೈನ್ಯ ಪ್ರತಿಭಟಿಸುತ್ತಿದೆಯೆಂದೂ ತಿಳಿಯುತ್ತದೆ. ಸರಕಾರಿ ದಳಗಳು ಮುಕ್ಡೆನ್ನಿನಿಂದ ರಾಜಧಾನಿಗಿರುವ ಸಂಪರ್ಕವನ್ನು ಕಡಿದುಹಾಕಲು ಕಮ್ಯುನಿಸ್ಟರು ಮಾಡಿದ ಹಲ್ಲೆಗಳನ್ನು ಹಿಮ್ಮೆಟ್ಟಿಸಿ ಓಡಿಸಿದ್ದಾರೆಂದು ಈಚಿನ ಸುದ್ದಿ. ಈ ಏಕಮುಖದ ವಾರ್ತೆಯ ಸತ್ಯಾಂಶಗಳೆಷ್ಟೇ ಇದ್ದರೂ ಅಂತಃಕಲಹದಿಂದ ದೇಶಕ್ಕಾಗುವ ನಷ್ಟವನ್ನು ಎಣಿಸಿದರೆ ಯಾರ ಮೈಯಾದರೂ ಜುಮ್ಮೆನ್ನದಿರದು. ಸೇಕುಂಗ ಪ್ರದೇಶವನ್ನು ಪ್ರಯಾಸದಿಂದ ಸರಕಾರಿ ದಲಗಳ ಹಿಡಿದು ಇದೀಗ ಕಮ್ಯುನಿಸ್ಟರನ್ನು ಶಾನ್ಸಿ ಪ್ರದೇಶಕ್ಕೆ ಓಡಿಸಿದವೆಂದು ಹೇಳಲಾಗುತ್ತದೆ. ಅಮೇರಿಕದ ಹಿಮಾಲಯೋಪಮ ಅಶ್ರಯವಿರುವಾಗ ಚಿಯಾಂಗ ಕೈಶೇಕರ ಕೈಯಾದರೂ ಹೇಗೆ ಸೋತೀತು? ಜಗತ್ತಿನ ರಾಷ್ಟ್ರ ರಾಷ್ಟ್ರಗಳಲ್ಲಿ ಕಲಹವಾದ್ದಕ್ಕಿಂತ ಹೆಚ್ಚು ಕರುಣಜನಕವಾದ ಈ ಕಲಹ ಎಂದು ಮುಗಿದೀತೆಂಬುದೇ ತಿಳಿಯಲಾರದಾಗಿದೆ.

ಗ್ಲಾಸ್ಗೋದಲ್ಲಿ ವರ್ಣದ್ವೇಷ

ಇಂಗ್ಲಂಡಿನ ಗ್ಲಾಸ್ಗೋಪಟ್ಟಣದ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಹಿಂದೀ ವಿದ್ಯಾರ್ಥಿಗಳು ಬಹಳಸಲ ವರ್ಣದ್ವೇಷಕ್ಕೆ ಬಲಿಯಾಗಿದ್ದಾರೆ. ಆ ಪಟ್ಟಣದ ಭೋಜನಗೃಹದ ಮಾಲಕರು ಹಿಂದೀವಿದ್ಯಾರ್ಥಿಗಳಿಗೆ ಊಟಹಾಕಲೊಲ್ಲೆವೆಂಬುದಲ್ಲದೆ ಒಂದುವೇಳೆ ಹಾಕಲೊಪ್ಪಿದರೂ ದ್ವಿಗುಣದಕ್ಷಿಣೆವನ್ನು ಬೇಡುವರಂತೆ. ಪ್ಲಾಜಾ ಎಂಬ ಅಲ್ಲಿಯ ಸಾರ್ವಜನಿಕ ನೃತ್ಯಶಾಲೆಯಲ್ಲಿಯೂ ಹಾಗೇ ಭಾರತೀಯ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲವೆಂದು ಶ್ರೀ ಪ್ರಬೀರರಾಯರು ಹೇಳುತ್ತಾರೆ.

ಗ್ಲಾಸ್ಗೋ ವಿಶ್ವವಿದ್ಯಾಲಯದ ರಸಾಯನಶಿಲ್ಪ ವಿದ್ಯಾರ್ಥಿಗಳಾದ ಶ್ರೀ ಪ್ರಬೀರರೂ ಇಂಥ ನ ವಿಜ್ಞಾನದ ಅಧ್ಯಾಯಿಗಳಾದ ಶ್ರೀ ರಂಜನ ಬ್ಯಾನರ್ಜಿಯವರೂ ಕಾಲೇಜುಗಳಲ್ಲಿ ಹಿಂದೀ ವಿದಾರ್ಥಿಗಳಿಗೆ ಕೇವಲ ತಾತ್ವಿಕ ಉಪದೇಶ ಕೇಳಲವಕಾಶ ಕೊಡಲಾಗುವುದೆಂದೂ ಕೈಗೆಲಸದ ತರಬೇತಿ ಪಡೆಯಲು ಅನುಕೂಲಮಾಡಿ ಕೊಡಲಾಗುತ್ತಿಲ್ಲವೆಂದೂ ತಿಳಿಸುತ್ತಾರೆ.

ವಿಶ್ವಸ್ತಮಂಡಲ ಸಮಿತಿಯಲ್ಲಿ ಭಾರತದ ವಿಜಯ

ವಸಾಹತು ಪ್ರಭುತ್ವದ ಸರಕಾರಗಳು (ಅರ್ಥಾತ್ ಪರತಂತ್ರ ರಾಷ್ಟ್ರಗಳಲ್ಲಿಯ ಅಧಿಕೃತ ಸರಕಾರಗಳು) ಒಪ್ಪಿಸುವ ಆಡಳಿತ ವರದಿಗಳನ್ನು ಸಂ. ರಾ. ಸಂಘದ ಸಭೆಸೇರುವುದಕ್ಕೆ ೩ ವಾರಗಳ ಹಿಂದೆ ಪರಿಶೀಲಿಸಲು ಒಂದು ವಿಶೇಷ ಸಮಿತಿಯನ್ನು ನಿಯಮಿಸಬೇಕೆಂದು ಸಂಘದ ಸಾಮಾನ್ಯಸಭೆಗೆ ಭಾರತಮಾಡಿದ ಸೂಚನೆಯನ್ನು ಸಮರ್ಥಿಸಿ ಇಲ್ಲಿಯ ಪ್ರತಿನಿಧಿಗಳಾದ ಸರ್ ಮಹಾರಾಜ ಸಿಂಗರು ನೂತನಾಡಿ ವಿಜಯಶಾಲಿಗಳಾದರು. ಭಾರತದ ಈ ಸೂಚನೆಗೆ ಸೋವಿಯಟ್ ರಶಿಯವು ಬಲವಾಗಿ ಬೆಂಬಲವಿತ್ತಿತು. ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ದೇಶಗಳು ಈ ಸೂಚನೆ ಸಂಘದ ಅಧಾರತತ್ವಪಟದಮೇರೆ ಮೀರಿಹೋಗುತ್ತದೆಂದು ವಾದಿಸಿದವು. ಅದರೆ ೧೯ ವಿರುದ್ಧ ಮತ್ತು ೨೩ ಅನುಕೂಲಮತಗಳಿಂದ ಸಮಿತಿ ಸೂಚನೆಯನ್ನು ಪಾಸುಮಾಡಿತು. ಅದರೆ ಬಹಿರಂಗ ಅಧಿವೇಶನದಲ್ಲಿ ಅದು ಬಿದ್ದುಹೋಗಬಹುದೆಂದು ಹೇಳಲಾಗುತ್ತದೆ. ಇದರಿಂದ ಸಾಮ್ರಾಜ್ಯವಾದದ ಭಕ್ತರಾದ ಸಾಮ್ರಾಜ್ಯವಂತ ರಾಷ್ಟ್ರಗಳು ಭಾರತದ ಸಾಮ್ರಾಜ್ಯವಾದ ವಿರೋಧ ಧೋರಣಸಹಿಸದೆ ಮೇಲಿನ ಸೂಚನೆಯನ್ನು ಕೆಳಗೆಡಹಲು ನಿರ್ಧರಿಸಿವೆಯೆಂಬುದು ಸ್ಪಷ್ಟವಾಗುತ್ತದೆ. ಸಂಸಾರಿಯ ಬಗ್ಗೆ ಪರಿಹಾಸರು ಹೇಳುತ್ತಾರೆ: ಕತ್ತಲದಸಿದ ದಾಪಿಯ ನಡುವೆ ಅಂತರಾಳದಲ್ಲಿ ದುರ್ಬಲವಾದ ಬೇರೊಂದನ್ನು ಬಗಲಲ್ಲಿ ಹಿಡಿದು ನೇತಾಡುತ್ತಿದ್ದೂ ಅದರ ಮೇಲೆ ಜೋತಬಿದ್ದ ಜೇನುಗೂಡಿನಿಂದ ತೊಟ್ಟಿಕ್ಕುವ ಜೇನು ತುಪ್ಪಕ್ಕೆ ನಾಲಿಗೆ ಚಾಚುವನಂತೆ! ಹಾಗೇ ಸ್ವದೇಶದಲ್ಲಿ ಆಹಾರಾಭಾವದಿಂದ ನರಳುತ್ತಿರುವಾಗ, ಸಾಮ್ರಾಜ್ಯದ ಬಹುಭಾಗಗಳಲ್ಲಿ ಸ್ವಾತಂತ್ರ್ಯ ಚಳವಳ ಯಶಸ್ವಿಯಾದುದನ್ನು ಮತ್ತು ಆಗುತ್ತಿರುವದನ್ನು ಕಾಣುತ್ತಿರುವಾಗ ಇಂಗ್ಲೆಂಡು ಮೊದಲಾದ ಸಾಮ್ರಾಜ್ಯದೊಡೆಯರು ತಾವು ವಸಾಹತುಗಳಲ್ಲಿ ಮಾಡುವ ಕಾರಭಾರ ಜಗತ್ತಿನ ದೃಷ್ಟಿಗೆ ಬೀಳುವಂತಾಗಬಾರದೆಂದು ಹೊಂಚುಹಾಕುವುದು ಜಗತ್ತಿಗೆ ಶುಭಸೂಚಕವಲ್ಲ. ಇನ್ನೂ ಅವರ ಸಾಮ್ರಾಜ್ಯವಾಳುವ ಮಧುಪಿಪಾಸೆ ಅಳಿಯದಿದ್ದರೆ ಎಚ್ಚತ್ತ ಏಶಿಯ ಒಕ್ಕಟ್ಟಾಗಿ ನಿಂದು ಸಮಯ ಸಾಧಿಸಿ ಕೆಲವು ಕಹಿಗುಳಿಗೆಕೊಡದಿದ್ದರೆ ಪರಿಣಾಮ ನೆಟ್ಟಗಾಗಲಾರದು.

ಹಿಂದೀ ಕಲೆಯಲ್ಲಿ ಹೆಚ್ಚುತ್ತಿರುವ ಆಸಕ್ತಿ

ಬರಲಿರುವ ಬರ್ಲಿಂಗಟನ್ ಕಲಾಪ್ರದರ್ಶನದ ಸುದ್ದಿಯಿಂದ ಲಂಡನ್ನಿನಲ್ಲಿ ಹಿಂದೀಚಿತ್ರಕಲೆಯಲ್ಲಿಯ ಆಸಕ್ತಿ ವಿಶೇಷವಾಗಿ ಹೆಚ್ಚಲಾರಂಭಿಸಿದೆ. ವಸ್ತುಸಂಗ್ರಹಾಲಯಗಳ ಹಾಗೂ ಚಿತ್ರ ಪ್ರದರ್ಶನಾಲಯಗಳ ಅಧಿಕಾರಿಗಳನ್ನು ಹಿಂದೀ ಚಿತ್ರಗಳನ್ನು ಕುರಿತು ಅನೇಕರು ಕೇಳಹತ್ತಿದ್ದಾರೆ. ಈ ಕೇಳಿಕೆಗಳನ್ನು ಉತ್ತರಿಸಲು ಬ್ರಿಟಿಶ್ ವಸ್ತು ಸಂಗ್ರಹಾಲಯದ ಪೌರಸ್ತ್ಯ ಪ್ರಾಚೀನ ವಸ್ತು ಸಂಗ್ರಹ ಶಾಲೆಯ ಅಧಿಕಾರಿಗಳಾದ ಶ್ರೀ ಬೇಸಿಲ್‌ಗ್ರೇಯವರು ಚಿಕ್ಕದಾದರೂ ಸೊಗಸಾದ ಒಂದು ಹಿಂದೀ ವರ್ಣಚಿತ್ರಗಳ ಪ್ರದರ್ಶನವನ್ನು ಯೋಜಿಸಿದ್ದಾರೆ.

ಬಹಳ ವರ್ಷಗಳಿಂದ ಬ್ರಿಟಿಶ ಜನತೆಗೆ ಪ್ರಿಯವಾಗಿರುವ ಮೊಗಲ ವರ್ಣ ಚಿತ್ರಗಳನ್ನು ಇಲ್ಲಿ ಇಡಲಾಗಿದೆ. ಅವರಿಗೆ ಬೇಕಾದ ಉತ್ಸವೋಚಿತವಾದ ಗೃಹಸಹಜ ವಿವರಗಳೂ ಹೊಳೆದ ಬಣ್ಣಗಳೂ ಅವುಗಳಲ್ಲಿರುವುದರಿಂದ ಕ್ರಿಸ್‌ಮಸ್ ಕಾರ್ಡಿನ ತಯಾರಿಕೆಗೆ ಅವುಗಳ ನಕಲನ್ನು ತೆಗೆದುಕೊಂಡು ಹೋಗಲು ಮತ್ತು ನೋಡಿ ಸಂತೋಷ ಪಡಲು ರಸಿಕರು ಪುನಃ ಪುನಃ ಪ್ರದರ್ಶನ ಶಾಲೆಗೆ ಭೆಟ್ಟಿ ಕೊಡುತ್ತಾರೆ. ಕಾಲೋಚಿತವಾದ ಉಡುಪಿನಲ್ಲಿ ಭೀಮಕಾಯರಾಗಿಯೂ ಉದ್ಧತ ಭಂಗಿಯುಳ್ಳವರಾಯೂ ಹಿಂದೀ ಕಲೆಗಾರರಿಂದ ಚಿತ್ರಿಸಲ್ಪಟ್ಟ ೧೮ನೇ ಶತಮಾನದ ಬ್ರಿಟಿಶ ವ್ಯಾಪಾರಿಗಳ ಚಿತ್ರಗಳನ್ನು ನೋಡುವುದರಲ್ಲಿಯಂತೂ ಬಹಳ ಜನಪ್ರೇಕ್ಷಕರು ತೃಪ್ತಿಬಡುತ್ತಾರೆ. ಇದಲ್ಲದೆ ಲಂಡನ್ನಿನ ಭಾರತ ಭವನದಲ್ಲಿ ಇರಿಸಲಾದ ಹಂಗೇರಿಯ ತರುಣ ಛಾಯಾಚಿತ್ರ ಗ್ರಾಹಕರೊಬ್ಬರ ಹಿಂದೀ ದೃಶ್ಯಗಳ ಮಾಲಿಕೆಯೂ ಬಹುಜನರ ಲಕ್ಷ್ಯವನ್ನು ಸೆಳೆದಿದೆ.

ಚೈಲ ಯುಗೋಸ್ಲೆವಿಯಾ ಮೈತ್ರಿಭಂಗ

ಚೈಲಿನಲ್ಲಿರುವ (ದ. ಅಮೇರಿಕ) ಯುಗೋಸ್ಲೇವಿಯಾದ ಇಬ್ಬರು ರಾಯಭಾರ ಪ್ರತಿನಿಧಿಗಳನ್ನು ಬಹುದೊಡ್ಡ ದ್ರೋಹಕಾರಕ ಕಮ್ಯುನಿಸ್ಟ ಸಂಘದ ಗೂಢಚಾರ ದಲವನ್ನು ಸಂಘಟಿಸುತ್ತಿದ್ದರು" ಎಂಬ ಆರೋಪದ ಮೇಲೆ ದೇಶದಿಂದ ಹೊರಗಟ್ಟಲಾಯಿತು. ಇದು ಅಂಗ್ಲೋ ಅಮೇರಿಕನ್ನರ ಪ್ರಸಾದನ ವ್ರತದ ಪ್ರಥಮ ಪೂಜೆಯೆಂದು ಹೇಳಲಾಗಿದೆ. ಈ ಸಾಮ್ರಾಜ್ಯವಾದಿ ರಾಷ್ಟ್ರಗಳು ತಮ್ಮ ವರ್ಚಸ್ಸಿಗೊಳಗಾದ ಸಣ್ಣ ರಾಷ್ಟ್ರಗಳಲ್ಲಿ ಅನಧಿಕೃತ ಸರ್ವಾಧಿಕಾರಿಗಳಾಗಿ ಒಳ ಆಡಳಿತದಲ್ಲಿ ಕೂಡ ಕೈಹಾಕುವುದು ಅವರ ದುರ್ವ್ಯಸನವೇ ಆಗಿಬಿಟ್ಟಿದೆ. ಅಂತರಾಷ್ಟ್ರೀಯ ಕಮ್ಯುನಿಸ್ಟ ಸಂಘದ ಪುನರುದ್ಘಾಟನೆಗೆ ಬಂಡವಲಶಾಹಿಯ ಪ್ರಥಮ ಪ್ರತೀಕಾರವಿದೆಂದು ಹೇಳಬಹುದು. ಜಗತ್ತಿನ ನಾನಾಭಾಗಗಳಲ್ಲಿ ಏಳಲಿರುವ ಯುದ್ಧಾಗ್ನಿಗೆ ಇಲ್ಲೊಂದು ಬಾರಿ ಗಾಳಿಬೀಸಿದಂತಾಯಿತು.

ದರ್ಬಾನಿನಲ್ಲಿ ಹಿಂದೀಯರ ಬಂಧನ

ದರ್ಬಾನಿನಲ್ಲಿ ೫ ಹೆಂಗಸರು ಕೂಡಿ ಒಟ್ಟು ೩೯ ಜನ ಹಿಂದೀಯರಿಗೆ ಅನಧಿಕೃತ ಸ್ಥಲವನ್ನು ಆಕ್ರಮಿಸಿದ ಅಪಾದನೆಯ ಮೇಲೆ ತಲಾ ೩ ಪೌಂಡದಂಡ ಇಲ್ಲವೆ ೩೦ ದಿನಗಳ ಶಿಕ್ಷೆ ವಿಧಿಸ[illegible] ಅವರೆ ಎಲ್ಲ ಅಪಾದಿತರೂ ದಂಡ ಕೊಡ[illegible] ಜೈಲನ್ನೇ ಸ್ವಾಗತಿಸಿದರೆಂದು ತಿಳಿ[illegible]

ಅಮೇರಿಕದಲ್ಲಿ ಪ್ರಯಾಣ ಸೌಕರ್ಯ

ಲೇ:- ಶ್ರೀ ನಾಡಿಗ ಕೃಷ್ಣಮೂರ್ತಿ

—ವಿಶೇಷ ಲೇಖನ ೬—

ಅಮೇರಿಕದ ದೊಡ್ಡ ಮತ್ತು ಸಣ್ಣ ಪಟ್ಟಣಗಳಿಗೆ ಸಾಮಾನ್ಯವಾಗಿ ರೈಲುಪ್ರಯಾಣ ಸೌಕರ್ಯವಿದೆ- ದೂರದ ಪಟ್ಟಣಗಳಿಗೆ ಹೋಗಲು ರೇಲ್ವೆ ಪ್ರಯಾಣವೇ ಒಳ್ಳೆಯದು. ಇತ್ತೀಚೆಗೆ ವಿಮಾನ ಪ್ರಯಾಣ ದೂರಪಟ್ಟಣಗಳ ಅಂತರವನ್ನು ಕೂಡ ಕಡಿಮೆಮಾಡಿದೆ. ಸ್ಯಾನ್ ಫ್ರಾನ್ಸಿಸ್ಕೊದಿಂದ ನ್ಯೂಯಾರ್ಕಿಗೆ ೩೨೦೦ ಮೈಲು. ವಿಮಾನದಲ್ಲಿ ಬೆಳಿಗ್ಗೆ ೮ ಘಂಟೆಗೆ ಕುಳಿತರೆ ಸಂಜೆ ೬ ಘಂಟೆಗೆ ನ್ಯೂಯಾರ್ಕಿನಲ್ಲಿರಬಹುದು. ಇದು ಶ್ರೀಮಂತರ ಮತ್ತು ಅತಿ ತ್ವರಿತವಾಗಿ ಹೋಗುವವರ ಮಾತು. ಸಾಮಾನ್ಯ ಜನರಿಗೆ ರೇಲ್ವೆಯೇ ಗತಿ.

ಸಾಮಾನ್ಯರೀತಿಯ ಕೋಚ್

ರೇಲ್ವೆ ಪ್ರಯಾಣದಲ್ಲಿ ಅನೇಕ ವಿಧಗಳಿವೆ. ಇವರಲ್ಲಿ ಪ್ರಯಾಣದ ವೆಚ್ಚ ತುಂಬಾ ಕಡಿಮೆಯಾಗುತ್ತದೆ. ಇದರ ಹೆಸರು "ಡೇ ಕೋಚ್" ಆದರೂ ರಾತ್ರಿ ಪ್ರಯಾಣವೂ ಇದರಲ್ಲಿ ಮಾಡಬಹುದು. ಮಲಗಿ ನಿದ್ರಿಸಿ ಪ್ರಯಾಣ ಮಾಡಲು ಸಾಧ್ಯವಾಗುವದಿಲ್ಲ. ಇಳಿಜಾರಾದ ಕುರ್ಚಿಯಲ್ಲಿ ಕುಳಿತು ತುಸು ನಿದ್ರೆ ಮಾಡುತ್ತ ತೂಕಡಿಸುತ್ತ ಇರಬಹುದು. ಒಂದು ಮೈಲಿಗೆ ೨.೨ ಸೆಂಟ್ಸ-ಂದರೆ ನಮ್ಮಲ್ಲಿಯ ಒಂದಾಣೆ ಒಂದು ಕಾಸು. ಅಮೇರಿಕದ ದಕ್ಷಿಣಕ್ಕೆ ಹೋದಹಾಗೆ ಇನ್ನೂ ಕಡಿಮೆ ದರ ಬೀಳುತ್ತದೆ.

ಇತ್ತೀಚೆ ನವೀನರೀತಿಯ ಕೋಚ್‌ಗಳನ್ನು ನಿರ್ಮಿಸಿದ್ದಾರೆ. ಗಾಳಿ ಆಡಲು ಅವಕಾಶವಿದ್ದು ಕುರ್ಚಿಗಳಲ್ಲಿ ಮೆತ್ತೆ ಹಾಕಿದ್ದು ಯಾವ ಕಡೆ ಬೇಕು ಆ ಕಡೆ ತಿರುಗಿಸಲು ಅನುಕೂಲವಿರುತ್ತದೆ. ಗಂಡಸರಿಗೆ ಹೆಂಗಸರಿಗೆ ಬೇರೆ ಬೇರೆಯಾಗಿ ಸ್ನಾನದ ಮನೆಯಿದೆ. ಆದರೆ ಸ್ನಾನಕ್ಕವಕಾಶವಿಲ್ಲ. ಮುಖ ತೊಳೆದುಕೊಳ್ಳಬಹುದು. ಕ್ಷೌರ ಮಾಡಿಕೊಳ್ಳಬಹುದು. ಆರಾಮಾಗಿ ಕುಳಿತುಕೊಂಡು ಹರಟೆಹೊಡೆಯಲು ಎರಡು ಬೆಂಚು ಹಾಕಿದ್ದಾರೆ. ಪಕ್ಕದಲ್ಲಿ ಪಾಯಿಖಾನೆಯ ಗುಂಡಿಯೂ ಇದೆ. ಈ ಕೋಚ್‌ಗಾಡಿಗಳಲ್ಲಿ ಪ್ರತಿಯೊಂದು ಸೀಟಿಗೂ ನಂಬರು ಇರುತ್ತದೆ. ಪ್ರಯಾಣಿಕರು ಟಿಕೆಟ್ಟು ಕೊಂಡಕೊಡಲೆ ಅದರ ಸೀಟಿನ ನಂಬರು ಗೊತ್ತಾಗುತ್ತದೆ. ಹೀಗೆ ಸ್ಥಳ ಮೊದಲೇ ಗೊತ್ತುಮಾಡಿಟ್ಟುಕೊಂಡಿರುವದರಿಂದ ಭಾರತದಲ್ಲಿಯಂತೆ,ರೈಲು ಹೊರಡುವದಕ್ಕೆ ಮುಂಚೆ ಕೆಲವು ನಿಮಿಷಗಳಲ್ಲಿ ಟಿಕೆಟ್ಟುಕೊಂಡು ಅವಸರವಾಗಿಹೋಗಿ ಪ್ರಯಾಣ ಮಾಡುವಂತಿಲ್ಲ. ಕೋಚ್‌ಗಳಲ್ಲಿ ರಾತ್ರಿಪ್ರಯಾಣ ಮಾಡುವವರಿಗೆ ರೇಲ್ವೆ ಗಾರ್ಡುಗಳು ತಲೆದಿಂಬನ್ನು. ರಾತ್ರಿಗಾಗಿ ೨೫ ಸೆಂಟ್ಸಿಗೆ (೦—೧೨—೬) ಬಾಡಿಗೆ ಕೊಡುತ್ತಾರೆ. ಅಮೇರಿಕದಲ್ಲಿ ಸಾಮಾನ್ಯ ಜನರು ಪ್ರಯಾಣಮಾಡುವ ತರಗತಿಇದು.

ಪುಲ್‌ಮನ್ ಗಾಡಿ ಪ್ರಯಾಣ

ನಮ್ಮಲ್ಲಿಯ ಒಂದನೆ ತರಗತಿಯ ಡಬ್ಬಿಗಳಿಗಿಂತ ಅವಕ್ಕಿಂತಲೂ ಸುಂದರವಾಗಿಯೂ, ಸ್ವಚ್ಛವಾಗಿಯೂ, ಅನುಕೂಲವಾಗಿಯೂ ಇವೆ ಈ ಪುಲ್ ಮನ್ ಗಾಡಿಗಳು. ಕೋಚ್ ಗಾಡಿಗಳ ಹಿಂದೆಯೋ ಮುಂದೆಯೋ ಈ ಡಬ್ಬಿಗಳನ್ನು ಹಚ್ಚುತ್ತಾರೆ. ಮೇಲೆ Pullman Travel ಎಂದು ಬರೆದಿರುತ್ತದೆ. ಈ ಪುಲ್‌ಮನ್ ಗಾಡಿಗಳು ರಾತ್ರಿ ಪ್ರಯಾಣಕ್ಕೆ ತುಂಬಾ ಅನುಕೂಲ. ಸುಖವಾಗಿ ನಿದ್ರೆ ಮಾಡಬಹುದು. ಇದಿರು ಬದಿರಾಗಿಯೂ, ಕೆಳಗೂ ಮೇಲೂ ಕಟ್ಟುಹಲಗೆಗಳಿರುತ್ತವೆ. ಈ ಹಲಗೆಗಳು ನಮ್ಮಲ್ಲಿಯವಕ್ಕಿಂತ ಅಗಲವಾಗಿಯೂ ಉದ್ದವಾಗಿಯೂ, ಇವೆ. ಕೆಳಗಡೆ ಹಲಗೆಗೆ ಸ್ವಲ್ಪ ದರ ಜಾಸ್ತಿ. ರಾತ್ರಿ ಮಲಗಲು ಗಾದೆ, ಮಗ್ಗಲುಹಾಸಿಗೆ, ತಲೆದಿಂಬು, ಹೊದಿಕೆ,ಒದಗಿಸುತ್ತಾರೆ. ಇನ್ನೊಬ್ಬರ ಗೊಡವೆ ಬೇಡವೆಂದು ಒಂದು ಪರದೆಯನ್ನು ಹಾಕಿ, ಚಿಕ್ಕ ಕೋಣೆಯೋಪಾದಿಯಲ್ಲಿರುತ್ತದೆ. ಅಲ್ಲಿಯೇ ಒಂದು ದೀಪ, ಓದಲು ಅನುಕೂಲವಾಗುವಂತೆ. ಕುಳಿತುಕೊಳ್ಳುವ ಸೀಟಿನ ಕೆಳಗಡೆ ಸೂಟಕೇಸ್ ಮುಂತಾದ ನಮ್ಮ ಸಾಮಾನುಗಳನ್ನು ಇಡಲು ಅನುಕೂಲವಿರುತ್ತದೆ. ನಮ್ಮ ಬೂಟುಗಳನ್ನು ಕೆಳಗಡೆಯೇ ಇಡಬೇಕು. ರಾತ್ರಿಯ ವೇಳೆಯಲ್ಲಿ ರೈಲ್ವೆ ಪೋರ್ಟರರು, ಈ ಬೂಟುಗಳನ್ನು ಪಾಲಿಷ್ ಮಾಡುತ್ತಾರೆ. ಇಲ್ಲಿಯೂ ಸ್ನಾನಗೃಹವಿದ್ದು ಎಲ್ಲ ಅನುಕೂಲಗಳು ಇವೆ. ಈ ತೆರನಾದ ಗಾಡಿಗಳಿಗೆ, ಸ್ವಲ್ಪ ಬೇರೆಯದಾಗಿ, ಚಿಕಾಗೋ, ಸೆಂಟ್‌ಲೂಯಿಸ್, ಮಧ್ಯ ಓಡಾಡುವ ರೈಲುಗಳಲ್ಲಿ ಮಲಗುವ ಡಬ್ಬಿಗಳಿವೆ. ಪ್ರಯಾಣದರವೂ ಕಡಿಮೆ; ಅನುಕೂಲವೂ ... ಕ್ಕ ಹಾಗೆ. ಈ ಪುಲ್‌ಮನ್ ಗಾಡಿಗಳಲ್ಲಿ, ಪ್ರತ್ಯೇಕವಾಗಿ ಸಂಸಾರವೊಂದಿಗರಿಗೆ ಅನುಕೂಲವಾಗುವಂತೆ ಕೆಲವು ಡಬ್ಬಿಗಳಿವೆ. ಇವುಗಳಿಗೂ ದರ ಜಾಸ್ತಿ. ಗಾಡಿಗಳಲ್ಲಿ ಪ್ರಯಾಣ ಮೈಲು ಒಂದಕ್ಕೆ ೩.೩ ಸೆಂಟ್ಸ್ ಅಂದರೆ ರೂ ೦-೧-೯. ಅಮೇರಿಕದಲ್ಲಿ ಜಾರಿ ಇರುವ ಪದ್ಧತಿಯ ಪ್ರಕಾರ ರೈಲ್ವೆ ಪೋರ್ಟರುಗಳಿಗೆ ರಾತ್ರಿ ಒಂದಕ್ಕೆ ೨೫ ಸೆಂಟ್ಸ್ ಇನಾಮು ಕೊಡಬೇಕು. ಇನಾಮಿಲ್ಲದ ಸೇವೆ ಈ ದೇಶದಲ್ಲಿಲ್ಲವೇ ಇಲ್ಲ.

ರೈಲಿನಲ್ಲಿ ಉಪಹಾರ

ದೂರದ ಪಟ್ಟಣಗಳಿಗೆ ಹೋಗುವ ರೈಲ್ವೆಗಳಲ್ಲಿ ಉಪಹಾರ ಊಟ ಬಡಿಸುವ ಡಬ್ಬಿ ಇರುತ್ತದೆ. ಬೆಳಿಗ್ಗೆ ಬ್ರೆಕ್‌ಫಾಸ್ಟ್, ಮಧ್ಯಾಹ್ನ ಲಂಚ್, ಸಂಜೆ ಸಪ್ಪರ್, ಇಲ್ಲಿ ಯಥಾವತ್ತಾಗಿ ಸಿಕ್ಕುತ್ತದೆ. ಆದರೆ ಇಲ್ಲಿ ಚಪಾತಿಯಾಗಲಿ, ಸಾರು ಹುಳಿಯಾಗಲಿ, ಅನ್ನವಾಗಲಿ, ಮೊಸರಾಗಲಿ ಸಿಕ್ಕುವುದಿಲ್ಲ. ಬೇಯಿಸಿದ ಮಾಂಸ, ಹಸಿತರಕಾರಿ, ಹಾಲು, ಕಾಫಿ, ಹಣ್ಣು, ಬ್ರೆಡ, ತತ್ತಿ ಇವೇ. ಇದೇ ಅಮೇರಿಕದ ಆಹಾರ. ರಸಕವಳ ಭುಂಜಿಸುವ ಕನ್ನಡಿಗರಿಗೆ ಬರೀ ಕನಸು. ಊಟದ ಗಾಡಿಗೆ ಬಂದು ಊಟ ಮಾಡಬೇಕು. ಟೇಬಲ್ ಮೇಲೆ ವೆಯ್ಟರ್ ಊಟದ ವೇಳಾ ಪತ್ರಿಕೆಯ ಪಟ್ಟಿಯನ್ನಿಟ್ಟಿರುತ್ತಾನೆ. ನಮಗೆ ಬೇಕಾದದ್ದನ್ನು ನಾವು ತರಿಸಿಕೊಂಡು ಊಟಮಾಡಬಹುದು. ಊಟವಾದ ನಂತರ, ಈ ವೆಯ್ಟರುಗಳಿಗೆ ಸೇ. ೧೦ ರಂತೆ ಇನಾಮು ಕೊಡಬೇಕು. ಇದಲ್ಲದೆ ರೈಲಿನ ಡಬ್ಬಿಗಳಲ್ಲಿ ಸ್ಯಾಂಡ್ ವಿಚಸ್, ಹಾಲು, ಕಾಫಿ, ಐಸ್ ಕ್ರೀಮ್, ಕ್ಯಾಂಡಿ ಮತ್ತು ಹಣ್ಣುಗಳನ್ನು ಮಾರುತ್ತಾರೆ. ಪ್ರತಿಯೊಂದು ರೈಲ್ವೆ ಸ್ಟೇಷನ್ನುಗಳಲ್ಲಿಯೂ, ವೃತ್ತಪತ್ರಿಕೆಗಳು, ವಾರ ಮತ್ತು ಮಾಸ ಪತ್ರಿಕೆಗಳು, ಮಾರಾಟಕ್ಕೆ ಸಿಕ್ಕುತ್ತವೆ.

ಸಾಮಾನಿನ ವ್ಯವಸ್ಥೆ

ಒಂದೊಂದು ಟಿಕೆಟ್ಟಿಗೆ ೧೫೦ ಪೌಂಡು ಭಾರದ ಸಾಮಾನುಗಳು ರೈಲುಗಾಡಿಗಳಲ್ಲಿ ಪುಕ್ಕಟೆಯಾಗಿ ಸಾಗಿಸಬಹುದು. ಈ ಸಾಮಾನುಗಳನ್ನು ಬ್ಯಾಗೇಜ್ ರೂಮ್ ಗುಮಾಸ್ತ ಕಳುಹಿಸುವ ಜವಾಬ್ದಾರಿ ತೆಗೆದು ಕೊಳ್ಳುತ್ತಾನೆ. ಪ್ರತಿಯೊಂದು ಸಾಮಾನಿಗೆ ನಂಬರು ಇರುವ ಚೀಟಿಯನ್ನಂಟಿಸಿ ಅದರ ಅರ್ಧ ಚೀಟಿಯನ್ನು ನಮಗೆ ಕೊಡುತ್ತಾನೆ. ಈ ಚೀಟಿಗಳನ್ನು ಕಳೆದುಕೊಳ್ಳಬಾರದು. ನಾವು ಪ್ರಯಾಣ ಮಾಡುವ ರೈಲಿನಲ್ಲಿ ಬರುವುದಿಲ್ಲ. ಆ ಕಾರಣ ನಾವು ಹೊರಡುವ ಮುನ್ನ ಸಾಮಾನುಗಳನ್ನು ಸಾಗಿಸುವುದು ಒಳ್ಳೆಯದು. ನಾವು ಉಳಿದಿರುವ ಸ್ಥಳದಿಂದ, ರೈಲ್ವೆ ಸ್ಟೇಷನ್ನಿಗೆ ಹೋಗಲು ಟ್ಯಾಕ್ಸಿ ಕ್ಯಾಬ್‌ಗಳು ಸಿಕ್ಕುತ್ತವೆ, ಈ ದೇಶದಲ್ಲಿ ನ್ಯೂಯಾರ್ಕೊಂದನ್ನು ಬಿಟ್ಟು ಕುದುರೆ ಗಾಡಿಗಳಾಗಲಿ, ಟಾಂಗಾ, ಎತ್ತಿನಗಾಡಿಗಳಾಗಲಿ, ಅಥವಾ ಮದ್ರಾಸಿನಲ್ಲಿರುವಂತೆ ನರವಾಹನಗಳಾಗಲಿ ಇಲ್ಲ. ಎಲ್ಲದಕ್ಕೂ ಟ್ಯಾಕ್ಸಿ ಕ್ಯಾಬ, ಅಥವಾ ಟ್ರಕ್‌ಗಳನ್ನುಪಯೋಗಿಸಬೇಕು. ನಮ್ಮ ಸಾಮಾನುಗಳನ್ನು ವಿಮೆ ಮಾಡಿಸುವುದು ಒಳ್ಳೆಯದು. ಒಂದು ವೇಳೆ ಗೈರುವಿಲಿಯಾದರೆ, ವಿಮೆ ಮಾಡಿಸಿದಷ್ಟು ಸಿಕ್ಕುವುದು. ವಿಮೆಯ ಆಫೀಸು ಸಮೀಪದಲ್ಲಿಯೇ ಇದ್ದು ಕೇವಲ ೧೦ ಸೆಂಟುಗಳು ವಿಮೆಯ ದರವಾಗುವುದು. ಈ ತೆರನಾದ ಕೆಲವು ಕೆಲಸ ಮಾಡಿ ಕೊಡುವ ಬ್ಯಾಗೇಜ್ ಗುಮಾಸ್ತರು ಇನಾಮು ನಿರೀಕ್ಷಿಸುವುದಿಲ್ಲ. ಅವರಿಗೆ ಕೊಡುವ ಪದ್ಧತಿಯೂ ಇಲ್ಲ.

ರೈಲ್ವೆ ಸ್ಟೇಷನ್ನುಗಳಲ್ಲಿ ನಮ್ಮ ಸಾಮಾನುಗಳನ್ನು ಕೆಲವು ಘಂಟೆಗಳ ಕಾಲ ಇಟ್ಟುಕೊಳ್ಳಲು "ಪಾರ್ಸಲ ರೂಮು" ಗಳಿರುತ್ತವೆ. ಸಾಮಾನುಗಳನ್ನು ಈ ಪಾರ್ಸಲ ರೂಮುಗಳಲ್ಲಿಡಲು, ಒಂದೊಂದಕ್ಕೆ ೧೦ ಸೆಂಟ್ಸ್ ಕೊಡಬೇಕು. ಅಲ್ಲಿಯ ಗುಮಾಸ್ತ ಒಂದು ಚೀಟಿಕೊಡುತ್ತಾನೆ. ಆ ಚೀಟಿ ಪುನಃ ತಂದಾಗ ನಮ್ಮ ಸಾಮಾನುಗಳನ್ನು ವಾಪಸು ಕೊಡುತ್ತಾನೆ. ಹೀಗೆ ಸಾಮಾನು ಇಟ್ಟುಕೊಳ್ಳುವ ಅವಧಿ ಒಂದು ದಿನ ಮಾತ್ರ. ಪ್ರತಿ ಹೆಚ್ಚಿನ ದಿನಕ್ಕೂ ಬೇರೆ ಹಣ ಕೊಡಬೇಕು. ಸಾಮಾನುಗಳನ್ನಿಡಲು ಈ ದೇಶದಲ್ಲಿ ಇನ್ನೊಂದು ಪದ್ಧತಿ ಇದೆ. ಪ್ರತಿಯೊಂದು ರೇಲ್ವೆ ಸ್ಟೇಷನ್ನುಗಳ ವೆಯ್ಟಿಂಗ ರೂಮುಗಳ ಹತ್ತಿರ ೫೦, ೬೦, (Steel lockers) ಉಕ್ಕಿನ ಪೆಟ್ಟಿಗೆಗಳ ಬೀರುಗಳಿವೆ. ನಮ್ಮ ಸಾಮಾನನ್ನು ಆ ಪೆಟ್ಟಿಗೆಗಳಲ್ಲಿಟ್ಟು ಆ ಪೆಟ್ಟಿಗೆಯ ಬಾಗಿಲನ್ನು ಮುಚ್ಚಬೇಕು. ಮುಚ್ಚಳದ ಬುಡದಲ್ಲಿ ಒಂದು ತೂತಿರುತ್ತದೆ. ಅಲ್ಲಿ ನಿಗದಿ ಮಾಡಿದ ಹಣ ಹಾಕಿದರೆ ಪೆಟ್ಟಿಗೆಯು ತನ್ನಷ್ಟಕ್ಕೆ ತಾನೇ ಬೀಗ ಹಾಕಿಕೊಂಡು ಬೀಗದ ಕೈ ಹೊರಗೆ ಕೊಡುತ್ತದೆ. ಈ ಬೀಗದ ಕೈಯೇ ನಮ್ಮ ಚೀಟಿ. ಇದಕ್ಕೂ ಕಾಲ ೨೪ ಘಂಟೆ ಮಾತ್ರ.

ರೇಲ್ವೆ ಪ್ರಯಾಣದ ಸುದ್ದಿ ಸಿಕ್ಕುವ ಸ್ಥಳಗಳು

ದೊಡ್ಡ ದೊಡ್ಡ ಸ್ಟೇಷನ್ನುಗಳಲ್ಲಿ 'Information' ಎಂದು ಬೋರ್ಡ ತಗಲು ಹಾಕಿರುವ ಆಫೀಸಿರುತ್ತದೆ. ಇಲ್ಲಿರುವ ಸ್ತ್ರೀ ಕಾರ್ಯಕರ್ತರು, ಅತಿಶೀಘ್ರವಾಗಿ ನಿಮಗೆ ಬೇಕಾದ ಸುದ್ದಿ, ರೈಲು ಹೊರಡುವ ಸಮಯ, ದರ, ಮುಂತಾದವುಗಳನ್ನು ತಿಳಿಸುತ್ತಾರೆ. ಮತ್ತು ರೇಲ್ವೆ ಕಂಪನಿಗಳು ಸ್ವಂತವಾದ ಅನೇಕ ಕಚೇರಿಗಳನ್ನು ನಗರದ ನಾನಾ ಕಡೆಗಳಲ್ಲಿ ತೆರೆದಿರುತ್ತಾರೆ. ಅಲ್ಲಿಯೂ ಸುದ್ದಿ ಸಿಕ್ಕುವುದು, ಟಿಕೆಟ್ಟುಗಳನ್ನೂ ಕೊಂಡು ಕೊಳ್ಳಬಹುದು. ಪ್ರಯಾಣಿಕರ ಸೇವಾ ಸಂಘದ ಪ್ರತಿನಿಧಿಗಳು ಪ್ರತಿಯೊಂದು ದೊಡ್ಡ ಸ್ಟೇಷನ್ನುಗಳಲ್ಲಿಯೂ ಇರುವರು. ಅವರ ಮುಖಾಂತರ ನಗರದ ಉಪಹಾರ ಗೃಹಗಳು, ಉಳಿದುಕೊಳ್ಳಲು ಸ್ಥಳ, ಸ್ಥಳೀಯ ವಿದ್ಯಮಾನ ಇವೆಲ್ಲ ಸಿಕ್ಕುವುದು.

ಬಸ್ಸಿನ ಮೂಲಕ ಪ್ರಯಾಣ

ಈ ದೇಶದ ಯಾವ ಭಾಗದಲ್ಲಾದರೂ ಬಸ್ಸಿನ ಪ್ರಯಾಣಕ್ಕನುಕೂಲವಾದ ರಸ್ತೆಗಳಿರುವುವು. ಕಾರಣ ಕೆಲವು ಕಂಪನಿಗಳು ಸಂಪೂರ್ಣವಾಗಿ ಇಡೀ ದೇಶದ ತುಂಬಾ ಬಸ್ಸುಗಳನ್ನು ಓಡಿಸುತ್ತಾರೆ. ಇದರಲ್ಲಿ 'ಗ್ರೇ ಹೌಂಡ್' ಕಂಪನಿಯ ಸರ್ವೀಸು ಬಹು ಮುಖ್ಯವಾದುದು. ರೇಲ್ವೆಗಳಂತೆಯೇ, ಈ ಬಸ್ಸುಗಳು ಸಾಮಾನುಗಳನ್ನು ದೂರದ ಪ್ರಯಾಣಕ್ಕೂ ಸಾಗಿಸುತ್ತವೆ. ಬಸ್ಸಿನ ಪ್ರಯಾಣದ ದರ ರೈಲ್ವೆದಕ್ಕಿಂತ ಸುಲಭ. ಹೋಗಿ ಬರುವ ಟಿಕೆಟ್ಟು ಕೊಂಡರೆ ಇನ್ನೂ ಕಮ್ಮಿ ಚಾರ್ಜು ಬೀಳುತ್ತದೆ. ಬಸ್ಸಿನ ಪ್ರಯಾಣದಲ್ಲಿ ಇನಾಮು ಕೊಡುವ ಪದ್ಧತಿಯಿಲ್ಲ. ದೂರದ ಪ್ರಯಾಣದಲ್ಲಿ ಬಸ್ಸುಗಳು ಮಧ್ಯ ವಿಶ್ರಾಂತಿ, ಉಪಹಾರಕ್ಕೋಸ್ಕರವಾಗಿ ನಿಲ್ಲುವುವು.

ಸ್ಥಳವಿದ್ಯಮಾನ

ಪತ್ರಿಕೆ ಮಾರುವ ಅಂಗಡಿ, ಅಥವಾ ಡ್ರಗ್ ಸ್ಟೋರುಗಳಲ್ಲಿ ನಗರದ ನಕ್ಷೆಯೊಂದಿಗಿರುವ ಮಾಹಿತಿ ಪುಸ್ತಕ ಸಿಕ್ಕುವುದು. ಇದಕ್ಕಿಂತ ಹೊಸಬರಿಗೆ ಟ್ಯಾಕ್ಸಿ ಕ್ಯಾಬ್ ಪ್ರಯೋಜನ ಬಹಳ. ಡ್ರೈವರನಿಗೆ ಸಾಮಾನ್ಯವಾಗಿ ಎಲ್ಲ ಸ್ಥಳಗಳು, ವಿದ್ಯಮಾನಗಳು ತಿಳಿದಿರುತ್ತದೆ. ಈ ಟ್ಯಾಕ್ಸಿ ಕ್ಯಾಬ್‌ಗಳಿಗೆ ಒಂದು ನಿರ್ದಿಷ್ಟ ದರವಿದ್ದು ಅದರ ಮೇಲೆ, ದೂರ ಹೋದಷ್ಟು, ಮೀಟರು ತೋರಿಸಿದಷ್ಟು, ಚಾರ್ಜು ಕೊಡಬೇಕು. ಒಂದು ಮೈಲಿಗೆ ೫೦ ಸೆಂಟ್ಸಿಗೆ ಜಾಸ್ತಿ ಆಗುವುದಿಲ್ಲ. ಇದರ ಮೇಲೆ ಟ್ಯಾಕ್ಸಿ ಡ್ರೈವರನಿಗೆ ೧೦ ಸೆಂಟ್ಸ ಇನಾಮು ಕೊಡಬೇಕು. ಬೆಂಗಳೂರಿನ ಜಟ್ಕಾಸಾಹೇಬರು ನಾಲ್ಕಾರು ಜನರನ್ನು ತಮ್ಮ ಜಟ್ಕದಲ್ಲಿ ಕೂಡ್ರಿಸಿಕೊಂಡು, ಅವರವರ ಸ್ಥಳದಲ್ಲಿ ಬಿಡುವಂತೆ, ಈ ಕ್ಯಾಬ್ ಡ್ರೈವರಗಳು ಇಲ್ಲಿಯೂ ಮಾಡುತ್ತಾರೆ. ಯುದ್ಧಾನಂತರ ಈ ತೆರನಾದ ವಾಡಿಕೆ ಬಂದಿದೆಯಂತೆ.

ಇದಲ್ಲದೆ ನಗರದ ನಾನಾ ಭಾಗಗಳಿಗೆ ಹೋಗಲು ಬೊಂಬಾಯಿಯಂತೆ ಟ್ರಾಮ್ ಕಾರುಗಳಿವೆ. ಇಲ್ಲಿ ಅದನ್ನು ಟ್ರಾಲಿ ಕಾರುಗಳೆನ್ನುತ್ತಾರೆ. ಪ್ರಯಾಣಿಕರು, ಮುಂಭಾಗದ ಬಾಗಿಲಲ್ಲಿ ಪ್ರವೇಶಿಸಿ, ತೂತಿರುವ ಸ್ಥಳದಲ್ಲಿ ೫ ಅಥವಾ ೧೦ ಸೆಂಟುಗಳನ್ನು ಹಾಕಬೇಕು. ಒಂದು ಟ್ರಾಲಿಯಿಂದ ಇನ್ನೊಂದಕ್ಕೆ ಹೋಗಲು ಬೇರೆ ಚೀಟಿಗಳನ್ನು ಕೊಡುತ್ತಾರೆ. ಬೇರೆ ಚಾರ್ಜು ಕೊಡಬೇಕಾದಲ್ಲಿ ಒಂದು ದಿನಕ್ಕಾಗಲಿ, ಅಥವಾ ವಾರದ ಟಿಕೆಟ್ಟುಗಳನ್ನು ಪಡೆದು ಎಷ್ಟು ಸಲ ಬೇಕಷ್ಟು ಸಲ ಈ ಟ್ರಾಲಿಗಳಲ್ಲಿ ಪ್ರಯಾಣ ಮಾಡಬಹುದು.

ಈ ಆಧುನಿಕ ನಗರಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದೀಪಗಳನ್ನು ಕೈದೀವಿಗೆಯನ್ನಾಗಿ ಮಾಡಿದ್ದಾರೆ. ಕೆಂಪು ಹಸಿರು ದೀಪಗಳು ತಮ್ಮಷ್ಟಕ್ಕೆ ತಾವೆ ಒಂದೊಂದು ನಿಮಿಷಕ್ಕೆ ಹತ್ತುತ್ತವೆ. ಹಸಿರು ದೀಪ ಬಂದಾಗ ಪ್ರಯಾಣಿಕರು ರಸ್ತೆಯನ್ನು ದಾಟಬೇಕು; ಕೆಂಪು ಬಂದಾಗ ಬಸ್ಸು, ಸೈಕಲ್, ಟ್ರಕ್‌ಗಳು ಹೋಗಲು ದಾರಿ ಬಿಡಬೇಕು. ಈ ನಿಯಮ ತಪ್ಪಿನಡೆದರೆ ಪೋಲೀಸ್ ಕಾದೇ ಇರುತ್ತಾನೆ. ಈ ನಿಯಮವನ್ನು ನಮ್ಮವರು ತಿಳಿಯಬೇಕಾದುದು ಒಳ್ಳೆಯದು. ನ್ಯೂಯಾರ್ಕ ನಗರದಲ್ಲಿ ಈ ನಿಯಮ ಸ್ವಲ್ಪ ಸಡಿಲ; ಕಾರಣ, ಜನಸಂಖ್ಯೆ ಮತ್ತು ಪ್ರಯಾಣ ಬಹಳವಾದ್ದರಿಂದ.

ವಿಮಾನ ಪ್ರಯಾಣ

ಇತ್ತೀಚೆಗೆ ವಿಮಾನ ಪ್ರಯಾಣ ಜಾರಿಗೆ ಬರುತ್ತಲಿದೆ. ಅನೇಕ ಮುಖ್ಯ ಪಟ್ಟಣಗಳಲ್ಲಿ ನಿಲ್ದಾಣ ಕೇಂದ್ರಗಳನ್ನು ನಿರ್ಮಿಸಿದ್ದಾರೆ. ಚಾರ್ಜು ಕಡಿಮೆ ಮಾಡುತ್ತಲಿದ್ದಾರೆ. ರೇಲ್ವೆ ಪ್ರಯಾಣಕ್ಕಿಂತ ಸ್ವಲ್ಪ ಜಾಸ್ತಿ ಕೊಡಬೇಕಾಗುತ್ತದೆ. ಸೆಂಟಲೂಯಿಸ್‌ನಿಂದ ನ್ಯೂಯಾರ್ಕಿಗೆ ರೈಲಿನಲ್ಲಿ ೨೬ ಘಂಟೆಗಳ ಪ್ರಯಾಣ, ೩೨ ಡಾಲರು; ವಿಮಾನದಲ್ಲಿ ೫೪ ಡಾಲರು ಚಾರ್ಜು, ೬ ಗಂಟೆಗಳ ಪ್ರಯಾಣ; ದೂರ ೧೫೦೦ ಮೈಲು. ಇತ್ತೀಚೆಗೆ ವಿಮಾನ ಅನಾಹುತಗಳು ಜಾಸ್ತಿ ಆಗುತ್ತಲಿದ್ದರೂ, ಪ್ರಯಾಣಿಕರೇನೂ ಕಡಿಮೆಯಾಗಿಲ್ಲ. ಹೊಸಬರು ಒಂದು ಸಲ ಈ ವಿಮಾನ ಪ್ರಯಾಣದ ವೈಖರಿಯನ್ನು ರುಚಿ ನೋಡಬೇಕು; ಧೈರ್ಯವಿರಬೇಕು ಅಷ್ಟೆ!

ಕನ್ನಡದ ಗುಡಿ

೧

ಹಾರು ಕನ್ನಡದ ಬೀರ ಗುಡಿಯೆ! ತಲೆ-
ಮಾರು ಮಾರಿನಿಂದ—
ತಪಿಸೆ ದೇವ ಕಂದೆರೆದು ಕನ್ನಡದ
ಜಯಕೆ 'ಅಸ್ತು'ಯೆಂದ!

೨

ಇಂದು ನಾವು ಮುಂದೆದ್ದು ದೈವ ಕೃಪೆ
ಬಳಸಿಕೊಳ್ಳಬೇಕು;
ಮಂದ ಗಮನವನ್ನುಳಿದು ಗಾಳಿದೇ-
ರೇರಿ ಸಾಗಬೇಕು!

೩

'ಕನ್ನಡಮ್ಮ!' ಯೆಂದಂದಿನಿಂದ ಕ-
ಣ್ಣೀರುಗರೆದ ನಮ್ಮ
ಅಣ್ಣ ತಮ್ಮದಿರ ಕಾಯ್ಪು ಕಡುಗಿ ಕರ-
ವಾಳವಾಗ ಲೆಮ್ಮ!

೪

ದೇವ ದಾನವರೆ ಅಡ್ಡ ಬಂದರೂ
ಕೇಳಲೊಲ್ಲೆ ವಿನ್ನು—
ಜಾವಜಾವಕೂ ಉರಿಯುತಿರುವುದು-
ತ್ಯಂಕೆ ತೆರೆದ ಕಣ್ಣು!

೫

ನಾಡಹಬ್ಬವೀ ನಾಡಿನೇಳಿಗೆಯ
ನಾಂದಿಯಾಗಿ ನಿಲಲಿ!
ಮೂಡಿ ಬರಲಿ ಮಿಂಚಂತೆ ಹುರುಪು ನರ-
ನಾಡಿ ನಾಡಿಗಳಲಿ!

೬

'ಉಧೋ'ಯೆಂದು ಕನ್ನಡದ ನೋಂಪಿಯನು
ಹೊತ್ತ ನಾಡ ದಳವೇ,
ಇದೋ ಎತ್ತಿ ಹಿಡಿದೆಮ್ಮ ಬಾವುಟವ
ನಡೆಯಿರಿನ್ನು ತಡವೇ?

ಜಯ ಕರ್ನಾಟಕ!

೨೦-೧೦-೪೭ —ಬ. ಹೆ. ಧೀ.

× × ×

ನೀನರಿವುದೆಂದು ?

ಏಕೊ ದೇವನನು ವಂಚಿಸಬಯಸುವೆ?
ಹೋಕೆ! ಅಂತರ್ಯಾಮಿ ಮರುಳನಲ್ಲಾ! ।ಪ।
ಹೆರರ ಗಂಟಲನು ಹಿಸುಕುವೆ, ಮತ್ತೆ ಜನದಿದಿರು
ತಿರುಬೊಬ್ಬೆಯಿಡುವೆಯೆಲೆ ಲಜ್ಜೆದೊರೆದು! ॥
ಅರಿಯದಿರೆ ನಿನ್ನ ಕೊಲೆಗೆಯ್ತವನು ಜನವು,ಮೆ-
ಯ್ಮರೆತು ಮಲಗುವನೇನೊ ಲೋಕಪಿತನು? ॥೧॥
ಸುಲಿವೆ ನಿರ್ದಯನಾಗಿ,ಸುಡುವೆ ನಿರ್ಘೃಣನಾಗಿ
ಕೊಲುವೆಯೆಲೊ ಕಲ್ಲೆದೆಯ ಕಟುಕನಾಗಿ! ॥
ಕೊಲೆಗಡಿಕ; ಮತ್ತೆ ನೀತಿಯ ಮಾತುಗಳ
ನೊರೆಯು-
ತಲೆವೆಯೆಲೊ ನೀತಿಯನು ತಿಪ್ಪೆಗೆಸೆದು! ॥೨॥
ಎಂದೊ ನೀನೆಂಬ ನೀತಿಯನು ನಂಬುವೆಯೊ ?
ನಿ-
ನ್ನಿಂದೆ ನೊಂದಿಹ ಜಗವು ಗೋಳಿಡುತಿದೆ! ॥
ಬೆಂದೆದೆಯ ಬಿಸಿಯುಸಿರಿನಿಂದೆ ಕಿಡುಕನ
ಬದುಕು
ಕಂದದಿರದೆಂದು ನೀನರಿವುದೆಂದೋ ? ॥೩॥

—ಸಾ. ರಾ.

ಸಿರಿಯಾ ಸರಕಾರದ ಘೋಷಣೆ

ಪಾಲಿಸ್ತಾನವು ಸ್ವತಂತ್ರಗೊಳಿಸಲ್ಪಟ್ಟು ಅರಬ ಸರಕಾರವು ಪ್ರಸ್ಥಾಪಿಸಲ್ಪಡಬೇಕೆಂದು ಅರಬ ಲೀಗಿನವರು ಸ್ವೀಕರಿಸಿದ ಧೋರಣಕ್ಕೆ ಸಿರಿಯಾದ ಅನಿರ್ಬಂಧ ಬೆಂಬಲವಿರುವದೆಂದು ಜಮೀಲ ಮರ್ಧಮಬೇ ಅವರ ಹೊಸ ಸಿರಿಯನ್ ಸರಕಾರವು ಪಾರ್ಲಮೆಂಟನಲ್ಲಿ ಘೋಷಿಸಿತು.

ಪ್ರಜಾಸತ್ತಾತ್ಮಕ ಆಡಳಿತೆಯನ್ನು ಸಂರಕ್ಷಿಸಲು ಹೊಸ ಸರಕಾರವು ನಿರ್ಧರಿಸಿರುವದೆಂದೂ ಅದರ ವಿರುದ್ಧ ನಡೆಯುವ ಪ್ರಯತ್ನಗಳನ್ನೆಲ್ಲ ಅದು ವಿರೋಧಿಸುವದೆಂದೂ ಘೋಷಣೆಯಲ್ಲಿ ಹೇಳಿ-

ಕರ್ಮವೀರ ಹರಿಜನ ಪುರವಣಿ

ವಿದ್ಯಾರ್ಥಿಯ ಉಭಯ ಸಂಕಟ

(ಮೋ. ಕ. ಗಾಂಧಿ)

ಶಿಕ್ಷಕನೊಬ್ಬನು ತನಗೆ ತನ್ನ ವಿದ್ಯಾರ್ಥಿಯೊಬ್ಬನು ಬರೆದ ಪತ್ರವನ್ನು ನನ್ನ ಕಡೆಗೆ ಅಭಿಪ್ರಾಯಾರ್ಥ ಕಳಿಸಿಕೊಟ್ಟಿದ್ದಾನೆ. ಅದು ಇಂತಿದೆ.

“ರಾಷ್ಟ್ರಪ್ರೇಮ ಮತ್ತು ವಿಷಯ ಲೋಲುಪತೆ ಇವೆರಡು ನನ್ನನ್ನು ಪರವಶನನ್ನಾಗಿಸಿವೆ. ಇವೆರಡೂ ನನ್ನ ನಡೆವಳಿಕೆಯಲ್ಲಿ ಪರಸ್ಪರ ವಿರೋಧಾಭಾಸವನ್ನು ಹುಟ್ಟಿಸುತ್ತಿವೆ; ನನ್ನ ನಿರ್ಣಯಗಳಲ್ಲಿ ಅಸಂಬದ್ಧತೆಯನ್ನು ಕಾಣಿಸಿಕೊಡುತ್ತಿವೆ. ನಾನು ಉತ್ತಮ ರೀತಿಯ ರಾಷ್ಟ್ರಸೇವಕನೂ ಆಗಬೇಕು ಐಹಿಕಸುಖೋಪಭೋಗಗಳನ್ನೂ ಸವಿಯಬೇಕು ಎಂಬ ಇಚ್ಛೆಯುಳ್ಳವನಾಗಿದ್ದೇನೆ. ದೇವರಲ್ಲಿ ನನಗೆ ನಂಬುಗೆಯಿಲ್ಲವಾದರೂ ಒಮ್ಮೊಮ್ಮೆ ನಾನವನಿಗೆ ಹೆದರಿ ಕೈಕಾಲು ಕಳೆದುಕೊಂಡಿದ್ದೇನೆ. ಜೀವನವೇ ನನಗೊಂದು ಸಮಸ್ಯೆಯಾಗಿದೆ. ನನ್ನ ಕೊನೆ ಎಂತಾಗುವದೊ ಯಾರು ಬಲ್ಲರು? ಮಸಣದಲ್ಲಿ ಹೆಣಗಳನ್ನು ಸುಡುತ್ತಿರುವುದನ್ನು ನೋಡಿದ್ದೇನೆ. ನಾನು ನೋಡಿದ ಇತ್ತೀಚಿನ ಚಿತೆಯೆಂದರೆ ನನ್ನ ತಾಯಿಯದು. ಆ ದೃಶ್ಯ ನನ್ನ ಹೃದಯವನ್ನು ಕಲಕಿದೆ. ನನಗೂ ಅಂಥಗತಿ ಒದಗೀತು ಎಂಬ ಕಲ್ಪನೆಯನ್ನೂ ನಾನು ಸಹಿಸಲಾರೆ. ಒಂದು ಗಾಯವನ್ನು ಕಂಡರೆ ನನ್ನೆದೆ ಅಳುಕುತ್ತದೆ; ಅಂದ ಮೇಲೆ ನನ್ನ ದೇಹ ಚಿತೆಯ ಮೇಲೆ ಉರಿದು ಹೋಗುವದು ಎಂದು ಕಲ್ಪಿಸುವದಾದರೂ ಎಂತು! ಆದರೇನು, “ಜಾತಸ್ಯ ಮರಣಂ ಧ್ರುವಂ” ತದನಂತರದ ಜೀವನದಲ್ಲಿ ನನಗೆ ವಿಶ್ವಾಸವಿಲ್ಲ. ಅದ್ದರಿಂದ ಹೆದರಿಕೊಂಡಿದ್ದೇನೆ.

“ಈಗ ನನಗೆರಡು ದಾರಿಗಳು ತೆರೆದಿವೆ. ಐಹಿಕಸುಖದ ಚಿಂತನೆಯಲ್ಲಿಯೆ ಕೊರಗಿ ಕೊರಗಿ ಸತ್ತು ಹೋಗುವದು ಇಲ್ಲವೆ ಐಹಿಕ ಸುಖವನ್ನು ಯಥೇಷ್ಟ ಉಪಭೋಗಿಸಿ ಧ್ಯೇಯವನ್ನು ಮರೆತುಬಿಡುವದು. ಯಾರೆದುರಿಗೂ ಮನಬಿಚ್ಚಿ ಹೇಳದಂಥ ಸಂಗತಿಯನ್ನು ಅಂದರೆ ನಾನು ಎರಡನೇ ಮಾರ್ಗವನ್ನು ಆರಿಸಿಕೊಂಡಿದ್ದೇನೆಂಬುದನ್ನು ನಿಮ್ಮ ಮುಂದೆ ಹೇಳುತ್ತೇನೆ.

“ಇಂದಿನದು ವಾಸ್ತವ ಜಗತ್ತು. ಇಲ್ಲಿಯ ಸುಖಗಳೆಲ್ಲ ಅತ್ಯಂತ ಉಪಭೋಗ್ಯವಿರುತ್ತವೆ. ಯಾವ ಬೆಲೆಯನ್ನಾದರೂ ಕೊಟ್ಟು ಅವನ್ನು ಸವಿಯಬೇಕು. ಇತ್ತೀಚೆಗೆ ಮಡಿದ ನನ್ನ ಹೆಂಡತಿಯ ಬಗ್ಗೆ ನಾನು ಬಹಳ ನೊಂದು ಕೊಂಡಿದ್ದೇನೆ. ಆದರೆ ಅವಳು ಸತ್ತಳೆಂದಲ್ಲ; ಆದರೆ ನಾನು ಏಕಾಕಿ ಉಳಿದೆನಲ್ಲ ಎಂದು. ಸತ್ತವರಿಗೆ ಸಮಸ್ಯೆಗಳೇ ಇಲ್ಲ. ಇದ್ದವರು ಮಾತ್ರ ಅವನ್ನು ಎದುರಿಸಬೇಕಾಗುತ್ತದೆ. ಶುದ್ಧ ಪ್ರೇಮದಲ್ಲಿ ನನಗೆ ವಿಶ್ವಾಸವಿಲ್ಲ. ಪ್ರೇಮವೆಂಬುದೆಲ್ಲ ವಿಷಯಾಭಿಲಾಷೆಯೆ. ಹಾಗೆ ವಿಶುದ್ಧ ಪ್ರೇಮವೇನಾದರೂ ಇದ್ದಿದ್ದರೆ ನಾನು ನನ್ನ ಹೆಂಡತಿಗಿಂತ ತಾಯ್ತಂದೆಗಳಿಗಾಗಿ ಹೆಚ್ಚು ನೊಂದುಕೊಳ್ಳಬೇಕಾಗಿತ್ತು. ಆದರೆ ವಿದ್ಯಮಾನವು ತದ್ವಿಪರೀತವಾಗಿದೆ. ಅವಳಿರುವ ವರೆಗೆ ನಾನು ಏಕಪತ್ನೀವ್ರತಸ್ಥನಾಗಿದ್ದರೂ ಅವಳ ಮರಣದ ನಂತರ ಕೂಡ ಹಾಗೇ ಉಳಿಯುವೆನೆಂದು ಅವಳಿಗೆ ನಾನು ಆಶ್ವಾಸನ ಕೊಡಲಾರದವನಾಗಿದ್ದೆ. ಅವಳ ಮರಣದಿಂದ ಉಂಟಾದ ಅನನುಕೂಲತೆಯಿಂದ ನನ್ನಲ್ಲಿ ಇಂಥ ಭಾವನೆಗಳು ಹುಟ್ಟಿರಬಹುದು. ನೀವಿದನ್ನು ಉಪಹಾಸವೆಂದೆನ್ನಬಹುದು. ಏನೇ ಇರಲಿ—ದಯವಿಟ್ಟು ದಾರಿ ತೋರಿರಿ.”

ಈ ಪತ್ರದಲ್ಲಿ ಮೂರು ವಿಷಯಗಳ ಉಲ್ಲೇಖವಾಗಿದೆ. (೧) ರಾಷ್ಟ್ರಪ್ರೇಮ ವಿಷಯಲೋಲುಪತೆಗಳಲ್ಲಿಯ ತಿಕ್ಕಾಟ (೨) ದೇವರು ಮತ್ತು ಮರಣೋತ್ತರಜೀವನ. (೩) ವಿಶುದ್ಧ ಪ್ರೇಮ ಮತ್ತು ಲೈಂಗಿಕ ಸಮಾಗಮ.

ಮೊದಲನೆಯ ವಿಷಯವನ್ನು ಚೆನ್ನಾಗಿ ಹೇಳಲಾಗಿದೆ. ವಿಷಯಾಭಿಲಾಷೆಯು ವಾಸ್ತವವಾದುದು. ರಾಷ್ಟ್ರಪ್ರೇಮವು ಇಂದಿನ ಲಹರಿಯಾಗಿದೆ. ಅಧಿಕಾರಲಾಲಸೆಯ ಸ್ವರೂಪದ ರಾಷ್ಟ್ರಪ್ರೇಮವು ವಿಷಯಾಭಿಲಾಷೆಗೆ ಹೊಂದಿಕೊಂಡದ್ದೇ ಆಗಿದೆ. ಈ ಬಗ್ಗೆ ಬೇಕಾದಷ್ಟು ಉದಾಹರಣೆಗಳನ್ನು ಹೇಳಬಹುದು. ದೇಶದ ಸಲುವಾಗಿ ಇದ್ದ ಉಜ್ವಲ ಪ್ರೇಮವೇ ರಾಷ್ಟ್ರಪ್ರೇಮವೆಂದು ನನ್ನ ಭಾವನೆ. ಈ ರಾಷ್ಟ್ರಪ್ರೇಮವು [illegible]

ದವುಗಳನ್ನೆಲ್ಲ ಸುಟ್ಟು ಹಾಕಬಲ್ಲದಾಗಬೇಕು. ಆದ್ದರಿಂದ ಈ ಉಭಯವಿಷಯಗಳಲ್ಲಿ ಘರ್ಷಣೆ ಉಂಟಾಗದೆ ರಾಷ್ಟ್ರಪ್ರೇಮಕ್ಕೆ ವಿಜಯದೊರೆಯಲೇ ಬೇಕು. ಸರ್ವವ್ಯಾಪೀ ರಾಷ್ಟ್ರಪ್ರೇಮವು ಇತರ ವಿಷಯಗಳಿಗೆ ಒಂದು ನಿಮಿಷಕೂಡ ಎಡೆಗೊಡಲಾರದು. ವಿಷಯಲೋಲುಪನಾಗಿದ್ದವನು ಇದ್ದೂ ಸತ್ತಂತೆ.

ಐಹಿಕ ಜೀವನದ ಬಗ್ಗೆ ಇರುವ ಮೋಹದಿಂದ ದೇವರಲ್ಲಿ, ಭವಿತವ್ಯದಲ್ಲಿ ಅವಿಶ್ವಾಸ ಹುಟ್ಟುತ್ತದೆ. ಈ ಮೋಹದಿಂದ ಆ ವ್ಯಕ್ತಿಯ ದಿಕ್ಕುತಪ್ಪುತ್ತದೆ. ಸಂಶಯವು ಅವರ ಬೆನ್ನುಬಿಡುವದೇ ಇಲ್ಲ. ಪಾಶವೀ ವಿಚಾರಗಳೆಲ್ಲ ಅಳಿದುಹೋದನಂತರ ದೇವರಲ್ಲಿ ವಿಶ್ವಾಸ ಬೆಳೆಯುತ್ತದೆ: ಇವೆರಡೂ ಒಂದೇಕಾಲಕ್ಕೆ ಒಬ್ಬನಲ್ಲಿ ಉಳಿಯಲಾರವು.

ಮೂರನೆಯ ಸಮಸ್ಯೆಯು ಮೊದಲನೆಯದರ ಪುನರುಚ್ಚಾರವಿದ್ದಂತಿದೆ. ಪತಿ—ಪತ್ನಿಯರಲ್ಲಿಯ ವಿಶುದ್ಧ ಪ್ರೇಮವು, ಇತರಯಾವ ಪ್ರೇಮಕ್ಕಿಂತ, ಅವರನ್ನು ದೇವರ ಸಮೀಪಕ್ಕೆ ಹೆಚ್ಚಾಗಿ ಕರೆದೊಯ್ಯುತ್ತಿದೆ. ಈ ವಿಶುದ್ಧಪ್ರೇಮದಲ್ಲಿ ವಿಷಯಾಭಿಲಾಷೆ ಬೆರೆಯಿತಂದರೆ ಅವರು ದೇವರಿಗೆ ದೂರ ಉಳಿಯುತ್ತಾರೆ. ಆದ್ದರಿಂದ ಕಾಮುಭಾವನೆ, ಸಮಾಗಮವಿಲ್ಲದಿದ್ದರೂ ಮದುವೆಗೆ ಅವಕಾಶವಿದೆಯೆ ಎಂಬುದೊಂದು ಪ್ರಶ್ನೆ. ಹೆಂಡತಿಯ ಬಗ್ಗೆ ಶುದ್ಧ ಪ್ರೇಮವಿದ್ದಿರಲಿಲ್ಲೆಂದು ಆ ವಿದ್ಯಾರ್ಥಿಯು ಸಾರಿಹೇಳಿದ್ದಾನೆ. ಅವನದು ನಿಸ್ವಾರ್ಥಪ್ರೇಮವಾಗಿದ್ದರೆ ಅವನ ಜೀವನ ತುಂಬಿಕೊಳ್ಳಬೇಕಾಗಿತ್ತು. ಅಗಲಿ ಹೋದ ಜೀವನ ಸಂಗಾತಿಯ ನೆನಹು ಪತಿತಸಮಾಜದ ಸೇವೆಗಾಗಿ ಅವನನ್ನು ಪ್ರೇರೇಪಿಸುತ್ತಿತ್ತು.

(ಮೂಲ ಗುಜರಾತಿಯಿಂದ)

ಹೊಸದಿಲ್ಲಿ

೧೨-೧೦-೪೭

ಕಟೋಕ್ತಿ

(ಮೋ. ಕ. ಗಾಂಧಿ)

ಮುಸಲ್ಮಾನ ಮಿತ್ರನೋರ್ವನು ಈ ರೀತಿ ಬರೆಯುತ್ತಾನೆ.

“ನಾನು ರಾಷ್ಟ್ರೀಯ ವಿಚಾರಗಳ ಮುಸಲ್ಮಾನನು. ನನ್ನ ಜೀವನದಲ್ಲೆಲ್ಲ ನನ್ನ ೨೧ ವರುಷಗಳ ಆಯುಷ್ಯವನ್ನು ಆ ರೀತಿ ಕಳೆದೆ. ನನ್ನ ತಂದೆ ತಾಯಿ ಬಂಧುಬಳಗದವರೆಲ್ಲರೂ ಎಷ್ಟೊಂದು ಬಲವಂತ ಪಡಿಸಿದರೂ ನಾನು ಹಿಂದು ಮುಸಲ್ಮಾನರು ಬೇರೆಯೆಂಬ ವಿಚಾರಕ್ಕೆ ಹಣಿಕಿಕ್ಕಲಿಲ್ಲ. ಸ್ವಾಭಾವಿಕವಾಗಿಯೇ, ನಾನು ಸ್ವಜಾತಿದ್ರೋಹಿಯೆಂದು ಜಲಂದರದ ಇಸ್ಲಾಮಿಯಾ ಕಾಲೇಜಿನಲ್ಲಿ ನನಗೆ ಪ್ರವೇಶ ದೊರೆಯಲಿಲ್ಲ.

ನಮ್ಮ ತಂದೆಯು ಇತರ ಬಂಧುಗಳೊಡನೆ ಕಳೆದ ಎಪ್ರಿಲ ತಿಂಗಳಲ್ಲಿ ಜಲಂದರವನ್ನು ಬಿಟ್ಟು ಹೋದನು. ಆದರೆ ಇತರ ಜಾತಿಯ ನನ್ನ ಬಂಧುಗಳಂತೆ ನನಗೂ ಈ ಪೂರ್ವಪಂಜಾಬ ಮತ್ತು ಇಡೀ ಹಿಂದುಸ್ಥಾನವು ನನ್ನ ತಾಯ್ನಾಡೆನಿಸಿದ್ದರಿಂದ ನಾನು ನನ್ನ ತಂದೆಯನ್ನನುಸರಿಸಲಿಲ್ಲ. ಆದರೆ ಅಗಸ್ಟದ ಪಾಶವೀ ಘಟನೆಗಳು ನನ್ನನ್ನು ಶಬ್ದದ ಮೇರೆ ಮೀರಿ ನಿರಾಶೆಗೊಳಿಸಿವೆ. ೧೯೪೬ ಜಾನೇವರಿಯಲ್ಲಿ ಅಝಾದ ಹಿಂದ ಸೈನಿಕರ ವಿಚಾರಣೆ ನಡೆದಾಗ ನನ್ನೊಡನೆಯೇ ಮೆರವಣಿಗೆಗಳನ್ನು ಹೊರಡಿಸುತ್ತಿದ್ದ ಹುಡುಗರೂ ಕೂಡ ನನ್ನ ಜೀವತೆಗೆದುಕೊಳ್ಳಲು ಯತ್ನಿಸಿದ್ದಾರೆ. ಅವರಪಾಲಿಗೆ ನಾನೋರ್ವ ಮುಸಲ್ಮಾನನು ಮಾತ್ರ. ನನ್ನನ್ನು ಕೊಂದರೆ ಅವರು ಸ್ವಜಾತಿಯ ಜನದಿಂದ ಮೆಚ್ಚುಗೆ ಪಡೆಯಬಹುದು. ಪಾಕಿಸ್ತಾನದಲ್ಲಲ್ಲದೆ ಅಖಂಡ ಭಾರತದಲ್ಲಿ ನಂಬುಗೆಯಿದ್ದವರಿಗೆ ದಿಲ್ಲಿಯಲ್ಲಿ ಈ ಗತಿಯೊದಗಲಿಕ್ಕಿಲ್ಲವೆಂಬ ಭಾವನೆಯಿಂದ, ನನ್ನ ಜೀವವುಳಿಸಿಕೊಳ್ಳಲು ಇಲ್ಲಿಗೆ ಬಂದೆ. ಆದರೆ ಇಲ್ಲಿ ಇದಕ್ಕೂ ಹೀನವಿದೆ. ನನ್ನೊಡನಿರುವ ಗೆಳೆಯರೂ ಕೂಡ ನನ್ನೆಡೆಗೆ ಸಂಶಯಿತ ದೃಷ್ಟಿಯಿಂದ ನೋಡುತ್ತಾರೆ.

ಸ್ವಾತಂತ್ರ್ಯ ಸಮತೆಗಳ ನನ್ನ ಪ್ರೇಮ ಪುತ್ಥಳಿಯಾದ ನೀವೇ ಹೇಳಿರಿ. ನನ್ನ ಜೀವನದಲ್ಲೆಲ್ಲ ತಂದೆತಾಯಿಗಳ ನಗೆಗೀಡಾಗಿ, ನನ್ನ ಅಂತರಾತ್ಮನ ವಿರುದ್ಧವಾಗಿ ಪಶ್ಚಿಮ ಪಂಜಾಬಕ್ಕೆ ಹೋಗಿ ತಂದೆತಾಯಿಗಳೊಡನೆ ನೆಲೆಸಲೇ? ಅಥವಾ ನನ್ನ ಸಹಧರ್ಮೀಯರ ಅಮಾನುಷ ಕೃತಿಗಳಿಗಾಗಿ ನನ್ನ ಜೀವವನ್ನು ಯಾವಾಗಲೂ ಗಂಡಾಂತರಕ್ಕೊಡ್ಡಿ ಭಾರತದಲ್ಲಿಯೇ ಇರಲೇ?”

ಮುಂದಿನ ಕೆಲವಂಶವನ್ನು ಮಾತ್ರ ನಾನು ಸಂಕ್ಷೇಪಿಸಿದ್ದೇನೆ. ಕಹಿ ಭಾಗವನ್ನು ಮುಟ್ಟಿಲ್ಲ. ಓಲೆಯು ಸತ್ಯವೆಂದೇ ಭಾವಿಸಿದಲ್ಲಿ ಅದರಲ್ಲಿ ಸಾಕಷ್ಟು ಕಹಿಯಂಶವಿದೆ. ಅತಿಕಠಿಣ ಪ್ರಸಂಗದಲ್ಲಿಯೇ ಮಾನವನ ಬೆಲೆಯ ಇತ್ಯರ್ಥವಾಗುತ್ತದೆ. ಗಾಳಿಬಂದಾಗ ತೂರಿಕೊಳ್ಳುವ ಮಿತ್ರರನೇಕರು. ಅವರಿಗೆ ಬೆಲೆಯಿಲ್ಲ. ಆಪತ್ತಿಗಾದವನೇ ಸನ್ಮಿತ್ರನು. ಇಂದು ಹಿಂದುಮುಸಲ್ಮಾನರು ಕಡಿದಾಡಿದಂತೆಯೇ ಸ್ವಜಾತಿಗಳಲ್ಲಿ ಹೊಡೆದಾಡಿಲ್ಲವೇ? ಕಳೆದ ಎಷ್ಟೋ ವರ್ಷಗಳಿಂದ ದ್ವೇಷವನ್ನೇ ಬೋಧಿಸುತ್ತ ಬಂದಿರಲು ಸಾಮಾನ್ಯ ವ್ಯಕ್ತಿಯಿಂದ ನಾವೇನನ್ನು ತಾನೇ ಅಪೇಕ್ಷಿಸಬೇಕು? ಈ ಓಲೆಯ ಬರೆಹಗಾರನು ತನ್ನ ರಾಷ್ಟ್ರೀಯತ್ವವನ್ನು ದೃಢೀಕರಿಸುತ್ತಿದ್ದರೆ ಆಪತ್ತಿನಲ್ಲಿ ಹಿಂಜರಿಯಕೂಡದು. ಪುಂಡರ ಅನುಕರಣೆಯನ್ನು ನಾವು ಬಿಡಬೇಕು. ಆದ್ದರಿಂದ ತನ್ನ ಗೆಳೆಯರಿಂದಲೇ ತುಂಡು ತುಂಡಾಗಿ ಕತ್ತರಿಸಲ್ಪಟ್ಟರೂ ಕೂಡ, ಈ ಓಲೆಯ ಬರೆಹಗಾರನು ಜಲಂದರದಲ್ಲಿಯ ತನ್ನ ಮನೆಗೇ ಹಿಂದಿರುಗಬೇಕೆಂದು ಹೇಳಲು ನಾನು ಹಿಂಜರಿಯುವದಿಲ್ಲ. ಇಂತಹ ಹುತಾತ್ಮರು ಹಿಂದೂ ಮುಸಲ್ಮಾನ ಒಕ್ಕಟ್ಟಿನ ಕಾರಕರಾಗುವರು. ಅವನು ತನ್ನ ನುಡಿಯಂತೆಯೇ ನಡೆದದ್ದಾದರೆ ಅವನ ತಂದೆ ತಾಯಿಗಳು ಆನಂದದಿಂದ ಅವನನ್ನು ಸ್ವಾಗತಿಸುವರೆಂದು ನಾನು ಭವಿಷ್ಯ ಹೇಳುತ್ತೇನೆ. ಅಪರಾಧಿಗಳಿಗಾಗಿ ನಿರಪರಾಧಿಗಳು ಕಷ್ಟಪಡುವದು ಮಾನವರಾದ ನಮ್ಮ ದುರ್ದೈವವಲ್ಲವೇ? ಅದು ಹಾಗಿರುವುದೂ ನಿಜವೇ. ನಿರಪರಾಧಿಗಳ ಕಷ್ಟಗಳಿಂದ ಜಗತ್ತು ಸಾಕಷ್ಟು ಸಮೃದ್ಧವಿದೆ. ಈ ನನ್ನ ಸತ್ಯವನ್ನು ಕುರಲು ನಾನು ಸ್ವಾತಂತ್ರ್ಯ ಸತ್ಯಗಳ ಪುತ್ಥಳಿಯಾಗಬೇಕಿಲ್ಲ.

ಹೊಸದಿಲ್ಲಿ

೧೩—೧೦—೪೭

ಎಡಗೈ ಬಲ್ಲುದೇ?

ಮದ್ರಾಸಿನ ಮುಖ್ಯ ಮಂತ್ರಿಗಳಾದ ಓಮಂದೂರ ರಾಮಸ್ವಾಮಿ ರೆಡ್ಡಿಯಾರವರು ಒಳ್ಳೆಯ ಉತ್ಸಾಹಭರಿತರಾಗಿ ಒಕ್ಕಲಿಗರು ತಮ್ಮಲ್ಲಿ ಹೆಚ್ಚಿನ ಭತ್ತವನ್ನು ಒಪ್ಪಿಸಬೇಕೆಂದು ಜನರಿಗೆ ತಿಳಿಸಿ ಹೇಳಿ ಜನತೆಯನ್ನು ಹಸಿವು ಬರಗಾಲದಿಂದ ಉಳಿಸಬೇಕೆಂದು ಪ್ರಾಂತದಲ್ಲೆಲ್ಲ ತಿರುಗಾಡತೊಡಗಿದ್ದಾರೆ. ಭಾರತಕ್ಕೆ ಉತ್ತಮ ಧಾನ್ಯಗಳನ್ನು ತರಬೇಕೆಂದು ಜಗದಲ್ಲೆಲ್ಲ ಯತ್ನ ನಡೆದಿದೆ. ಜನತೆಯು ಹಸಿವೆಯಿಂದ ಸಾಯುವದನ್ನು ತಪ್ಪಿಸುವದಕ್ಕಾಗಿ ವಿದೇಶಗಳಲ್ಲಿ ಕಲ್ಪನಾತೀತ ಕಳ್ಳಪೇಟೆಯ ಧಾರಣೆಯಿಂದ ಧಾನ್ಯಗಳನ್ನು ಕೊಡಲಾಗುತ್ತಿದೆ. ಪ್ರಸಂಗದಿಂದ ಪಾರಾಗುವದಕ್ಕಾಗಿ ಚತುಸ್ಸಾಗರಗಳಿಂದಲೂ ಹಡಗುಗಳನ್ನು ಭಾರತಕ್ಕೆ ತಿರುಗಿಸಲಾಗುತ್ತಿದೆ.

ಆದರೆ ಇನ್ನೊಂದೆಡೆಯಲ್ಲಿ, ಅಂಟು ಸಂಗಳ ತಯಾರಿಕೆಯಲ್ಲಿ ಧಾನ್ಯಗಳ ಹಿಟ್ಟನ್ನು ಉಪಯೋಗಿಸಲು ಬರುವಂತೆ ಮದ್ರಾಸ ಸರಕಾರದವರು ‘ಪಿಷ್ಟ ನಿರ್ಬಂಧಕಾಜ್ಞೆ’ಯನ್ನು ತಿದ್ದುಪಡಿ ಮಾಡಿರುವರೆಂಬ ಸುದ್ದಿಯು ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಿದೆ.

ಮುಖ್ಯಮಂತ್ರಿಗಳಿಗೆ ಇದು ಗೊತ್ತಿದೆಯೇ? ಅಥವಾ ಹಿಟ್ಟನ್ನುಳಿಸುವದರ ಬದಲು ಜನಳಿಗಿರಣಿಗಳನ್ನುಳಿಸುವದಕ್ಕಾಗಿ ಈ ಪ್ರಚಾರ ನಡೆದಿದೆಯೋ? ಸರ್ವವಿಧದಿಂದಲೂ ಮಿತವ್ಯಯವನ್ನು ಮಾಡದೆ ಜಗತ್ತಿನ ಜನರಿಗೆ ಆಹಾರ ಧಾನ್ಯಗಳನ್ನು ಯಾವ ಮೋರೆಯಿಂದ ನಾವು ಕೇಳುವನು?

—ಜೆ. ಸಿ. ಕುಮಾರಪ್ಪ

ವಿಶಿಷ್ಟ ತತ್ವ ಪ್ರಣಾಲಿ ಬೇಕು

ಅಗಸ್ಟ ೧೫ಕ್ಕೆ ನಮ್ಮ ಮುಖಂಡರು ಕುದುರೆಗಳನ್ನೇರಿದ್ದಾರೆ. ಥಡಿ ಮೊದಲಾದವುಗಳು ಸುಸಜ್ಜಿತವಾಗಿವೆ, ಕುದುರೆಗಳೂ ಶೃಂಗರಿಸಲ್ಪಟ್ಟಿವೆ,ಆದರೆ ಪ್ರಯಾಣವೆಲ್ಲಿಗೆಂಬುದೆ ಗೊತ್ತಾಗಿಲ್ಲ.

ನಮಗೆ ಎಂಥ ರಾಷ್ಟ್ರವನ್ನು ಕಟ್ಟಬೇಕಾಗಿದೆ, ಅದರಲ್ಲಿ ಸಮಾಜದ ರಚನೆ ಎಂತಹದಿರಬೇಕು ಎಂಬುದೆ ನಮಗೆ ಗೊತ್ತಾಗಿಲ್ಲ. “ಜೀವನದ ಮಟ್ಟವನ್ನು ಏರಿಸಬೇಕು, ಉತ್ಪಾದನೆಯನ್ನು ಹೆಚ್ಚಿಸಬೇಕು, ಕೊರತೆಯಿಂದ ಮುಕ್ತತೆ ದೊರೆಯಬೇಕು” ಈ ಮೊದಲಾದ ಘೋಷಣೆಗಳು ಕೇಳಬರುತ್ತಿವೆ. ಆದರೆ ಇದಕ್ಕಾಗಿ ನಾವು ಎಂಥ ಸಾಧನಗಳನ್ನು ಯೋಜಿಸತಕ್ಕದ್ದು? ನಾವು ನಮ್ಮ ಧ್ಯೇಯ ಸಾಧನೆಯಲ್ಲಿ ತೊಡಗಿ ಅದೇ ಕಾಲಕ್ಕೆ ಮತ್ತೇನು ಸಾಧಿಸಬಹುದು? ಇಂಥ ಇಂಥ ಜೀವನವನ್ನು ಸಾಗಿಸಿ ನಾವು ವಿಶಿಷ್ಟವಾದ ಧ್ಯೇಯವನ್ನೇನಾದರೂ ಸಾಧಿಸಬಯಸುವೆವೊ? ಸರಕಾರದ ಕರ್ತವ್ಯವೇನು? ಜನರ ಕರ್ತವ್ಯವೇನು? ಈ ಪ್ರಶ್ನೆಗಳಿಗೆ ಸುಸ್ಪಷ್ಟ ಉತ್ತರಗಳು ನಮಗೆ ಸಿಕ್ಕಿಲ್ಲ. ನಮ್ಮ ಧ್ಯೇಯವು ಹೀಗೆ ಅಸ್ಪಷ್ಟವಿರುವದರಿಂದ ಎಷ್ಟೋ ಸಾರೆ ನಮ್ಮ ಕಾರ್ಯದಲ್ಲಿ ಅಸಂಬದ್ಧತೆಯು ಕಂಡು ಬಂದು ವಿಚಿತ್ರಪ್ರಸಂಗಗಳು ತಲೆಯೆತ್ತುವವು.

ತಮ್ಮನ್ನು ಎದುರಿಸುತ್ತಿದ್ದ ಕೆಲವು ಸಮಸ್ಯೆಗಳನ್ನು ಹಿಂದುಸ್ಥಾನ ಸರಕಾರದ ಅರ್ಥ ಮಂತ್ರಿಗಳಾದ ಶ್ರೀ ಷಣ್ಮುಖಂ ಚೆಟ್ಟಿಯಾರರು ಸಾರ್ವಜನಿಕರ ಮುಂದೆ ಮಂಡಿಸಿದ್ದಾರೆ. ಮಾಸ್ಕೋದಲ್ಲಿಯ ಹಿಂದೀ ರಾಯಭಾರಿಯ ಕಚೇರಿಗೆ ೨೫ ಸಾವಿರ ರೂಪಾಯಿಯ ಕುರ್ಚಿ ಮೇಜು ಮೊದಲಾದವುಗಳನ್ನು ಸ್ವೀಡನ್ನದಿಂದ ತರಿಸಿ ಕೊಡಬೇಕೆಂದು ಬಿನ್ನವಿಸಲಾಗಿದೆಯೆಂದು ಅವರು ಹೇಳಿದ್ದಾರೆ. ಇನ್ನೋರ್ವ ಮಂತ್ರಿಯ ಸಲುವಾಗಿ ಇರಾಣದಿಂದ ೪೦ ಸಾವಿರ ರೂಪಾಯಿ ಬೆಲೆಬಾಳುವ ಜಮಖಾನೆಗಳನ್ನು ತರಿಸಿ ಕೊಡಬೇಕೆಂದು ಇನ್ನೊಂದು ಬಿನ್ನಹ ಬಂದಿದೆಯೆಂದೂ ಅವರು ಹೊರಗೆಡಹಿದ್ದಾರೆ. ಕಳೆದ ಆಯವ್ಯಯ ಪತ್ರಿಕೆಯನ್ನು ನೋಡಿದರೆ ಬೇರೆ ಬೇರೆ ದೇಶಗಳಲ್ಲಿಯ ರಾಯಭಾರಿ ಕಚೇರಿಗಳ ಸಲುವಾಗಿ ನಾಣ್ಯ ವಿನಿಮಯಕ್ಕೆ ಸಿಗಬಹುದಾದಂಥ ೧೪, ಲಕ್ಷ ರೂಪಾಯಿಗಳು ವೆಚ್ಚವಾಗಿವೆಯೆಂದು ತಿಳಿಯುತ್ತದೆ. ಇದರಿಂದ ನಮ್ಮ ಅರ್ಥಮಂತ್ರಿಗಳ ತಲೆಯೆದ್ದಿದೆ. ಏಳದೇನು ಮಾಡೀತು?

ರಾಜಪುತ್ರರಂತೆ ಮೆರೆಯುವ ಮಂತ್ರಿಗಳ ಮತ್ತು ಹೆಚ್ಚೆಚ್ಚು ಹಣಬೇಡುವ ರಾಯಭಾರಿಗಳ ಭಾರವನ್ನು ದರಿದ್ರ ಹಿಂದುಸ್ಥಾನವು ಹೊರಬೇಕೋ ಹೊರಬಾರದೋ ಎಂಬುದು ನಮ್ಮ ಧ್ಯೇಯ ಧೋರಣಗಳ ಮೇಲೆ ಅವಲಂಬಿಸಿದೆ. ಅಮೇರಿಕಾ ಮತ್ತೂ ಇಂಗ್ಲಂಡದಂಥ ಔದ್ಯೋಗಿಕ ಬೆಳವಣಿಗೆಯೆ ನಮ್ಮ ಧ್ಯೇಯವಾದರೆ ಹೆಚ್ಚು ವೆಚ್ಚದ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುವದು ತಪ್ಪೆಂದು ಟೀಕಿಸುವದರಲ್ಲಿ ತಥ್ಯವಿಲ್ಲ. ಇಂಥ ಔದ್ಯೋಗಿಕರಣವೆಂದರೆ, ಅದರೊಡನೆ ಅಂತರ್ ರಾಷ್ಟ್ರೀಯ ತಿಕ್ಕಾಟ, ಯುದ್ಧಗಳು ಅಣು ಬಾಂಬುಗಳು ಎಲ್ಲವೂ ಬರುವವೇ. ಇವಕ್ಕೆಲ್ಲ ಇಷ್ಟು ವೆಚ್ಚ ಇಂಥ ಸಡಗರ ಇಂಥ ವೈಭವ ಬೇಕೇ ಬೇಕು. ಇದೇ ಮಾರ್ಗವನ್ನೆ ನಾವು ಅನುಸರಿಸುವದಾದರೆ ಮೇಲೆ ಕಾಣಿಸಿದ ವೆಚ್ಚವು ಕಡಿಮೆಯೆ ಎಂದು ನಾವು ಹೇಳಬೇಕಾಗುವದು.

ಆದರೆ ಇದರ ವಿರುದ್ಧವಾಗಿ ನಾವು ಸಾಮಾನ್ಯ ಜೀವನವನ್ನು ಶಾಂತ ವಾತಾವರಣವನ್ನೂ ಸಾಕಷ್ಟು ಮೂಲ ಅವಶ್ಯಕತೆಗಳನ್ನೂ ನಿರುದ್ಯೋಗಿಗಳಿಗೆ ಸಾಕಷ್ಟು ಕೆಲಸವನ್ನು ಕಲ್ಪಿಸಿಕೊಡಬಲ್ಲ ಸಮಾಜವನ್ನೂ ಕಟ್ಟಲು ಬಯಸಿದರೆ ನಮ್ಮ ಮಾರ್ಗವು ಬೇರೆಯಾಗಬೇಕು. ನಾವು ನಮ್ಮ ಮುಂಗಡ ಪತ್ರಿಕೆಯಲ್ಲಿಯ ವೆಚ್ಚವನ್ನು ಹೇಳಿಕೊಳ್ಳುವಷ್ಟು ಕಡಿಮೆ ಮಾಡಬೇಕಾಗುವದು. ಆದ್ದರಿಂದ ನಮ್ಮ ಆರ್ಥಿಕ ಮತ್ತು ರಾಜಕೀಯ ಪ್ರಣಾಲಿಯು ನಿಶ್ಚಿತವಾಗದಿದ್ದರೆ ನಾವು ಒಂದು ಮನೆಯನ್ನು ಸಜ್ಜುಮಾಡಲು ೨೫ ಸಾವಿರ ಸಾಕಾಗುವವೊ, ಜಮಖಾನೆಗಳಿಗೆ ೪೦ ಸಾವಿರ ರೂಪಾಯಿ ವೆಚ್ಚ ಮಾಡಿದರೆ ಕುಶಲ ನೇಕಾರರಿಗೆ ಆಶ್ರಯ ಕೊಟ್ಟ ಪುಣ್ಯವು ನಮ್ಮ ಪಾಲಿಗೆ ಬರುವದಿಲ್ಲವೆ? ಎಂಬೀ ಪ್ರಶ್ನೆಗಳಿಗೆ ಉತ್ತರ ಕೊಡಲು ಶಕ್ಯವಾಗುವದಿಲ್ಲ. ಸದ್ಯಕ್ಕೆ ದೇಶವು ಎತ್ತೋ ಹೊರಟಿರುವದು. ಶಾಂತಚಿತ್ತದಿಂದ ಒಂದೆಡೆಗೆ ಕುಳಿತು ನಾವು ಎಂಥ ಹಿಂದುಸ್ಥಾನವನ್ನು ಕಟ್ಟಬೇಕು, ಜಗತ್ತಿನ ರಾಷ್ಟ್ರಗಳಲ್ಲಿ ಅದಕ್ಕೆ ಎಂಥ ಸ್ಥಾನವಿರಬೇಕು ಎಂಬುದನ್ನು ದೃಢವಾಗಿ ನಿರ್ಧರಿಸಬೇಕು.

—ಜೆ. ಸಿ. ಕುಮಾ[illegible]

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ, ಹೊಸದಿಲ್ಲಿ,
೩—೧೦—೧೯೪೭

ಆಹಾರ ಸಮಸ್ಯೆ

“ಡಾ. ರಾಜೇಂದ್ರ ಪ್ರಸಾದರ ಆಮಂತ್ರಣದ ಮೇರೆಗೆ ಭಯಂಕರವಾದ ಆಹಾರದ ಬಿಕ್ಕಟ್ಟಿನಲ್ಲಿ ಅವರಿಗೆ ಸಲಹೆ ಕೊಡಲು ಆಹಾರ ತಜ್ಞರು ಬಂದಿದ್ದಾರೆ. ಈ ಮುಖ್ಯವಾದ ವಿಷಯದಲ್ಲಿ ಏನಾದರೂ ತಪ್ಪು ಮಾಡಿದರೆ ನಿವಾರ್ಯ ಉಪವಾಸ ಮತ್ತು ಲಕ್ಷೋಪಲಕ್ಷ ಜನರ ಮರಣ ಸಂಭವಿಸದಿರವು. ಭಾರತಕ್ಕೆ ಕೃತಕ ಇಲ್ಲವೆ ಸ್ವಾಭಾವಿಕ ರೀತಿಯ ಕ್ಷಾಮದಿಂದ ಲಕ್ಷಗಟ್ಟಲೆಯಲ್ಲಲ್ಲದಿದ್ದರೆ ಸಾವಿರಗಟ್ಟಲೆಯಲ್ಲಿ ಜನ ಉಪವಾಸಬಿದ್ದು ಸಾಯುವದು ಅಪರಿಚಿತವಲ್ಲ. ಸುವ್ಯವಸ್ಥಿತ ಸಮಾಜದಲ್ಲಿ ಯಾವಾಗಲೂ ಅನ್ನ ನೀರುಗಳ ಕೊರತೆಯನ್ನು ಯಶಸ್ವಿಯಾಗಿ ನೀಗಿಸಲು ಪೂರ್ವಸಿದ್ಧ ಯೋಜನೆಯಿರಬೇಕಾದುದಗತ್ಯವೆಂದು ನಾನು ಸಾಧಿಸುತ್ತೇನೆ. ಕ್ರಮಬದ್ಧ ಸಮಾಜವೆಂದರೆಂಥದೆಂಬುದನ್ನೂ ಅದು ಇಂಥ ಸಮಸ್ಯೆಗಳನ್ನು ಹೇಗೆ ಉತ್ತರಿಸುವುದೆಂಬುದನ್ನು ಬಣ್ಣಿಸಲು ಇದು ಸಮಯವಲ್ಲ. ಮುಖ್ಯವಾಗಿ ನಾವೀಗ ಆಲೋಚಿಸತಕ್ಕದ್ದೆಂದರೆ, ನಾವು ಜಯಪ್ರದವಾಗಿ ಸದ್ಯದ ಆಹಾರದ ಬಿಕ್ಕಟ್ಟನ್ನು ಬಿಡಿಸಬಲ್ಲೆವೇನೆಂಬುದೇ ಆಗಿದೆ.

ಸ್ವಸಹಾಯ

“ಬಲ್ಲೆವೆಂಬುದೇ ನನ್ನ ಮತ. ಮೊದಲು ನಾವು ಕಲಿಯತಕ್ಕ ಪಾಠವೆಂದರೆ ಸ್ವಸಹಾಯ ಮತ್ತು ಸ್ವಾವಲಂಬನ. ಈ ಪಾಠವನ್ನು ನಾವು ಅರಗಿಸಿಕೊಂಡರೆ ಕೂಡಲೆ ನಾವು ಪರದೇಶಗಳ ಮೇಲೆ ಅವಲಂಬಿಸಿದ್ದು ಕೊನೆಯಲ್ಲಿ ಪಾಪರರಾಗುವ ಕೇಡಿನಿಂದ ನಮ್ಮನ್ನು ಬಿಡಿಸಿಕೊಳ್ಳಬಲ್ಲೆವು. ಇದು ಜಂಭದಿಂದಲ್ಲ, ಸ್ವಾಭಾವಿಕವಾಗಿಯೇ ಹೇಳಿದ್ದು. ಹೊರಗಿನ ಆಹಾರ ಪೂರೈಕೆಯ ಮೇಲೆ ಆಧರಿಸಿರಲು ನಮ್ಮದೇನು ಸಣ್ಣ ದೇಶವಲ್ಲ; ನಮ್ಮದೊಂದು ಉಪಖಂಡವೇ ಆಗಿದೆ, ೪೦ ಕೋಟಿ ಜನರಿದ್ದೇವೆ ನಾವು. ನಮ್ಮ ದೇಶದಲ್ಲಿ ಮಹಾ ಮಹಾ ನದಿಗಳಿವೆ, ಫಲವತ್ತಾದ ಬಗೆ ಬಗೆಯ ಭೂಮಿಯಿದೆ, ಅಕ್ಷಯವಾದ ಗೋಧನವಿದೆ. ನಮ್ಮ ದನಗಳು ನಮಗೆ ಬೇಕಾದಷ್ಟು ಹಾಲು ಕೊಡದಿರುವುದು ನಮ್ಮದೇ ತಪ್ಪು. ಯಾವಾಗಲೇ ಆಗಲಿ, ನಮ್ಮ ಗೋಧನ ನಮಗಗತ್ಯವಿರುವಷ್ಟು ಹಾಲನ್ನು ಒದಗಿಸಬಲ್ಲದು. ಕಳೆದ ಕೆಲವು ಶತಮಾನಗಳಲ್ಲಿ ಅಲಕ್ಷಿತವಾಗಿರದಿದ್ದರೆ ನಮ್ಮ ದೇಶವು ತನಗಷ್ಟೇ ಸಾಕಷ್ಟು ಆಹಾರ ಒದಗಿಸಿಕೊಳ್ಳುವುದಲ್ಲದೆ ಮೊನ್ನಿನ ಯುದ್ಧದಿಂದ ಆಹಾರಾಭಾವಕ್ಕೆ ತುತ್ತಾದ ಇಡೀ ಜಗತ್ತಿಗೇ ಅತ್ಯಗತ್ಯವಾದ ಆಹಾರ ಸಾಮಗ್ರಿಗಳನ್ನು ಕಳುಹಿಕೊಡಬಹುದಾಗಿತ್ತು. ಇದು ಭಾರತವನ್ನು ಹೊರಗುಳಿಸುವುದಿಲ್ಲ. ಆಹಾರಾಭಾವದ ಚಿಂತೆ ಕಡಿಮೆಯಾಗುವದು ಹೋಗಿ ಇಲ್ಲಿ ದಿನೇದಿನೇ ಅದು ವೃದ್ಧಿಯಾಗುವ ಲಕ್ಷಣವೇ ತೋರಿಬರುತ್ತಿದೆ. ಯಾವುದಾದರೊಂದು ಪರರಾಜ್ಯವು ಪುಕ್ಕಟೆಯಾಗಿ ಪೂರೈಸ ಬಂದ ಆಹಾರವನ್ನು ಕೃತಘ್ನತೆಯಿಂದ ತಿರಸ್ಕರಿಸುವ ಮಾತನ್ನು ನಾನು ಸೂಚಿಸುತ್ತಿಲ್ಲ. ಒಟ್ಟಿನ ಮೇಲೆ ನಾನು ಹೇಳುವುದೆಂದರೆ, ನಾವು ಭಿಕ್ಷಾಪಾತ್ರೆ ಹಿಡಿದು ಬೇಡಲು ಹೊರಡಬಾರದು. ಅದರಿಂದ ನಮ್ಮ ನೀತಿಯ ಅಧಃಪಾತ ಉಂಟಾಗುವುದು. ಅದರ ಜೊತೆಗೆ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಒಳಗಿನ ಸಾರಿಗೆಯ ತೊಂದರೆಗಳೂ ಸೇರಿಕೊಂಡಿವೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವೇಗವಾಗಿ ಆಹಾರ ಸಾಮಗ್ರಿಗಳನ್ನು ಸಾಗಿಸುವ ಅನುಕೂಲ ನಮ್ಮಲ್ಲಿಲ್ಲ. ಇದರ ಮೇಲೆ ಎಂದಾದರೂ ಸಂಭವಿಸಬಹುದಾದ, ತಿನ್ನಲಾರದ ಆಹಾರ ಪದಾರ್ಥ ಬಂದು ಮುಟ್ಟುವುದನ್ನು ಬೇಕಾದರೆ ಸೇರಿಸದಿರಿ. ನಾವು ಮಾನವ ಸ್ವಭಾವ ಕೊಡನೆ ವ್ಯವಹರಿಸಬೇಕೆಂಬುದನ್ನು ಮರೆಯಲು ಧೈರ್ಯ ಮಾಡಲಾರೆವು. ಜಗತ್ತಿನ ಯಾವ ಭಾಗದಲ್ಲೂ ಅದು ಸಂಪೂರ್ಣವಾಗಿ ಇರುವುದಿಲ್ಲ, ಸಂಪೂರ್ಣತೆಯನ್ನು ಸಮೀಪಿಸಿ ಇರುವುದನ್ನು ಕೂಡ ನೋಡುವದು ದುರ್ಲಭ.

ಪರಸಹಾಯದ ಅರ್ಥ

ಅನಂತರ ನಮಗೆ ಪರದೇಶಗಳ ಸಹಾಯವೆಷ್ಟು ಸಿಕ್ಕಬಹುದೆಂಬುದನ್ನು ನೋಡೋಣ. ನಮಗೆ ಬೇಕಾದುದರಲ್ಲಿ ನೂರಕ್ಕೆ ೩ರಷ್ಟು ಮಾತ್ರ ಹೊರಗಿನಿಂದ ಸಿಗಬಹುದೆಂದು ನಾನು ಕೇಳಿದ್ದೇನೆ. ಇದು ನಿಜವಾದರೆ, ಅನೇಕ ತಜ್ಞರು ಅಷ್ಟೇ ಸರಿ ಎಂದು ಹೇಳಿರುವುದರಿಂದ, ಹೊರನೆರವಿನ ಮೇಲೆ ಅವಲಂಬಿಸುವ ವಾದ ಪಾತಾಳಕ್ಕೆ ಬಿದ್ದುಹೋ... ಹೊರನೆರವಿನ ಮೇಲೆ ಸ್ವಲ್ಪ ಮಟ್ಟಿ-

ಗಾದರೂ ನಾವು ಆಧರಿಸಿ ನಿಲ್ಲಹೋದ ಕೂಡಲೆ, ಧನಾರ್ಜನೆಗಾಗಿ ಬೆಳೆವ ಬೆಳೆಗಳ ಬದಲು ನಿತ್ಯಾಹಾರಕ್ಕಾಗಿ ಬೆಳೆಬೆಳೆಯುವ ಪ್ರತಿಯೊಂದು ಅಂಗುಲದಷ್ಟು ಕೃಷಿಕ್ಷೇತ್ರವನ್ನೂ ಬಳಸಿಕೊಳ್ಳುವ ಸಂಭವವು ಕಡಿಮೆಯಾಗುತ್ತದೆ, ಈ ಕೂಡಲೆ ಬೆಳೆ ತೆಗೆಯಲು ಉಪಯೋಗಿಸಿಕೊಳ್ಳಬಹುದಾದ ಬಂಜೆ ಭೂಮಿಗಳನ್ನು ಈಗಿಂದೀಗ ನಾವು ಬಳಸಿಕೊಳ್ಳಲು ತೊಡಗಬೇಕು.

ಕೇಂದ್ರೀಕರಣವೋ, ವಿಕೇಂದ್ರೀಕರಣವೋ?

ನನ್ನ ವಿಚಾರದ ಮೇರೆಗೆ ಆಹಾರದ ಕೇಂದ್ರೀಕರಣವು ಹಾನಿಕರವಾದುದು. ವಿಕೇಂದ್ರೀಕರಣವು ಕಳ್ಳ ಪೇಟೆಗೆ ಲತ್ತೆ ಕೊಡುತ್ತದೆ, ಸಾರಿಗೆಯ ಕಾಲ ಮತ್ತು ಧನಗಳನ್ನು ಉಳಿಸುತ್ತದೆ. ಅಲ್ಲದೆ, ಹರಿದಾಡುವ ಜಂತುಗಳಿಂದ ತನ್ನ ಧಾನ್ಯವನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ಭಾರತದ ಕಾಳು ಬೆಳೆವ ಹಳ್ಳಿಗ ಬಲ್ಲ. ಸ್ಥಾನದಿಂದ ಸ್ಥಾನಕ್ಕೆ ಒಯ್ಯಲಾಗುವ ಆಹಾರ ಧಾನ್ಯವನ್ನು ಇಲಿ ಹೆಗ್ಗಣಗಳು (ಸರೀಸೃಪಗಳು) ತಿನ್ನುವ ಸಂಭವವೇ ಹೆಚ್ಚು. ಇದರಿಂದ ದೇಶಕ್ಕೆ ಲಕ್ಷಗಟ್ಟಲೆ ನಷ್ಟವುಂಟಾಗುತ್ತದೆ, ಟನ್ನುಗಟ್ಟಲೆ ದವಸ ಹಾಳಾಗುತ್ತದೆ—ಅದೂ ಅದರ ಪ್ರತಿಯೊಂದು ತೊಲೆಯೂ ನಮಗೆ ಬೇಕಾದ ಈ ಕಾಲದಲ್ಲಿ! ಪ್ರತಿಯೊಬ್ಬ ಹಿಂದೀಯನೂ ಕೈಯಲ್ಲಾದುದನ್ನು ಬೆಳೆಯಬೇಕೆಂಬುದರ ಅಗತ್ಯವನ್ನರಿತುಕೊಂಡರೆ ನಾವು ನಾಡಿನಲ್ಲಿ ಆಹಾರಾಭಾವವಿತ್ತೆಂಬುದನ್ನೇ ಬಹುಶಃ ಮರೆತು ಬಿಡಲು ಶಕ್ತರಾದೇವು. ಚಿತ್ತಾಪಹಾರಕವಾಗಿಯೂ ಮನಮೋಹಕವಾಗಿಯೂ ನಾನು ಆಹಾರ ಸಮಸ್ಯೆಯನ್ನು ಸಂಪೂರ್ಣವಾಗಿ ನಿಮ್ಮ ಮುಂದೆ ವಿಶದಪಡಿಸಿಲ್ಲ; ಆದರೆ ಅದರಲ್ಲಿ ಅಭಿರುಚಿ ಹುಟ್ಟಿಸಿ ವಿಚಾರವಂತರನ್ನು ಪ್ರತಿಯೊಬ್ಬನೂ ಹೇಗೆ ಈ ಶ್ಲಾಘ್ಯ ಕಾರ್ಯದಲ್ಲಿ ನೆರವಾಗಬಹುದೆಂಬ ವಿಚಾರದತ್ತ ತಿರುಗಿಸುವಷ್ಟು ನಾನು ಹೇಳಿದ್ದೇನೆಂದು ನನ್ನ ಭರವಸೆ.

ಕೊರತೆ ನೀಗಿಸುವ ಬಗೆ

“ನಾವು ಹೊರಗಿನಿಂದ ಪಡೆಯಬಹುದಾದ ನೂರಕ್ಕೆ ೩ರರಷ್ಟು ಆಹಾರ ಧಾನ್ಯಗಳನ್ನು ಹೇಗೆ ಬಳಸಬೇಕೆಂಬುದನ್ನು ತೋರಿಸುತ್ತೇನೆ. ಒಂದು ಪಕ್ಷದಲ್ಲಿ ೧೧ನೆಯ ದಿನ ಹಿಂದುಗಳು ಸಂಪೂರ್ಣ ಇಲ್ಲವೆ ಅರ್ಧ ಉಪವಾಸ ಮಾಡುತ್ತಾರೆ. ಹಸಿದ ಹಲವರಿಗಾಗಿ ಮುಸಲ್ಮಾನರೂ ಇತರರೂ ಊಟ ಬಿಡುವುದು ತಪ್ಪೆಂದು ಎಲ್ಲೂ ಹೇಳಲಾಗಿಲ್ಲ. ಇಡೀ ರಾಷ್ಟ್ರವೇ ಈ ಸಾತ್ವಿಕ ಆತ್ಮತ್ಯಾಗದ ಸೊಗಸನ್ನರಿತರೆ ಪರದೇಶದ ಆಹಾರವನ್ನು ಬುದ್ಧಿಪೂರ್ವಕವಾಗಿ ಬಿಡುವುದರಿಂದ ಸಂಭವಿಸಬಹುದಾದ ಆಹಾರ ನ್ಯೂನತೆಯನ್ನು ಭಾರತವು ತುಂಬಿಕೊಳ್ಳಬಲ್ಲದು.

ವ್ಯಕ್ತಿಶಃ ಸೀದಾಪದ್ಧತಿಯಿಂದ ಅತ್ಯಲ್ಪ ಉಪಯೋಗವಿದೆಯೆಂದು ನಾನು ಭಾವಿಸುತ್ತೇನೆ. ಉತ್ಪಾದಕರನ್ನು ಹಾಗೇ ಬಿಟ್ಟರೆ ಇಂದು ಸುಲಭವಾಗಿ ಸಿಗದಿರುವದು ಹೋಗಿ ಪ್ರತಿಯೊಬ್ಬನೂ ಒಳ್ಳೆಯ ತಿನ್ನಲು ಯೋಗ್ಯವಾದ ಕಾಳನ್ನು ಪಡೆವಂತಾದೀತು.

ಅಧ್ಯಕ್ಷ ಟ್ರೂಮನ್ನರ ಬುದ್ಧಿವಾದ

“ಅಧ್ಯಕ್ಷ ಟ್ರೂಮನ್ನರು ಅಮೇರಿಕನ್ನರಿಗೆ ಮಾಡಿದರೆಂದು ಹೇಳಲಾದ ರೊಟ್ಟಿಯನ್ನು ಕಡಿಮೆ ತಿಂದು ಹಸಿದ ಯುರೋಪಿಗಾಗಿ ಅತ್ಯಗತ್ಯವಾದ ಕಾಳನ್ನುಳಿಸಬೇಕೆಂಬ ಬುದ್ಧಿವಾದದತ್ತ ನಿಮ್ಮ ಗಮನ ಸೆಳೆದು ಆಹಾರದ ಬಿಕ್ಕಟ್ಟಿನ ಈ ಅವಸರದ ಅವಲೋಕನವನ್ನು ನಾನು ಮುಗಿಸುತ್ತೇನೆ. ತಾವು ಶಿಫಾರಸು ಮಾಡಿದ ಆತ್ಮತ್ಯಾಗದಿಂದ ಅಮೇರಿಕನ್ನರ ಆರೋಗ್ಯ ಕೆಡುವುದಿಲ್ಲವೆಂದು ಟ್ರೂಮನ್ನರು ಹೇಳಿದರು. ಈ ಪರೋಪಕಾರದ ಆತ್ಮತ್ಯಾಗವನ್ನುಪದೇಶಿಸಿದ್ದಕ್ಕಾಗಿ ನಾನು ಅಧ್ಯಕ್ಷ ಟ್ರೂಮನ್ನರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ. ಈ ಪರೋಪಕಾರದ ಒಲವಿನ ಹಿಂದೆ ಅಮೇರಿಕಕ್ಕೆ ಧನರೂಪದ ಲಾಭವನ್ನು ಪಡೆವ ಉದ್ದೇಶವಿದೆಯೆಂಬ ಸೂಚನೆಯನ್ನು ನಾನು ಒಪ್ಪಲು ಸಿದ್ಧನಾಗತಕ್ಕದ್ದಲ್ಲ. ಮನುಷ್ಯನನ್ನು ಅವನ ಕೃತಿಯಿಂದ ನಿರ್ಣಯಿಸಬೇಕು, ಆ ಕೃತಿಗೆ ಪ್ರೇರಕವಾದ ಉದ್ದೇಶದಿಂದಲ್ಲ. ದೇವರೊಬ್ಬನೆ ಮಾನವನ ಹೃದಯವನ್ನರಿಯಬಲ್ಲ. ಹಸಿದ ಯುರೋಪಿಗಾಗಿ ಅಮೇರಿಕ ತನಗಿಲ್ಲದಂತೆ ಮಾಡಿಕೊಂಡರೆ ನಮಗಾಗಿ ನಾವು ಈ ಸಣ್ಣ ಕೆಲಸವಾದ ಆತ್ಮತ್ಯಾಗವನ್ನು ಮಾಡಲು ಹಿಂಜರಿಯಬಹುದೇ? ಬಹಳ ಜನರು ಹಸಿವಿನಿಂದ ಸಾಯಬೇಕಾಗಿದ್ದರೆ, ರಾಷ್ಟ್ರವನ್ನು ಉದಾತ್ತ-

ಗೊಳಿಸುವ ಯಥಾಶಕ್ತಿ ಆತ್ಮಾವಲಂಬನದಿಂದ ನಾವು ಸುತ್ತ್ಯರಾಗೋಣ.

ದೇಶವನ್ನೆದುರಿಸುತ್ತಿರುವ ಆಹಾರ ಸಂಕಟಕ್ಕೆ ಕಾರ್ಯಯೋಗ್ಯವಾದ ನಿವಾರಣೋಪಾಯವೊಂದನ್ನು ತಯಾರಿಸದೆ ಡಾ. ರಾಜೇಂದ್ರ ಪ್ರಸಾದರು ಕರೆದ ಸಮಿತಿಯು ವಿಸರ್ಜನೆಯಾಗದೆಂದು ಆಶಿಸೋಣ.”

ಬಿರ್ಲಾ ಭವನ, ಹೊಸದಿಲ್ಲಿ
೭-೧೦-೧೯೪೭

ಹೆಚ್ಚು ಹೊದಿಕೆಗಳಿಗಾಗಿ ಬಿನ್ನಹ

ಪ್ರಾರ್ಥನೋತ್ತರದಲ್ಲಿ ಮಾತನಾಡುತ್ತ, ಹಿಂದಿನ ದಿನದಿಂದ ತಮಗೆ ಹೆಚ್ಚು ಹೆಚ್ಚು ಹೊದಿಕೆಯ ವಸ್ತ್ರಗಳು ಬರಹತ್ತಿವೆಯೆಂದು ಗಾಂಧಿಯವರೆಂದರು. ಕೊಟ್ಟವರಿಗೆ ಕೃತಜ್ಞತೆಯನ್ನರ್ಪಿಸಿದರೂ ಆ ಮಾನದಿಂದ ಬಂದರೆ ಅವು ಲಕ್ಷಗಟ್ಟಲೆ ನಿರ್ವಾಸಿತರಿಗೆ ಸಾಕಾಗಲಾರವೆಂದು ಅವರು ಹೇಳಿದರು. ಸ್ವಲ್ಪಕಾಲದಲ್ಲಿಯೇ ಬಹಳ ಹೊದಿಕೆಗಳು ಸಿಗುವಂತೆ ಸಾರ್ವಜನಿಕರು ಸಂಗ್ರಹವನ್ನು ಸಂಘಟಿಸಬೇಕು. ಸರಿಯಾಗಿ ವಿತರಣವಾಗುವಂತೆ ಅವನ್ನು ಅವರು ತಮಗಾಗಲಿ, ತಮಗೆ ಉಚಿತವೆನಿಸಿದ ಯಾವುದಾದರೊಂದು ವ್ಯಕ್ತಿ ಇಲ್ಲವೆ ಸಂಸ್ಥೆಗಾಗಲಿ ಒಪ್ಪಿಸಬಹುದೆಂದು ಅವರು ಅಭಿಪ್ರಾಯಪಟ್ಟರು.

ಕಾಂಗ್ರೆಸ್ಸಿನ ತತ್ವವನ್ನು ಪ್ರಾಮಾಣಿಕರಾಗಿ ಪಾಲಿಸಿರಿ

ಅನಂತರ, ಗಾಂಧಿಯವರು ಡೆಹರಾಡೂನಿನ ಹತ್ತಿರದಲ್ಲಿ ಒಬ್ಬ ಪ್ರಸಿದ್ಧ ಮುಸಲ್ಮಾನನ್ನು ಕೊಂದುದರ ಬಗ್ಗೆ ವಿಷಾದಪೂರ್ವಕವಾಗಿ ಹೇಳತೊಡಗಿದರು—

“ಅವನ ಒಂದೇ ಒಂದು ತಪ್ಪೆಂದರೆ, ಮುಸಲ್ಮಾನನಾಗಿದ್ದುದು. ನಾನು ಹಿಂದುಸ್ತಾನದಲ್ಲಿರುವ ಲಕ್ಷಗಟ್ಟಲೆ ಮುಸಲ್ಮಾನರಿಗೆ ಹೊರಹೊರಡಿರೆಂದು ಹೇಳಬೇಕೆ? ಅವರೆಲ್ಲಿಗೆ ಹೋಗಬೇಕು? ರೈಲಿನಲ್ಲಿ ಕೂಡ ಅವರು ಸುರಕ್ಷಿತರಾಗಿಲ್ಲ! ಪಾಕಿಸ್ತಾನದಲ್ಲಿ ಹಿಂದುಗಳೂ ಅದೇರೀತಿ ನರಳುತ್ತಿರುವುದೇನೋ ನಿಜ. ಆದರೆ ಎರಡು ತಪ್ಪುಗಳು ಬಂದು ಸರಿಯನ್ನುಂಟುಮಾಡಲಾರವು, ಒಕ್ಕೂಟದಲ್ಲಿಯ ಮುಸಲ್ಮಾನರ ಮೇಲೆ ಸೇಡು ತೀರಿಸಿಕೊಂಡು ಇಲ್ಲಿಯ ಮುಸಲ್ಮಾನೇತರರು ಪಾಕಿಸ್ತಾನದಲ್ಲಿಯ ಹಿಂದು ಶೀಖರಿಗೆ ಸಹಾಯ ನೀಯಲಾರರು. ನೀವು ನಿಮ್ಮ ಧರ್ಮಕ್ಕೂ ಕಾಂಗ್ರೆಸ್ಸಿನ ತತ್ವಕ್ಕೂ ನಿಷ್ಠರಾಗಿ ಬಾಳಬೇಕು. ದೇಶಕ್ಕೆ ಕಳೆದ ೬೦ ವರ್ಷಗಳಲ್ಲಿ ಕಾಂಗ್ರೆಸ್ಸೇನಾದರೂ ಅಹಿತವನ್ನು ಮಾಡಿರುವುದೇ? ಈಗ ನಿಮಗೆ ಕಾಂಗ್ರೆಸ್ಸಿನಲ್ಲಿ ವಿಶ್ವಾಸವಿಲ್ಲದಿದ್ದರೆ ಕಾಂಗ್ರೆಸ ಮಂತ್ರಿಗಳನ್ನು ತೆಗೆದು ಹಾಕಿ ಅವರ ಸ್ಥಾನದಲ್ಲಿ ಅನ್ಯರನ್ನು ಕೂರಿಸಲು ಸ್ವಾತಂತ್ರ್ಯವಿದೆ. ನೀವು ಮಾತ್ರ ಮನಸ್ವಿಯಾಗಿ ನಡೆದುಕೊಳ್ಳಬಾರದು. ಆ ಮೇಲೆ ಪಶ್ಚಾತ್ತಾಪ ಪಡುವಂತೆ ಕಾರ್ಯಪ್ರವೃತ್ತರಾಗದಿರಿ.”

ಆಹಾರ ನಿಯಂತ್ರಣ

“ನಿನ್ನೆ ನಾನು ಹೇಳಿದಂತೆ ಮಾಡಿದರೆ ೨೪ ತಾಸುಗಳೊಳಗೆ ಆಹಾರ ಸಮಸ್ಯೆಯ ಬಹು ಭಾಗ ಪರಿಹಾರವಾಗಿ ಬಿಡುತ್ತದೆ. ತಜ್ಞರು ನಾನು ಹೇಳಿದ್ದನ್ನು ಸ್ವೀಕರಿಸುವರೋ ಬಿಡುವರೋ ಎಂಬುದು ಬೇರೆಯ ಪ್ರಶ್ನೆ.”

ಮಂತ್ರಿಗಳಿಗೆ ಎಚ್ಚರಿಕೆ

“ಬಹಳ ಜನರು ನನ್ನೆಡೆಗೆ ಬಂದು ಇಂದಿನ ಜನಪ್ರಿಯ ಮಂತ್ರಿಗಳು ಹಿಂದಿನ ಬ್ರಿಟಿಶ ಅಧಿಕಾರಿಗಳಂತೆ, ಸ್ವೇಚ್ಛೆಯಿಂದ ವರ್ತಿಸುವರೆಂಬ ಅರ್ಥಬರುವಂತೆ ಹೇಳಿದ್ದಾರೆ. ಮತ್ತು ಪತ್ರಾದಿಗಳನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಾನು ಮಂತ್ರಿಗಳೊಡನೆ ಮಾತೆತ್ತಿಲ್ಲ. ಬ್ರಿಟಿಶ ಸರಕಾರವನ್ನು ಅವರು ಏತಕ್ಕಾಗಿ ದೂರಿದರೋ ಅಂತಹ ಕೃತ್ಯಗಳು ಹೊಣೆಗಾರ ಮಂತ್ರಿಗಳ ಆಳಿಕೆಯಲ್ಲಿ ಸಂಭವಿಸಕೂಡದೆಂಬುದು ನನಗೆ ಸ್ಪಷ್ಟವಾಗಿ ತಿಳಿದಿದೆ. ಬ್ರಿಟಿಶರ ಆಳಿಕೆಯಲ್ಲಿ ವೈಸರಾಯರು ಕಾಯದೆ ರಚಿಸಲು ಮತ್ತು ಅವುಗಳನ್ನು ಅಮಲಿನಲ್ಲಿ ತರುವದಕ್ಕಾಗಿ ಹುಕುಮ್ಮುಗಳನ್ನು ಹೊರಡಿಸಲು ಬಲ್ಲವರಾಗಿದ್ದರು. ಕಾಯದೆಯ ಯುಕ್ತ ಆಚರಣ ನೋಡಿಕೊಳ್ಳುವ ಹಾಗೂ ನ್ಯಾಯದಾನ ಮಾಡುವ ಶಾಖೆಗಳ ಸಂಯೋಜನೆಯ ವಿರುದ್ಧ ದೊಡ್ಡ ಕೂಗೇ ಎದ್ದಿತ್ತು. ಆ ಅಭಿಪ್ರಾಯವನ್ನು ಬದಲಿಸಬೇಕಾದ ಪ್ರಸಂಗ ಅಲ್ಲಿಂದ ಇಲ್ಲಿಯತನಕ ಉಂಟಾಗಿಲ್ಲ. ಇಂದು ಎಲ್ಲೂ ಹುಕುಂಶಾಹಿಯಿರಕೂಡದು. ನಿಮ್ಮ ಶಾಸನ ಸಭೆಗಳು ಮಾತ್ರ ನಿಮಗಾಗಿ ಕಾಯದೆ ರಚಿಸುತ್ತಿರಬೇಕು. ಮಂತ್ರಿಗಳನ್ನು ಬೇಕಾದಾಗ ಬದಲಿಸಬಹುದು. ಅವರ ಕೃತ್ಯಗಳು ಕೋರ್ಟಿನ ಪರಿಶೀಲನೆಗೆ ಬದ್ಧವಾಗಿರಬೇಕು. ...

...ನೆಯಿಂದ ಲಭಿಸುವಂತೆ ಅವರು ಮಾಡತಕ್ಕದ್ದು. ಅದಕ್ಕಾಗಿ ಪಂಚಾಯತ ರಾಜ್ಯವನ್ನು ಸ್ಥಾಪಿಸಬೇಕೆಂದು ಸಲಹೆ ಕೊಡಲಾಗಿದೆ. ಹೈಕೋರ್ಟೊಂದು ಲಕ್ಷೋಪಲಕ್ಷ ಜನರಿಗೆ ನ್ಯಾಯದಾನ ಮಾಡಲು ಶಕ್ತವಾಗಲಾರದು. ಅಸಾಧಾರಣ ಪರಿಸ್ಥಿತಿಯಿದ್ದಾಗ ಮಾತ್ರ ಶೀಘ್ರ ಕಾರ್ಯಕಾರಿಯಾದ ಉಗ್ರ ಕಾಯದೆ ಹೊರಡಿಸುವುದು ಅಗತ್ಯ. ಎಷ್ಟೇ ತಡವಾಗಬಹುದೆನಿಸಿದರೂ ಶಾಸನ ಸಭೆಯನ್ನು ಎಂದೂ ಆಡಳಿತ ಶಾಖೆ ಮೀರಿ ಹೋಗತಕ್ಕದ್ದಲ್ಲ. ನನಗೆ ಈಗ ದೃಷ್ಟಾಂತವೊಂದೂ ಕಣ್ಣೆದುರಿಗಿಲ್ಲ. ಬೇರೆ ಬೇರೆ ಪ್ರಾಂತಗಳಿಂದ ಬಂದ ಪತ್ರಗಳನ್ನು ಆಧರಿಸಿ ನಾನು ಈ ಮಾತುಗಳನ್ನಾಡಿದ್ದೇನೆ. ಆದುದರಿಂದ ಮನಸ್ವಿಯಾಗಿ ವರ್ತಿಸಬಾರದೆಂದು ನಾನು ಜನರಿಗೆ ಬಿನ್ನವಿಸುವಾಗಲೇ ತಾವೇ ಹಳಿದ ಹಳೆಯಪದ್ಧತಿಗಳಿಗೆ ತಾವು ಬಲಿಯಾಗದಿರಬೇಕೆಂದು ಮಂತ್ರಿಗಳಿಗೆ ವಿಜ್ಞಾಪಿಸುತ್ತೇನೆ.”

ರಾಮರಾಜ್ಯದ ಗುಟ್ಟು

“ನಿಮ್ಮ ಸರಕಾರಗಳಿಗೆ ನೀವು ನಿಷ್ಠರಾಗಿ ಬಾಳಬೇಕೆಂದು ಜನತೆಗೆ ನಾನು ಬಿನ್ನವಿಸುತ್ತೇನೆ; ನಿಮಗಿರುವ ಹಕ್ಕಿನ ಪ್ರಕಾರ ಅದನ್ನು ಬಲಪಡಿಸಬಹುದು ಇಲ್ಲವೆ ಅಧಿಕಾರದಿಂದ ಹೊರಗೆ ತಳ್ಳಬಹುದು. ಜವಾಹರಲಾಲರು ನಿಜವಾಗಿಯೂ ಒಂದು ‘ಜವಾಹರ’ (ರತ್ನ). ಅವರೆಂದೂ ಹಿಂದು ರಾಜ್ಯಸ್ಥಾಪನೆಯಲ್ಲಿ, ಭಾಗಿಯಾಗರು; ಮುಸ್ಲಿಂ ಮಿತ್ರರ ಬೆಂಬಲಕ್ಕೆ ಮುಂದಾಳಾಗಿನಿಂತ ಸರದಾರರೂ ಅದಕ್ಕೆ ಮನಸ್ಸನ್ನು ಹಾಕಲಾರರು. ನಾನು ನನ್ನನ್ನು ಸನಾತನಿ ಹಿಂದುವೆಂದು ಕರೆದುಕೊಂಡರೂ ಅಲ್ಲಾ ಲೀನರಾದ ದ. ಆಫ್ರಿಕದ ಇಮಾಮಸಾಹೇಬರು ನನ್ನೊಡನೆ ಭಾರತಕ್ಕೆ ಬಂದು ಸಬರ್ಮತಿಯಲ್ಲಿ ಮೃತರಾದುದು ನನಗೆ ಹೆಮ್ಮೆಯದಾಗಿದೆ. ಅವರ ಮಗಳು ಅಳಿಯ ಇನ್ನೂ ಸಬರ್ಮತಿಯಲ್ಲೇ ಇದ್ದಾರೆ. ನಾನಾಗಲಿ ಸರದಾರರಾಗಲಿ, ಅವರನ್ನು ಹೊರಗೆ ಹೊತ್ತುಹಾಕಿಬಿಡುವುದೇ? ನನ್ನ ಹಿಂದು ಧರ್ಮ ಎಲ್ಲ ಧರ್ಮಗಳನ್ನೂ ಮರ್ಯಾದೆಯಿಂದ ನೋಡೆಂದು ನನಗೆ ಕಲಿಸಿದೆ. ರಾಮರಾಜ್ಯದ ಗುಟ್ಟು ಅದರಲ್ಲಿದೆ. ಜವಾಹರಲಾಲರು, ಸರದಾರರು ಮತ್ತು ಅವರಂತೆ ಅಭಿಪ್ರಾಯವುಳ್ಳ ಇತರರು ನಿಮ್ಮ ವಿಶ್ವಾಸವನ್ನು ಕಳೆದು ಕೊಂಡಿದ್ದರೆ ನಿಮಗೆ ವಿಶ್ವಾಸವಿರುವ ಇನ್ನೊಂದು ಬಣವನ್ನು ಅವರ ಸ್ಥಳದಲ್ಲಿ ತಂದಿಡಬಹುದು. ಆದ್ದರಿಂದ ಭಾರತವು ಕೇವಲ ಹಿಂದುಗಳಿಗೆ ಸೇರಿದ್ದೆಂದು ಅವರು ತಮ್ಮ ಆತ್ಮಕ್ಕೆ ವಿರುದ್ಧ ವರ್ತಿಸುವಂತೆ ನಿರೀಕ್ಷಿಸಬಾರದು. ಅದು ವಿನಾಶದ ಹಾದಿ.

ಬಿರ್ಲಾಭವನ, ಹೊಸದಿಲ್ಲಿ,
೮-೧೦-೧೯೪೭

ಹಣಕ್ಕಿಂತ ಹೊದಿಕೆ ಲೇಸು

“ಕೆಲವು ಹೊದಿಕೆಗಳು ಬಂದಿವೆ. ಮಧ್ಯಾಹ್ನ ಗೆಳೆಯನೊಬ್ಬನು ಬಂದು ಹಣ ಅಥವಾ ಹೊದಿಕೆ ಕೊಡುವೆನೆಂದ. ನಾನವನಿಗೆ ಹೊದಿಕೆಗಳನ್ನೇ ಕಳುಹೆಂದೆ. ಮತ್ತೊಬ್ಬನು ನಾನು ಸಭೆಗೆ ಬರುವಾಗ ಐನೂರು ರೂಪಾಯಿಗಳನ್ನು ಕೊಟ್ಟ. ಹೊದಿಕೆಯ ವಿಕ್ರಯಕ್ಕಾಗಿ ಅವುಗಳನ್ನು ಸ್ವೀಕರಿಸಿದೆ. ನನ್ನನ್ನು ಕೇಳಿದರೆ ಹಣಕ್ಕಿಂತ ಹೊದಿಕೆಗಳೇ ಲೇಸೆಂದು ಹೇಳುತ್ತೇನೆ.”

ವೀರರ ಅಹಿಂಸೆ

“ಒಬ್ಬ ಸಜ್ಜನ ನನ್ನನ್ನು ನೋಡಲು ಬಂದಿದ್ದ. ಅವನು ಡೆಹರಾಡೂನಿನಿಂದ ಆಗಮಿಸಿದ್ದ. ಅವನು ಪಯಣ ಮಾಡುತ್ತಿದ್ದ ಕೋಣೆಯಲ್ಲಿ ಹಿಂದು-ಶೀಖರೇ ಹೆಚ್ಚಾಗಿದ್ದರು. ಒಬ್ಬ ಹೊಸಬನನ್ನು ಕಂಡು ಅವರು ಶಂಕಿತರಾದರು. ಅವರು ಕೇಳಿದಾಗ ತಾನೊಬ್ಬ ಚಮ್ಮಾರನೆಂದು ಅವನು ಉತ್ತರವಿತ್ತ. ಆದರೆ ಅವನ ಕೈಮೇಲಿದ್ದ ಹಚ್ಚೆ ಅವನು ಮುಸಲ್ಮಾನನೆಂಬುದನ್ನು ತೋರಿಸಿಕೊಟ್ಟಿತು. ಅದೇ ಸಾಕಾಯಿತು. ಅವನನ್ನು ಕೊಂದು ಯಮುನಾ ನದಿಯಲ್ಲಿ ಒಗೆಯಲಾಯಿತು. ತಾನು ಮೊಗದಿರುಹಿ ಕುಳಿತೆನೆಂದು ಈ ಸಜ್ಜನನೆಂದ. ಪ್ರಾಣವನ್ನು ಕೊಟ್ಟಾದರೂ ಆ ಮುಸಲ್ಮಾನ ಸೋದರನ ಪ್ರಾಣ ಉಳಿಸಲು ಪ್ರಯತ್ನಿಸಬೇಕಾಗಿತ್ತೆಂದು ನಾನು ಅವನಿಗೆ ಛೀಕರಿಸಿದೆ. ಅವನು ಹಾಗೆಮಾಡಿದ್ದರೆ ಅವನ ಪ್ರಾಣ ಹೋದರೂ ಆ ಮುಸಲ್ಮಾನನ ಪ್ರಾಣ ಉಳಿಯುತ್ತಿತ್ತು. ಮತ್ತು ಅವನ ಧೈರ್ಯವು ಉಳಿದವರಿಗೊಂದು ಉದಾಹರಣೆಯಾಗಿ ಅವರೂ ಅಂತಹ ಕಾರ್ಯಕ್ಕೆ ತಮ್ಮ ವಿರೋಧವನ್ನು ವ್ಯಕ್ತಮಾಡುತ್ತಿದ್ದರು. ಹಾಗಾಗಬೇಕಿತ್ತು, ತನಗೆ ಅದು ಹೊಳೆಯಲಿಲ್ಲೆಂದು ಆ ಸಜ್ಜನ ಹೇಳಿದ.

“ಎಲ್ಲ ಪಯಣಿಗರೂ ಹಾಗೇ ಕುಚೋದ್ಯ ಮನಸ್ಕರೇಆಗಿದ್ದರೂ ನನ್ನ ಬುದ್ಧಿವಾದ ಅದೇಆಗಿರುತ್ತಿತ್ತೆಂಬುದನ್ನು ಯೋಚಿಸುವುದು ಬೇಡವೇ ...

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

(ಆನೇ ಪುಟದಿಂದ)

ಸುತ್ತದೆ. ಬ್ರಿಟಿಶರ ವಿರುದ್ಧ ಅವರು ಹೂಡಿದ ಹೋರಾಟವಾದರೂ ಧೀರರ ಅಹಿಂಸೆಯದಾಗಿರಲಿಲ್ಲ ವೆಂಬುದನ್ನು ನಾನು ಅರಿತಿದ್ದೆ. ಅದರಫಲಿತಾಂಶವಾಗಿಯೇ ನಾನು ಮತ್ತು ನನ್ನ ನಾಡು ಇಂದು ದುರ್ಗತಿಗಳಿದಿದ್ದೇವೆ.ಕೈಯಲ್ಲಾದರೆ ನನ್ನ ಉಳಿದ ಆಯುಷ್ಯವನ್ನು ಧೀರರ ಅಹಿಂಸಾಚಾರವನ್ನು ಜನರಿಗರುಹುವುದರಲ್ಲೇ ಕಳೆಯಬೇಕೆಂದಿದ್ದೇನೆ. ಇದು ಅತ್ಯಂತ ಕಷ್ಟದ ಕಾರ್ಯ. ಪಾಕಿಸ್ತಾನದಲ್ಲಾದದ್ದು ಮತ್ತು ಆಗುತ್ತಿರುವುದು ಅತ್ಯಂತ ಕೆಟ್ಟದೆಂಬುದನ್ನು ಒಪ್ಪುತ್ತೇನೆ. ಆದರೆ ಒಕ್ಕೂಟದಲ್ಲಾಗುತ್ತಿರುವುದೂ ಅಷ್ಟೇ ಕೆಟ್ಟದ್ದಾಗಿದೆ. ಯಾರು ಮೊದಲು ಪ್ರಾರಂಭಿಸಿದರು ಇಲ್ಲವೆ ಯಾರದು ಹೆಚ್ಚು ತಪ್ಪೆಂಬುದನ್ನು ಹುಡುಕಹೋಗುವುದು ವ್ಯರ್ಥ ಪ್ರಯತ್ನ. ಇಬ್ಬರೂ ಗೆಳೆಯರಾಗಬೇಕೆಂದಿದ್ದರೆ ಅವರು ಹಿಂದಿನದನ್ನು ಮರೆತು ಬಿಡಬೇಕು. ನಿನ್ನೆಯ ಹಗೆಗಳು ಇಂದು ಗೆಳೆಯರಾಗಬಹುದು— ಆದರೆ ಅವರು ವಾಕ್ಯದಲ್ಲಾಗಲಿ ಕಾರ್ಯದಲ್ಲಾಗಲಿ ಪ್ರತೀಕಾರವನ್ನು ಬಿಡಬೇಕು.

ವೃತ್ತಪತ್ರಿಕೆಗಳ ಕರ್ತವ್ಯ

"ವೃತ್ತಪತ್ರಿಕೆಗಳದು ಸಮರ್ಥ ಪ್ರಭಾವ. ಸುಳ್ಳು ಸುದ್ದಿ ಇಲ್ಲವೆ ಜನರನ್ನುದ್ರೇಕಗೊಳಿಸುವಂಥ ಸುದ್ದಿ ಇವನ್ನು ಸಂಪಾದಕರು ಪ್ರಕಟಿಸಬಾರದು. ರೇವಾರಿಯಲ್ಲಿ ಹಿಂದುಗಳನ್ನು ಮೇಯೋ ಜನರು ದಾಳಿಗೀಡು ಮಾಡಿದರೆಂದು ಪ್ರಕಟಿಸಲಾಗಿದೆ. ಅದನ್ನೋದಿ ನನಗೆ ತಲೆ ಕೆಡುವಂತಾಯಿತು. ಮರುದಿನವೇನೋ ಆ ಸುದ್ದಿ ಸುಳ್ಳೆಂದು ಪ್ರಕಟವಾದದ್ದು ಎಷ್ಟೋ ಸಂತೋಷಕರವೆನಿಸಿತು. ಅಧು ನೂರಾರು ನಿದರ್ಶನಗಳಲ್ಲೊಂದು-ಸುದ್ದಿಯನ್ನು ಕೊಡುವಾಗಲೂ ಅದಕ್ಕೆ ಬಣ್ಣ ಬಳಿವಾಗಲೂ ಸಂಪಾದಕರು ಮತ್ತು ಅವರ ಸಹಾಯಕರು ಅತಿಶಯ ಎಚ್ಚರದಿಂದಿರಬೇಕು. ಈ ಸ್ವಾತಂತ್ರ್ಯ ಸ್ಥಿತಿಯಲ್ಲಿ ಸರಕಾರಕ್ಕೆ ವೃತ್ತಪತ್ರವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ವೃತ್ತಪತ್ರಿಕೆಗಳ ಮೇಲೆ ವೈನತೇಯ ದೃಷ್ಟಿಯಿಟ್ಟು ಅವನ್ನು ಸರಿಯಾದ ಮಾರ್ಗದಲ್ಲಿ ನಡೆವಂತೆ ನೋಡಿಕೊಳ್ಳುವುದು ಸಾರ್ವಜನಿಕರ ಕರ್ತವ್ಯ. ಪ್ರಬುದ್ಧ ಜನತೆಯೆಂದೂ ಉದ್ರೇಕ ಕಾರಕ ಇಲ್ಲವೆ ಅಶ್ಲೀಲ ಪತ್ರಿಕೆಗಳನ್ನು ಪ್ರೋತ್ಸಾಹಿಸದು.

ಮಿಲಿಟರಿ ಮತ್ತು ಪೋಲೀಸರ ಕರ್ತವ್ಯ

ಸರಕಾರಕ್ಕೆ ವೃತ್ತಪತ್ರಿಕೆಯೊಂದು ಸಮರ್ಥ ತೋಳಾಗಿರುವಂತೆ ಮಿಲಿಟರಿ ಮತ್ತು ಪೋಲೀಸರು ಮತ್ತೊಂದು ತೋಳು. ಅವರೆಂದೂ ಪಕ್ಷ ವಹಿಸಲಾರರು. ಮಿಲಿಟರಿ ಮತ್ತು ಪೋಲೀಸು ದಲಗಳಲ್ಲಿ ಜಾತೀಯ ವಿಭಜನೆಯಾದುದು ಖೇದಕರ. ಆದರೆ ಮಿಲಿಟರಿ ಮತ್ತು ಪೋಲೀಸರು ಜಾತೀಯ ಭಾವನೆಯುಳ್ಳವರಾದರೆ ದೇಶಕ್ಕೆ ವಿನಾಶವುಂಟಾಗದಿರದು. ತಮ್ಮ ಪ್ರಾಣವನ್ನು ಕೊಟ್ಟಾದರೂ ಒಕ್ಕೂಟ ಧ್ವಜದಡಿಯಲ್ಲಿ ಅವರು ಅಲ್ಪಸಂಖ್ಯಾಕರನ್ನು ರಕ್ಷಿಸಲು ಬದ್ಧರಾಗಿದ್ದಾರೆ. ಈ ಮುಖ್ಯ ಕರ್ತವ್ಯವನ್ನು ಅವರು ಒಂದು ಕ್ಷಣವಾದರೂ ಮರೆತಿರಲಾರರು. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರನ್ನು ಸಂರಕ್ಷಿಸಲು ಬದ್ಧರಾದ ಮಿಲಿಟರಿ ಮತ್ತು ಪೋಲೀಸು ದಲಗಳಿಗೂ ನಾನು ಇದೇ ಮಾತನ್ನು ಹೇಳಬಯಸುತ್ತೇನೆ. ಅವರು ನನ್ನ ಮಾತನ್ನು ಕೇಳಲಿ ಬಿಡಲಿ, ಒಕ್ಕೂಟದಲ್ಲಿಯವರು ಹಾಗೆ ಮಾಡುವಂತೆ ಮಾಡಬಲ್ಲೆನಾದರೆ ಪಾಕಿಸ್ತಾನ ಹಾಗೆ ಮಾಡಲೇ ಬೇಕಾಗುತ್ತದೆ.

ರಕ್ತಪ್ರವಾಹವಿಲ್ಲದೆ ಹಿಂದುಸ್ತಾನವು ಸ್ವಾತಂತ್ರ್ಯ ಸಂಪಾದಿಸಿದ್ದನ್ನು ಕಂಡು ಇಡೀ ಜಗತ್ತೇ ಮೆಚ್ಚಿದೆ. ಹಿಂದೀಯರು ತಮ್ಮ ಯೋಗ್ಯ ನಡತೆಯಿಂದ ಆ ಸ್ವಾತಂತ್ರ್ಯಕ್ಕೆ ಅರ್ಹರೆನಿಸಿಕೊಳ್ಳಬೇಕು. ಅದಲ್ಲದೆ,ಸ್ವಾತಂತ್ರ್ಯದಡಿಯಲ್ಲಿ ಮಿಲಿಟರಿ ಮತ್ತು ಪೋಲೀಸು ದಲದವರು ಪ್ರಾಮಾಣಿಕರಾಗಿರಬೇಕು. ಸರಕಾರಕ್ಕೆ ಮಾಡಬೇಕಾದ ಕರ್ತವ್ಯವನ್ನು ಪ್ರತಿಯೊಬ್ಬ ನಾಗರಿಕನೂ ಮಾಡಿದಲ್ಲದೆ ಯಾವ ಸ್ವತಂತ್ರ ಸರಕಾರವೂ ಕಾರ್ಯ ನಡೆಸಲು ಶಕ್ತವಾಗದು. ಅಹಿಂಸೆಯಿರಲಿ ಹಿಂಸೆಯಿರಲಿ, ಸರಿಯಾದ ನಡತೆಯಿರಬೇಕೆಂಬುದೇ ನಾನು ಬೇಡಿಕೊಳ್ಳುವುದು. ನನ್ನ ಮಾತನ್ನೀಗ ಕೇಳದೆ ಹೋದರೆ ಅವರು ಅನಂತರ ಪಶ್ಚಾತ್ತಾಪ ಪಡುವಂತಾದೀತು.

ಬಿರ್ಲಾ ಭವನ ಹೊಸದಿಲ್ಲಿ,
೯-೧೦-೧೯೪೭

ಹೊದಿಕೆಗಳನ್ನು ಬೇಗ ದಯಪಾಲಿಸಿರಿ

"ಇಡೀ ದಿನದಲ್ಲಿ ಒಟ್ಟು ೩೦ ಹೊದಿಕೆಗಳು ಬಂದಿವೆ.ಕೊಡುವವರು ಬೇಗ ಕೊಡಬೇಕು.ಈ ಅಕ್ಟೋಬರಿನ ಮಧ್ಯದಿಂದ ದಿಲ್ಲಿಯಲ್ಲಿ ಚಳಿ ಉಗ್ರವಾಗುತ್ತದೆ. ಸಮಯೋಚಿತವಲ್ಲದ ದಾನದ ಬೆಲೆ ಉಳಿಯದು.

ಶಾಂತರೀತಿಯಿಂದ ಕೇಳಿದರೆ ಸಾಲದು

"ನೀವೆಲ್ಲ ಶಾಂತರೀತಿಯಿಂದ ನನ್ನ ಮಾತುಗಳನ್ನು ಕೇಳಿದ್ದಕ್ಕೆ ನಿಮಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ಅಷ್ಟೇ ಸಾಲದು. ಕೇಳಲು ಯೋಗ್ಯವೇ ಆಗಿದ್ದರೆ ನನ್ನ ಬುದ್ಧಿವಾದವನ್ನು ಆಚರಣೆಗೆ ತರಬೇಕು.

ಪಾಕಿಸ್ತಾನದ ಅಲ್ಪಸಂಖ್ಯಾಕರು

"ಪಾಕಿಸ್ತಾನದಲ್ಲಿರುವ ಹಿಂದು ಶೀಖರು ಭಯಂಕರ ಸ್ಥಿತಿಯಲ್ಲಿದ್ದಾರೆ. ಊರುಬಿಟ್ಟು ಹೋಗುವದು ದುರ್ಧರವಾದುದು. ಬಹಳಜನ ದಾರಿಯಲ್ಲೇ ಸಾಯಬೇಕು. ಹಿಂದುಸ್ತಾನಕ್ಕೆ ಬಂದಮೇಲೂ ನಿರಾಶ್ರಿತ ಸ್ಥಿತಿಯಲ್ಲಿರುವ ಅವರ [illegible] ಅಷ್ಟೇನೂ ಸಂತೋಷಕರವಾಗಿಲ್ಲ. ಕುರುಕ್ಷೇತ್ರದ ಒಂದು ಶಿಬಿರದಲ್ಲಿ ಸಾವಿರಾರು ಜನರು ಆಗಸದ ಮರೆಯಲ್ಲಿ ಉಳಿದಿದ್ದರು. ಚಿಕಿತ್ಸಾ ಸಹಾಯ ಸಾಲದು, ಆಹಾರ ಪುಷ್ಟಿ ಕಡಿಮೆ. ಸರಕಾರವನ್ನು ದೂರುವುದು ತಪ್ಪು. ಜನರಿಗೆ ನಾನೇನು ಬುದ್ಧಿವಾದ ಹೇಳಲಿ? ಪಶ್ಚಿಮ ಪಾಕಿಸ್ತಾನದ ಕೆಲ ಗೆಳೆಯರು ಮಧ್ಯಾಹ್ನ ನನಗೆ ಭೆಟ್ಟಿಯಾದರು. ಅವರು ತಮ್ಮ ಕರುಣ ಕಥೆಗಳನ್ನು ಹೇಳಿ ಉಳಿದವರು ಅತ್ಯಂತತ್ವರೆಯಿಂದ ಹೊರಟು ಬರುವಂತೆ ಮಾಡಹೇಳಿದರು. ನಾನು ಸರಕಾರವಲ್ಲ. ಆದರೆ ಜಗತ್ತಿನ ಎಲ್ಲ ಇಚ್ಛಾಶಕ್ತಿಯನ್ನೂ ಕೇಂದ್ರೀಕರಿಸಿದರೂ ಇಂತಹ ಅಪೂರ್ವ ಸನ್ನಿವೇಶದಲ್ಲಿ ಯಾವ ಸರಕಾರವೂ ಮಾಡಬೇಕೆಂದಿರುವುದೆಲ್ಲವನ್ನೂ ಮಾಡಲಾರದು. ಪೂರ್ವ ಬಂಗಾಲದಿಂದಲೂ ಜನರು ಓಡಿಬರುತ್ತಿರುವ ಸುದ್ದಿ ಬಂದಿದೆ. ನನಗೆ ಅದರ ಕಾರಣ ಗೊತ್ತಿಲ್ಲ. ನನ್ನ ಸಹಕಾರ್ಯಕರ್ತರಾದ ಸತೀಶಬಾಬು, ಖಾದಿಪ್ರತಿಷ್ಠಾನದ ಮತ್ತಿತರರು, ಪ್ಯಾರೇಲಾಲ, ಕನುಗಾಂಧಿ, ಅಮ್ತುಲ ಸಲಾಮ ಬಹೀನ, ಸರದಾರ ಜೀವನಸಿಂಗ ಈ ಎಲ್ಲರೂ ಇನ್ನೂ ಅಲ್ಲೇ ಇದ್ದಾರೆ. ನಾನೇ ನೌಖಾಲಿಯಲ್ಲಿ ತಿರುಗಿ ಅಂಜದಿರಬೇಕೆಂದು ಜನರಿಗೆ ಉಪದೇಶಿಸಿದೆ. ಅದರಿಂದ ಜನರ ಮತ್ತು ಸರಕಾರದ ಕರ್ತವ್ಯವೇನೆಂಬುದನ್ನು ನಾನು ಯೋಚಿಸುವ ಸಂದರ್ಭ ಉಂಟಾಯಿತು. ಒಂದು ದಬ್ಬಾಳಿಕೆಯ ಜಾಗದಿಂದ ಓಡಿಹೋಗುವವರು ಮತ್ತೊಂದೆಡೆ ಉತ್ತಮವಿರಬಹುದೆಂದು ತರ್ಕಿಸುತ್ತಾರೆ. ಆದರೆ ಅವರದು ತಪ್ಪುತಿಳುವಳಿಕೆ. ಜಗತ್ತಿನೆಲ್ಲ ಯತ್ನಶಕ್ತಿಯನ್ನು ಒಟ್ಟುಗೂಡಿಸಿದೂ ಅಷ್ಟು ಜನ ನಿರಾಶ್ರಿತರನ್ನು ಯಾವ ಸರಕಾರವೂ ಸುಧಾರಿಸಲಾರದು. ಮೊದಲಿದ್ದ ಸ್ಥಿತಿಯನ್ನು ಸರಕಾರದವರು ಪುನಃ ಉಂಟುಮಾಡಲಾರರು. ಇದ್ದ ಸ್ಥಳದಲ್ಲೇ ಇದ್ದು 'ಅನಾಥೋ ದೈವರಕ್ಷಕಃ' ಎಂದು ದೃಢವಾಗಿ ನಂಬಿರಬೇಕೆಂಬುದೇ ಅವರು ಕೊಡಬಲ್ಲ ಬುದ್ಧಿವಾದ. ಸಾಯಲೇಬೇಕಾದರೆ ಅವರು ಮನೆಯಲ್ಲೇ ಧೀರರಾಗಿ ಸಾಯಲಿ. ಅಲ್ಪಸಂಖ್ಯಾಕರ ಸುರಕ್ಷಿತತೆಯನ್ನು ಬೇಡುವುದು ಮತ್ತೊಂದು ಸರಕಾರದ ಸ್ವಾಭಾವಿಕ ಕರ್ತವ್ಯ. ಸರಿಯಾಗಿ ಹಾಗೂ ಸಹಕಾರದಿಂದ ವರ್ತಿಸುವುದು ಎರಡೂ ಸರಕಾರಗಳ ಕರ್ತವ್ಯ. ಅ ಇಷ್ಟ ಘಟನೆ ಸಂಭವಿಸಲಿಲ್ಲವಾದರೆ ಯುದ್ಧವು ಪ್ರಾರಂಭವಾಗುವದು ತರ್ಕಸಿದ್ಧವಾದುದು. ನಾನದನ್ನೆಂದಿಗೂ ಬಯಸುವವನಲ್ಲ. ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸರಕಾರಗಳು ಬೇರೆ ಯಾವ ರೀತಿಯಲ್ಲೂ ವರ್ತಿಸಲಾರವು. ಇಂಥ ವ್ಯಾಪಾರವೆಂದರೆ ಮಾನವ ಸಂಹಾರವೆ ಹೊರತು ಬೇರೆ ಏನೂ ಇಲ್ಲ. ಜನರ ಸ್ಥಾನಾಂತರದ ಕಾಲದಲ್ಲಿ ನಡೆದ ಸಂಹಾರದಿಂದ ಯಾರಿಗೂ ಹಿತವಾಗಿಲ್ಲ. ಈ ಸ್ಥಾನಾಂತರದಿಂದ ಪರಿಹಾರ, ಪುನರ್ನಿವೇಶನದಂಥ ಅನೇಕ ಮಹತ್ವದ ಸಮಸ್ಯೆಗಳು ಉದ್ಭವಿಸಿವೆ."

ಬಿರ್ಲಾ ಭವನ ಹೊಸದಿಲ್ಲಿ ೧೦-೧೦-೪೭

ಇನ್ನೂ ಹೆಚ್ಚು ಕಂಬಳಿಗಳು ದೊರೆತಿವೆಯೆಂದು ಮಹಾತ್ಮರು ಇಂದು ಹೇಳಿದರು. ಕಂಬಳಿಗಳನ್ನು ಕೊಂಡುಕೊಳ್ಳಲು ಕೆಲವರು ಹಣವನ್ನೂ ಒಂದು ಚಿನ್ನದುಂಗರವನ್ನೂ ಕೊಟ್ಟಿದ್ದಾರೆ. ದಿಲ್ಲಿಗೆ ಕಳುಹುವದಕ್ಕಾಗಿ ೮೦೦ ಕಂಬಳಿಗಳು ಸಿದ್ಧವಾಗಿವೆ, ಅವನ್ನು ಕಳುಹಲು ರೇಲ್ವೆ ಸೌಕರ್ಯ ದೊರತರೆ ಇನ್ನೂ ಹೆಚ್ಚು ಕಂಬಳಿಗಳನ್ನು ಕಳುಹಲಾಗುವದು ಎಂದು ಬಡೋದೆಯಿಂದ ಮಹಾತ್ಮರಿಗೆ ತಂತಿ ಬಂದಿದೆ. ಈ ಪ್ರಮಾಣದಿಂದ ಕಂಬಳಿಗಳು ದೊರೆಯುತ್ತಿದ್ದರೆ ನಿರಾಶ್ರಿತರನ್ನು ಚಳಿಗಾಲದ ಕುಳಿಗಾಳಿಯಿಂದ ರಕ್ಷಿಸಲು ಸಾಧ್ಯವಾಗಬಹುದು ಎಂದು ಗಾಂಧೀಜಿ ಹೇಳಿದರು.

ಅನ್ನಬಟ್ಟೆಯ ಕೊರತೆ

"ನಮಗೆ ಸ್ವಾತಂತ್ರ್ಯ ದೊರೆತಂದಿನಿಂದ ಅನ್ನಬಟ್ಟೆಯ ಸಮಸ್ಯೆಗಳು ಇನ್ನಷ್ಟು ಜಟಿಲವಾಗಿವೆ. ಇದಕ್ಕೆ ಕಾರಣವೇನೋ ತಿಳಿಯದಾಗಿದೆ. ಇವೇನೂ ನಮಗೆ ಸ್ವಾತಂತ್ರ್ಯ ದೊರೆತದ್ದರ ಚಿಹ್ನವಲ್ಲ. ನಾವು ಸ್ವಾತಂತ್ರ್ಯ ಸಂಪಾದಿಸಿದ ರೀತಿಯನ್ನು ಇಡೀ ಜಗತ್ತೇ ಕೊಂಡಾಡುತ್ತಿರುವುದರಿಂದ ನಮ್ಮ ಸ್ವಾತಂತ್ರ್ಯಕ್ಕೆ ವಿಶೇಷ ಮಹತ್ವವಿದೆ. ಅಹಿಂಸೆಯ ದಾರಿ ನಮ್ಮದು. ಈ ಸ್ವಾತಂತ್ರ್ಯವು ನಮ್ಮ ಇತರ ಸಮಸ್ಯೆಗಳನ್ನು ಹರಿಸಲೂ ಸಹಾಯಕವಾಗಬೇಕು.

ನಿಯಂತ್ರಣ ಹಾಗೂ ಸೀದಾ ಪದ್ಧತಿಯು ಅಸ್ವಾಭಾವಿಕವೂ ಅವ್ಯವಹಾರಿಕವೂ ಆಗಿದೆಯೆಂದು ನನ್ನ ಮತ. ನಮ್ಮಲ್ಲಿ ಫಲವತ್ತಾದ ಭೂಮಿ ಬೇಕಾದಷ್ಟಿದೆ. ಜಲಸಮೃದ್ಧಿಯಿದೆ. ಅಂದ ಮೇಲೆ ನಮಗೆ ಆಹಾರದ ಕೊರತೆ ಏಕೆ ಬೀಳಬೇಕು? ಜನರಿಗ್ಗೆ ಮೊದಲು ಸ್ವಾವಲಂಬನವನ್ನು ಕಲಿಸಬೇಕು. ಜನರು ಸ್ವಾವಲಂಬನದ ಮಹತ್ವವನ್ನು ಒಮ್ಮೆ ಅರಿತುಕೊಂಡರೆ ಪರಿಸ್ಥಿತಿಯಲ್ಲಿ ಒಮ್ಮೆಲೇ ಬದಲಾವಣೆಯಾಗುವದು. ಉಪವಾಸ ಬರಗಾಲಗಳು ಹೇಳಹೆಸರಿಲ್ಲದೆ ಹೋಗುವವು. ಭಾರತವು ತನಗೆ ಬೇಕಾಗುವಷ್ಟಕ್ಕಿಂತ ಹೆಚ್ಚಿಗೆ ಹತ್ತಿ ಬೆಳೆಯುತ್ತಿದ್ದರೂ ಬಟ್ಟೆಯ ಕೊರತೆಯೇಕಾಗಬೇಕೆಂಬುದು ತಿಳಿಯುವದಿಲ್ಲ. ಜನರು ನೂತು ತಮ್ಮ ಬಟ್ಟೆಗಳನ್ನು ತಾವೇ ನೆಯ್ದುಕೊಳ್ಳಬಹುದು. ಅದ್ದರಿಂದ ಬಟ್ಟೆಯ ನಿಯಂತ್ರಣವನ್ನೂ ಕಿತ್ತಹಾಕಬೇಕೆಂದು ನಾನು ಹೇಳುತ್ತೇನೆ. ಇದರಿಂದ ದರಗಳು ಏರಬಹುದು. ಜನರು ಆರು ತಿಂಗಳವರೆಗಾದರೂ ಬಟ್ಟೆ ಹುಗಿದಿಡುವದನ್ನು ಬಿಟ್ಟರೆ ದರಗಳು ತಮ್ಮಷ್ಟಕ್ಕೆ ತಾವೇ ಕೆಳಗಿಳಿಯುವವು. ಈ ಅವಧಿಯಲ್ಲಿ ಜನರೂ ತಮ್ಮ ಖಾದಿಯನ್ನು ತಾವೇ ತಯಾರಿಸಿಕೊಳ್ಳಬೇಕು.

ಇತರ ಬಟ್ಟೆ ಬಿಟ್ಟು ಖಾದಿಯನ್ನೇ ಉಪಯೋಗಿಸಿರಿ ಎಂದು ನಾನು ಈಗೇನೂ ಒತ್ತಾಯಪಡಿಸುವದಿಲ್ಲ. ಜನರು ತಮ್ಮ ಅನ್ನ ಬಟ್ಟೆಗಳನ್ನು ತಾವೆ ತಯಾರಿಸಹತ್ತಿದರೆ ಇಡೀ ಪರಿಸ್ಥಿತಿ ಕೂಡಲೆ ಬದಲಾಗುವದು. ಈಗ ನಮಗೆ ರಾಜಕೀಯ ಸ್ವಾತಂತ್ರ್ಯ ದೊರೆತಿದೆ. ನನ್ನ ಈ ಉಪದೇಶವನ್ನು ಅನುಸರಿಸಿದರೆ ಆರ್ಥಿಕ ಸ್ವಾತಂತ್ರ್ಯವೂ ದೊರೆಯುವದು. ಪ್ರತಿಯೊಬ್ಬ ಹಳ್ಳಿಗನಿಗೂ ಇದರ ಅನುಭವವಾಗದಿರದು. ಆಗ ನಾವು ನಮ್ಮನಮ್ಮಲ್ಲಿ ಹೊಡೆದಾಡುವದು ತಪ್ಪುವದು. ಕುಡಿತ ಜೂಜಾಟದಂಥ ಕೆಟ್ಟ ವ್ಯಸನಗಳಿಗೂ ಅಸ್ಪದವಿಲ್ಲದಾಗುವದು. ತಮಗೆ ತಾವೇ ನೆರವಾಗುವವರಿಗೆ ದೇವರೂ ನೆರವಾಗುವನು.

ಚರಕ ಜಯಂತಿ

ಬಿರ್ಲಾ ಭವನ, ಹೊಸದಿಲ್ಲಿ
೧೧-೧೦-೪೭

ಇಂದು ಪ್ರಾರ್ಥನಾ ನಂತರ ಗಾಂಧೀಜಿಯವರು ಮಾಡಿದ ಭಾಷಣದಲ್ಲಿ ಹೀಗೆ ಹೇಳಿದರು–

"ಇಂದು ಭಾದ್ರಪದ ಬಹುಳದ್ವಾದಶಿ ತಿಥಿಯು ಗುಜರಾತ, ಕಾಠೇವಾಡಗಳಲ್ಲಿ ಇಂದಿನ ದಿನವನ್ನು ಚರಕ ಜಯಂತಿ ದಿನವೆಂದು ಆಚರಿಸುವರು. ಸಭೆಗಳನ್ನು ಸೇರಿಸಿ ಖಾದಿ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ನೆನಪು ತಂದು ಕೊಡುವ ಕಾರ್ಯ ನಡೆಯಿತು. ಒಳ್ಳೆ ಸಂಭ್ರಮದಿಂದ ಚರಖಾ ಜಯಂತಿ ಆಚರಿಸಲು ಕಾಲ ಪರಿಸ್ಥಿತಿ ಅನುಕೂಲವಾಗಿಲ್ಲ. ಚರಕವು ಅಹಿಂಸೆಯ ಪ್ರತೀಕವೆಂದು ನಾನು ಭಾವಿಸುವೆ. ಆದರೆ ಬಂಧುಹತ್ಯೆ ಮತ್ತು ಇತರ ಹಿಂಸಾಚಾರಗಳು ನಡೆದುದನ್ನು ನೋಡಿದರೆ ಅಹಿಂಸೆಯು ಕಣ್ಮರೆಯಾಗಿದೆಯೇ ಎಂದು ಅನಿಸುವಂತಿದೆ. ಇದರಿಂದ ಚರಕ ಜಯಂತಿಯ ಆಚರಣೆಯನ್ನು ನಿಲ್ಲಿಸಿ ಬಿಡುವದು ಯೋಗ್ಯವಾಗಲಿಕ್ಕಿಲ್ಲವೆ? ಆದರೂ ಇನ್ನೂ ಅಲ್ಲಲ್ಲಿ ಕೆಲವು ವ್ಯಕ್ತಿಗಳಾದರೂ ಚರಕದ ಸಂದೇಶವಾದ ಅಹಿಂಸೆಯಲ್ಲಿ ಶ್ರದ್ಧೆಯುಳ್ಳವರು ಇರಬಹುದೆಂದು ನನಗೆ ಅನಿಸುತ್ತದೆ. ಇಂಥ ಜನರ ಸಲುವಾಗಿ ಚರಕ ಜಯಂತಿ ಆಚರಿಸುವದು ನಡೆಯಲಿ.

ಹರಿಜನರಿಗೆ ವರ್ಗ ಚಿಹ್ನಗಳು

"ಪಾಕಿಸ್ತಾನಮಂತ್ರಿ ಮಂಡಲದಲ್ಲಿಯ ಕೆಲವರೂ ಮಂಡಲ ಸಾಹೇಬರೂ ಹರಿಜನರು ಅರ್ಧಚಂದ್ರ ಮತ್ತು ಚುಕ್ಕೆಗಳುಳ್ಳ ಚಿಹ್ನಗಳ ಬಿಲ್ಲೆಗಳನು ಧರಿಸಬೇಕೆಂದು ಹೊರಡಿಸಿದ ಪ್ರಕಟನೆ ನಿನ್ನೆ ದಿನ ನನ್ನ ದೃಷ್ಟಿಗೆ ಬಿದ್ದಿದೆ. ಹರಿಜನರೆಂದು ಸುಲಭವಾಗಿ ಗುರುತು ಹಿಡಿಯಲು ಅನುಕೂಲವಾಗಬೇಕೆಂಬುದೇ ಈ ಚಿಹ್ನ ಧಾರಣೆಯ ಉದ್ದೇಶವೆಂದು ಹೇಳಲಾಗಿದೆ.

ಇಂಥ ಸೂಚನೆಗಳಿಂದ ಧ್ವನಿತವಾಗುವದೇನು? ಅಲ್ಲಿ ವಾಸಿಸುವ ಹರಿಜನರೆಲ್ಲರೂ ಕೊನೆಗೆ ಇಸ್ಲಾಂ ಧರ್ಮ ಸ್ವೀಕರಿಸಬೇಕಾಗುವದೆಂಬುದು ನನ್ನ ಅಭಿಪ್ರಾಯವಾಗಿದೆ. ಧರ್ಮಾಂತರದ ಬಗ್ಗೆ ಧರ್ಮತತ್ವಗಳಲ್ಲಿ ಶ್ರದ್ಧೆಯುಂಟಾಗಿ ಅಸ್ಕೋತ್ಸ್ಫೂರ್ತಿಯ ಹಂಬಲದಿಂದ ಧರ್ಮಾಂತರ ಮಾಡುತ್ತಿದ್ದರೆ ಅದಕ್ಕೆ ಆಕ್ಷೇಪವಿಲ್ಲ. ನಾನು ಸ್ವೇಚ್ಛೆಯಿಂದ ಹರಿಜನನಾದುದರಿಂದ ನನಗೆ ಹರಿಜನರ ಮನೋಭೂಮಿಕೆ ಚೆನ್ನಾಗಿ ಗೊತ್ತಿದೆ. ಆಕ್ತೋತ್ಸ್ಫೂರ್ತಿಗಾಗಿ ಧರ್ಮಾಂತರ ಮಾಡಲಿಚ್ಛಿಸುವ ಒಬ್ಬ ಹರಿಜನನೂ ಇಲ್ಲ. ಇಸ್ಲಾಂ ಧರ್ಮದ ತತ್ವಗಳನ್ನು ಹರಿಜನರು ಅರಿಯರು. ಅವರು ಹಿಂದುಗಳಾಗಿ ಯಾಕೆ ಉಳಿದಿರುವರೆಂಬುದನ್ನು ಅರಿಯರು. ಯಾವದೇ ಧರ್ಮದ ಅನುಯಾಯಿಗಳಿಗೂ ಈ ಮಾತು ಅನ್ವಯಿಸುವದು. ಯಾವದೇ ಧರ್ಮದವರಾಗಿರಲು ಅವರು ಆ ಧರ್ಮದಲ್ಲಿ ಹುಟ್ಟಿದ್ದೇ ಕಾರಣ. ಧರ್ಮಾಂತರಿಸಲು ಒತ್ತಾಯ ಇಲ್ಲವೆ ಕೆಲವೊಂದು ಆಮಿಷಗಳಿಗೆ ಮನಸೋಲುವದು ಕಾರಣಗಳಾಗಿರಬಹುದು. ಈಗಿನ ವಾತಾವರಣದಲ್ಲಿ ಸ್ವಯಂಪ್ರೇರಣೆಯಿಂದ ಧರ್ಮಾಂತರ ಮಾಡಿದರೆಂದು ಹೇಳುವದರಲ್ಲಿ ಅರ್ಥವಿಲ್ಲ.

ಧರ್ಮವು ಜೀವನಕ್ಕಿಂತಲೂ ಪ್ರಿಯವಾದುದಾಗಿರಬೇಕು. ಹಿಂದೂ ಧರ್ಮಶಾಸ್ತ್ರಗಳಲ್ಲಿ ಪಾರಂಗತನಾದವನಾಗಿದ್ದರೂ ಗಂಡಾಂತರ ಸಮಯದಲ್ಲಿ ಧರ್ಮದಲ್ಲಿಯ ಅವನಶ್ರದ್ಧೆಯು ಅಚಲವಾಗಿ ಉಳಿಯದೆ ಇರುವಂಥವನಿಗಿಂತ ಧರ್ಮಶಾಸ್ತ್ರ ಓದದವನಾದರೂ ಧರ್ಮತತ್ವದಂತೆ ಆಚರಿಸಲು ತಪ್ಪದವನು ಶ್ರೇಷ್ಠ ಹಿಂದು ಎಂದು ಹೇಳಬಹುದು."

ದಸರೆ ಮತ್ತು ಬಕರಿ ಈದ

ಆ ಮೇಲೆ ಗಾಂಧಿಯವರು ದಸರೆ ಮತ್ತು ಬಕರಿ ಈದ ಹಬ್ಬಗಳ ಸಮಯದಲ್ಲಿ ಹಿಂದು ಮುಸಲ್ಮಾನರು ಒಳ್ಳೆಯ ಜಾಗರೂಕರಾಗಿದ್ದು ಒಬ್ಬರ ಭಾವನೆಗೆ ಬೇರೊಬ್ಬರ ಕೃತ್ಯದಿಂದ ನೋವುಂಟಾಗದಂತೆ ವರ್ತಿಸಬೇಕೆಂದೂ ಈ ಹಬ್ಬದ ದಿನಗಳಲ್ಲಿ ಜಾತೀಯ ಗಲಭೆಗೆ ಅವಕಾಶಕೊಡುವ ಕೃತ್ಯಗಳಿಂದ ದೂರ ಇರಬೇಕೆಂದೂ ಹೇಳಿದರು.

ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹ

ಕೊನೆಯದಾಗಿ ಗಾಂಧೀಜಿಯು ನಾಳಿನ ದಿನವೇ ದಕ್ಷಿಣ ಆಫ್ರಿಕೆಯಲ್ಲಿ ಪ್ರಾರಂಭವಾಗಲಿರುವ ಸತ್ಯಾಗ್ರಹದ ಬಗ್ಗೆ ಮಾತಾಡುತ್ತ ಹೀಗೆ ಹೇಳಿದರು.

"ದಕ್ಷಿಣ ಆಫ್ರಿಕೆಯಲ್ಲಿ ಕೆಲವು ದಿನಗಳ ವರೆಗೆ ಸತ್ಯಾಗ್ರಹವನ್ನು ಹೂಡಲಾಗಿತ್ತು. ಮಧ್ಯದಲ್ಲಿ ಸತ್ಯಾಗ್ರಹವನ್ನು ತಡೆಹಿಡಿಯಲಾಗಿತ್ತು. ಹಿಂದುಸ್ತಾನವು ಯುಕ್ತರಾಷ್ಟ್ರಕ್ಕೆ ದೂರು ಕಳಿಸಿದೆ. ದಕ್ಷಿಣ ಆಫ್ರಿಕೆಯಲ್ಲಿಯ ಹಿಂದು ಮುಸಲ್ಮಾನರೆಲ್ಲ ಒಂದಾಗಿ ನಾಳೆನಿಂದ ಸತ್ಯಾಗ್ರಹ ಪುನಃ ಪ್ರಾರಂಭಿಸಲಿದ್ದಾರೆ. ಈ ಸತ್ಯಾಗ್ರಹಿಗಳು ಹಿಂದುಸ್ತಾನ ಮತ್ತು ಪಾಕಿಸ್ತಾನ ಎರಡೂ ಸರಕಾರಗಳ ನೆರವು ಕೋರಬೇಕು. ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರಿಗೆ ಉತ್ತೇಜನ ಹಾಗೂ ಸಹಾಯ ಕೊಡುವದು ಎರಡೂ ಸರಕಾರಗಳ ಕರ್ತವ್ಯವಾಗಿದೆ. ಸತ್ಯಾಗ್ರಹವು ಯಶಸ್ವಿಯಾಗಬೇಕಿದ್ದರೆ ಸತ್ಯಾಗ್ರಹ ಹೂಡುವ ಕಾರಣಗಳು ನ್ಯಾಯವಾದವುಗಳೂ, ಅವುಗಳ ನಿವಾರಣೆಗೆ ಹೂಡಿದ ಸತ್ಯಾಗ್ರಹವು ಸಂಪೂರ್ಣವಾಗಿ ಅಹಿಂಸಾತ್ಮಕ ಮಾರ್ಗದಿಂದ ಸಾಗತಕ್ಕದ್ದೂ ಆಗಿರಬೇಕು. ದ.ಆಫ್ರಿಕೆಯ ಹಿಂದೀಯರು ಈ ಎರಡು ಮಾತಿನತ್ತ ದುರ್ಲಕ್ಷ ಮಾಡದಿದ್ದರೆ ಅವರಿಗೆ ವಿಜಯ ಕಟ್ಟಿಟ್ಟದ್ದು.

ಬಿರ್ಲಾ ಭವನ ಹೊಸದಿಲ್ಲಿ ೧೨-೧೦-೪೭

ನಿರಾಶ್ರಿತರಿಗೊಂದು ಮಾತು

"ಇಂದು ನನ್ನ ಕಡೆಗೆ ಎಷ್ಟೋ ಹೊದಿಕೆಗಳು ಬಂದಿವೆ. ಹಾಸಿಗೆಗಳನ್ನು ಕೊಡುವ ಆಶ್ವಾಸನಗಳೂ ಕೆಲವರಿಂದ ದೊರೆತಿವೆ. ನಿರಾಶ್ರಿತರ ಬಗ್ಗೆ ಕೆಲವು ಗಿರಣಿಗಳು ಹಾಸಿಗೆಗಳನ್ನು ತಯಾರಿಸುತ್ತಲಿವೆ. ಇಬ್ಬನಿಯಿಂದ ಕಂಬಳಿಗಳು ತೋಯುವದಿಲ್ಲ. ಆದರೆ ಹಾಸಿಗೆಗಳು ತೋಯುತ್ತವೆ. ಅದುದರಿಂದ ರಾತ್ರಿ ಕಾಲದಲ್ಲಿ ಹಾಸಿಗೆಗಳ ಮೇಲೆ ಬರಿಯ ವೃತ್ತಪತ್ರಿಕೆ ಕಾಗದ ಹಾಸಿದರೆ ಈ ತೊಂದರೆ ಇಲ್ಲದಂತಾಗುವದು. ಹಾಸಿಗೆಗಳನ್ನು ಬಿಚ್ಚಿ ಅದರಲ್ಲಿಯ ಅರಳೆಯನ್ನು ಹಿಂಜಿ ಪುನಃ ತುಂಬಲೂ ಹಾಗೂ ಅದರಲ್ಲಿಯ ಬಟ್ಟೆಯನ್ನು ಒಗೆದು ಸ್ವಚ್ಛ ಮಾಡಿ ಪುನಃ ಹೊಲಿಯಲೂ ಬರುತ್ತದೆ. ಹೊದಿಕೆಗಿಂತ ಹಾಸಿಗೆಯಲ್ಲಿ ಈ ಅನುಕೂಲತೆ ಇರುವದು.

—೧೧ನೇ ಪು

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

(೯ನೇ ಪುಟದಿಂದ)

ಪರಮಾತ್ಮನ ನೆರವು ಕೋರುವವರು ತಮ್ಮ ಮೇಲೆ ಬಂದ ದುರ್ದೈವದ ಪ್ರಸಂಗಗಳನ್ನು ತಮ್ಮ ಅನುಕೂಲ ಪ್ರಸಂಗಗಳಂತೆಯೇ ಉಪಯೋಗಿಸಿಕೊಳ್ಳುವರು. ನಿರಾಶ್ರಿತರಲ್ಲಿ ಕೆಲವರು ತಾವು ಕಷ್ಟ ಅನುಭವಿಸಬೇಕಾಗಿ ಬಂದುದರಿಂದ ಬಹಳ ದುಃಖಿಗಳಾಗಿರುವರು. ಇಷ್ಟೇ ಅಲ್ಲ, ಅವರು ಸಿಟ್ಟಿಗೆದ್ದಿರುವರು. ಸಿಟ್ಟಿನಿಂದ ಏನೂ ಪ್ರಯೋಜನವಾಗದು. ಈ ಮೊದಲು ಈ ಜನರು ಒಳ್ಳೆಯ ಸ್ಥಿತಿವಂತರಾಗಿ ಬಾಳಿದವರು. ಈಗ ಎಲ್ಲವನ್ನೂ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಈ ಜನರ ರಕ್ಷಣೆಯ ಆಶ್ವಾಸನ ದೊರೆತು ಮರ್ಯಾದೆಯಿಂದ ಮರಳಿ ತಮ್ಮ ತಮ್ಮ ಮನೆಗಳಿಗೆ ಹೋಗಿ ನೆಲೆಸುವ ವರೆಗೆ ಇಲ್ಲಿಯೇ ಈ ನಿರಾಶ್ರಿತರ ಶಿಬಿರಗಳಲ್ಲಿ ಅವರು ಕಾಲಹರಣ ಮಾಡಬೇಕಾಗಿದೆ. ಅವರು ಪುನಃ ಮನೆಗೆ ಹೋಗುವದು ದೀರ್ಘಾವಧಿಯ ಯೋಜನೆಯ ಮಾತು. ಅಲ್ಲಿಯ ವರೆಗೆ ಇವರು ಏನು ಮಾಡತಕ್ಕದ್ದು?

ಪಾಕಿಸ್ತಾನದಿಂದ ಬಂದವರಲ್ಲಿ ನೂರಕ್ಕೆ ೭೫ ರಷ್ಟು ಜನರು ; ವ್ಯಾಪಾರಿಗಳಿದ್ದಾರೆಂದು ನನ್ನ ಕೇಳಿಕೆಯಲ್ಲಿದೆ. ಇವರೆಲ್ಲರೂ ಹಿಂದುಸ್ತಾನದಲ್ಲಿ ವ್ಯಾಪಾರ ಪ್ರಾರಂಭಿಸುವ ಆಸೆ ಮಾಡಲಾರರು. ಇವರೆಲ್ಲ ವ್ಯಾಪಾರಕ್ಕೇ ನಿಂತರೆ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ತೊಡಕು ಉಂಟಾಗಬಹುದು. ಈ ಜನರು ತಮ್ಮ ಕೈಗಳಿಂದ ಕೆಲಸ ಮಾಡಲು ಕಲಿಯಬೇಕು. ವೈದ್ಯರು, ಶುಶ್ರೂಷಕರು, ಮೊದಲಾದ ಉದ್ಯೋಗದ ಜನರಿಗೆ ಇಲ್ಲಿ ಕೆಲಸ ಹಚ್ಚಿಕೊಡುವದೇನೂ ಕಠಿಣವಾದ ಮಾತಲ್ಲ. ಪಾಕಿಸ್ತಾನದಿಂದ ಹೊರದೂಡಲ್ಪಟ್ಟವರೆಂದು ಭಾವಿಸಿಕೊಂಡವರು ತಾವು ಹಿಂದುಸ್ತಾನದ ನಾಗರಿಕರೆಂದು ತಿಳಿಯಬೇಕು. ಅವರು ಗಡಿನಾಡು, ಪಂಜಾಬ, ಸಿಂಧ ಪ್ರಾಂತದ ನಾಗರಿಕರೆಂಬ ಭಾವನೆ ಬಿಟ್ಟು ಇಡೀ ಹಿಂದುಸ್ತಾನದಲ್ಲಿ ಎಲ್ಲಿ ಬೇಕಾದಲ್ಲಿ ಹೋದರೂ ಹಾಲಿನಲ್ಲಿ ಸಕ್ಕರೆ ಬೆರೆತಂತೆ ಆಯಾ ಪ್ರಾಂತದ ಜನತೆಯಲ್ಲಿ ಸಮರಸವಾಗಲು ಕಲಿಯಬೇಕು. ಇವರು ತಮ್ಮ ಕೆಲಸದಲ್ಲಿ ತತ್ಪರರೂ ವ್ಯವಹಾರದಲ್ಲಿ ಪ್ರಾಮಾಣಿಕರೂ ಆಗಿರಬೇಕು. ಈ ಜನರು ತಾವು ಹಿಂದುಸ್ತಾನದ ಸೇವೆಮಾಡಿ ಅದರ ಉನ್ನತಿ ಸಾಧಿಸಲು ಹುಟ್ಟಿದವರೆಂಬ ಭಾವನೆ ಇಟ್ಟುಕೊಳ್ಳಬೇಕು. ಹಿಂದುಸ್ತಾನದ ಗೌರವಕ್ಕೆ ಧಕ್ಕೆ ತಟ್ಟುವ ಯಾವ ಕೃತ್ಯವನ್ನೂ ಮಾಡಕೂಡದು. ತಮ್ಮ ತಮ್ಮಲ್ಲಿ ಹೊಡೆದಾಟ, ಕುಡಿಯೋಣ, ಜೂಜಾಟ, ಮೊದಲಾದ ಕೃತ್ಯಗಳಲ್ಲಿ ತೊಡಗಿ ವೇಳೆಯ ಅಪವ್ಯಯ ಒಂದು ನಿಮಿಷ ಸಹ ಮಾಡಲು ಒಪ್ಪಕೂಡದು. ತಪ್ಪು ಮಾಡುವದು ಮನುಷ್ಯನ ಸ್ವಭಾವವಾದರೂ ಮುಂದೆ ಅಂಥ ತಪ್ಪುಗಳ ಪುನರಾವೃತ್ತಿಯಾಗದಂತೆ ನೋಡಿಕೊಳ್ಳುವದೂ ಮನುಷ್ಯನ ಕರ್ತವ್ಯವಾಗಿದೆ. ನಿರಾಶ್ರಿತರು ನನ್ನ ಉಪದೇಶದಂತೆ ನಡೆದರೆ ಅವರು ಎಲ್ಲಿಗೇ ಹೋದರೂ ಅವರು ರಾಷ್ಟ್ರದ ಸಂಪದಭಿವೃದ್ಧಿಗೆ ಕಾರಣರಾಗಬಲ್ಲರು. ಹೀಗಾದರೆ ಬೇಕಾದ ಪ್ರಾಂತದಲ್ಲಿಯೇ ಹೋಗಲಿ ಜನರು ಇವರನ್ನು ಸ್ವಾಗತಿಸಲು ಆನಂದದಿಂದ ಮುಂದೆಬರುವರು.

ಒಂದರ ಬದಲು ಇನ್ನೊಂದು ಮಾದಕ ಪೇಯ

ಮಾದಕ ಪೇಯಗಳ ನಿರ್ಮೂಲನಕ್ಕಾಗಿ ಮದ್ರಾಸ ಪ್ರಾಂತವು ನಡೆಸಿದ ಪ್ರಯತ್ನಗಳು ಪ್ರಶಂಸನೀಯವಾಗಿವೆ. ಇದೆಲ್ಲ ಒಳ್ಳೆಯದಕ್ಕೆ. ಆದರೆ ಮದ್ರಾಸ ಸರಕಾರದವರು ತಮ್ಮ ಉತ್ಸಾಹದಲ್ಲಿ ಒಂದು ಮಾದಕ ಪೇಯದ ಬದಲು ಇನ್ನೊಂದನ್ನು ಪ್ರಚಾರಕ್ಕೆ ತರುತ್ತಿದ್ದಾರೆ. ಅದು ಕಡಿಮೆ ಅಪಾಯಕಾರಕವಿದ್ದರೂ ಮಾದಕ ಪೇಯವೇ ಹೌದು. ಈ ಬಗ್ಗೆ ಸರಕಾರವು ಸುಮಾರು ಎರಡು ಲಕ್ಷ ರೂ. ಗಳನ್ನು ವೆಚ್ಚ ಮಾಡಲಿದೆ.

ದಕ್ಷಿಣ ಭಾರತದವರಿಗೆ ಪರಿಚಿತವಾಗಿರುವ ಆರೋಗ್ಯದಾಯಕವಾದ ಪಾನಕ, ನೀರುಮಜ್ಜಿಗೆಗಳಂಥ ಪೇಯಗಳನ್ನು ಸರಕಾರವು ಬಳಕೆಗೆ ತರಲಾರದೆ? ಈ ಪೇಯಗಳು ಶರೀರ ಪೋಷಕವಾಗಿವೆ. ಮಜ್ಜಿಗೆಯಿಂದ ನೀರುಮಜ್ಜಿಗೆಯನ್ನೂ ಬೆಲ್ಲದಿಂದ ಪಾನಕವನ್ನೂ ತಯಾರಿಸುತ್ತಾರೆ.

ಮದ್ಯಪ್ರತಿಬಂಧದಿಂದ ಉಂಟಾದ ತೆರವನ್ನು ತುಂಬಲು ಜಡದ ಉದ್ಯೋಗದಲ್ಲಿ ಸ್ವಾರ್ಥವಿದ್ದವರು ಸದ್ಯಕ್ಕೆ ನಡೆದಿರುವ ಪ್ರಚಾರವನ್ನು ಪ್ರಾರಂಭಿಸಿರಬಹುದೆ?

—ಜೆ. ಸಿ. ಕು.

ಪ್ರ್ಸ್ಕ ೪ ಬಂದ ಪೋ

ಪಂಜಾಬಿಗಳಿಗೆ ಸುಸಂಧಿ

ಹಿಂದು—ಶೀಖರಿಗೆ ಒದಗಿದ ಅಪಾರ ಕಷ್ಟ ಪರಂಪರೆಗಳ ಮೂಲಕವೂ, ಅದರ ಬೆದರಿಕೆಯ ಮೂಲಕವೂ, ಪಶ್ಚಿಮ ಪಾಕಿಸ್ತಾನದಲ್ಲಿಯ ಸಾವಿರಾರು ಹಿಂದು—ಶೀಖರು ತಮ್ಮ ಮನೆಮಾರುಗಳನ್ನು ಬಿಟ್ಟು ಓಡಿ ಬಂದಿದ್ದಾರೆ, ಅವರ ಕಣ್ಣುಗಳಲ್ಲಿ ಸಿಟ್ಟಿನ ಕಿಡಿಯಿದೆ, ನಾಲಿಗೆಯ ಮೇಲೆ ದ್ವೇಷದ ಭಾಷೆ ಕುಣಿಯುತ್ತಿದೆ. ಅವರ ಮನಸ್ಸಿನಲ್ಲಿ ದೇವರ ಅಸ್ತಿತ್ವದ ಬಗ್ಗೆ ಸಂದೇಹ ತುಂಬಿದೆ. ಈ ಉದ್ರೇಕ ಸ್ವಾಭಾವಿಕವಾದುದು. ಆದರೆ ಇದರಿಂದ ಯಾರಿಗೂ ಕ್ಷೇಮವಾಗಿ ಸಮಾಜಕ್ಕೆ ಬಹಳ ಹಾನಿಯಾಗಿದೆ.

ಅವರು ತಮ್ಮ ಸಿಟ್ಟನ್ನು ತಡೆಯಬಲ್ಲರಾದರೆ ದೇಶಕ್ಕೆ ಸೇವೆಯನ್ನೂ ಸಲ್ಲಿಸಬಲ್ಲರು. ತಮ್ಮ ಉದ್ಧಾರವನ್ನೂ ಸಾಧಿಸಬಲ್ಲರು.

ಈ ಜನರು ಸಾಮಾನ್ಯವಾಗಿ ಬರಿ ಉರ್ದುವನ್ನು ಬಲ್ಲವರಾಗಿದ್ದಾರೆ. ಅವರು ಗುಜರಾತ, ಮುಂಬಯಿ, ಬಿಹಾರ, ಮಹಾರಾಷ್ಟ್ರ, ಮಧ್ಯಪ್ರಾಂತ, ಸಂಯುಕ್ತಪ್ರಾಂತ ಇವುಗಳಲ್ಲಿ ಯಾವ ಪ್ರದೇಶಕ್ಕೆ ಹೋದರೂ ಅಲ್ಲಿ ದೇವನಾಗರಿ ಲಿಪಿಯು ಬಳಕೆಯಲ್ಲಿದೆ. ಅವರಿಗೆ ಆ ಲಿಪಿಯನ್ನು ಕಲಿಯಬೇಕಾಗಬಹುದು.

ರಾಷ್ಟ್ರೀಯತೆಯು ಉಕ್ಕಿ ಬರುತ್ತಿರುವ ಈಗಿನ ಕಾಲದಲ್ಲಿ ಬೇರೆ ಬೇರೆ ಪ್ರಾಂತಗಳ ಜನರು ಒತ್ತಟ್ಟಿಗೆ ಬರುವದು ಸ್ವಾಭಾವಿಕ. ಇಂಗ್ಲೀಷನ್ನು ಸಹಜವಾಗಿಯೆ ಹೊರದೂಡಿದ ನಂತರ ಹಿಂದುಸ್ತಾನಿಯ ಪ್ರಚಾರವು ಅವಶ್ಯವಾಗಿ ಆಗಬೇಕು. ಅದ್ದರಿಂದ ಪಶ್ಚಿಮ ಪಾಕಿಸ್ತಾನದಿಂದ ಹೊರಬಿದ್ದ ಈ ನಿರಾಶ್ರಿತರು ತಾವು ಹೋಗಿ ನೆಲೆಸುವ ಪ್ರಾಂತಗಳ ಜನರಿಗೆ ಉರ್ದುವನ್ನು ಉತ್ಸಾಹದಿಂದ ಕಲಿಸಿದರೆ ಪರಸ್ಪರ ಸೌಹಾರ್ದವನ್ನು ಹೆಚ್ಚಿಸಿಕೊಂಡಂತಾಗುವದು. ಇದರಿಂದ ಕೆಲವರಿಗೆ ಆದಾಯವೂ ಬರಬಹುದು.

ಹಿಂದುಸ್ತಾನಿಯ ಶುದ್ಧ ಉಚ್ಚಾರವನ್ನು ಅರಿತುಕೊಳ್ಳುವದು ಅವಶ್ಯವಿದ್ದಷ್ಟೇ ಈ ಎರಡೂ ಲಿಪಿಗಳನ್ನು ಅರಿತುಕೊಳ್ಳುವದೂ ಅವಶ್ಯವಿದೆ. ದಕ್ಷಿಣ ಭಾರತದವರಿಗೆ ಹಿಂದುಸ್ತಾನಿ ಉಚ್ಚಾರ ಸರಿಯಾಗಿ ಬರುತ್ತಿರುವದಿಲ್ಲ. ಉತ್ತಮ ರೀತಿಯಿಂದ ಮಾತಾಡುವವರ ಭಾಷೆಯನ್ನು ಕೇಳಿಕೇಳಿ ತಮ್ಮ ಉಚ್ಚಾರವನ್ನು ಬಹು ಬೇಗನೆ ಸುಧಾರಿಸಿಕೊಳ್ಳಬಹುದು. ಈ ವಿಷಯದಲ್ಲಿಯೂ ನಿರಾಶ್ರಿತರು ಮಹತ್ವದ ಭಾಗವನ್ನು ನಿರ್ವಹಿಸಬಲ್ಲರು.

(ಮೂಲ ಹಿಂದುಸ್ತಾನಿಯಿಂದ)

ಹೊಸದಿಲ್ಲಿ
೧೩-೧೦-೪೭ ಕಾಕಾ ಕಾಲೇಲಕರ

ಗ್ರಾಮ ಉದ್ಯೋಗಗಳಾವವು?

ಗ್ರಾಮೋದ್ಯೋಗ ಇಲ್ಲವೆ ಗೃಹೋದ್ಯೋಗಗಳಲ್ಲಿ ಎಂಥ ಎಂಥ ಉದ್ಯೋಗಗಳು ಸಮಾವಿಷ್ಟವಾಗುವವೆಂದು ಸರ್ವಸಾಮಾನ್ಯವಾಗಿ ಜನರಿಗೆ ಗೊತ್ತಿದ್ದರೂ ಸರಕಾರದವರು ತಮ್ಮ ಆದೇಶಗಳಲ್ಲಿ ಈ ಶಬ್ದಗಳನ್ನು ಬಳಸುತ್ತಿರುವದರಿಂದ ಇಂಥ ಉದ್ಯೋಗಗಳ ವಿಶಿಷ್ಟ ಸ್ವರೂಪದ ಬಗ್ಗೆ ಸ್ಪಷ್ಟ ಕಲ್ಪನೆಯಿರುವದು ಒಳ್ಳೇದು. ಇದೇ ಉದ್ದೇಶವನ್ನಿಟ್ಟುಕೊಂಡು ಕೆಳಗಿನ ಟಿಪ್ಪಣಿಯನ್ನು ಬರೆಯಲಾಗಿದೆ—

ಕೆಳಗಿನ ಎಲ್ಲ ಇಲ್ಲವೆ ಬಹುತರ ಎಲ್ಲ ನಿಯಮಗಳಿಗೆ ಅನುಗುಣವಾಗಿರುವ ಉದ್ಯೋಗಗಳಿಗೆ ಗ್ರಾಮೋದ್ಯೋಗಗಳೆನ್ನಬಹುದು.

ಅ. ಗ್ರಾಮೋದ್ಯೋಗಗಳು

೧) ಹಳ್ಳಿಗಳಿಗೆ ಅತ್ಯವಶ್ಯವಾಗಿ ಬೇಕಾಗುವ ಸಾಮಾನುಗಳನ್ನು ಹಳ್ಳಿಗಳಲ್ಲಿಯೇ ತಯಾರಿಸುವ ಉದ್ಯೋಗಗಳು.

೨) ಹಳ್ಳಿಗರಿಗೆ ಸುಲಭ ಸಾಧ್ಯವಾದ ತಯಾರಿಕೆ ಪದ್ಧತಿಯನ್ನೆ ಉಪಯೋಗಿಸುವ ಉದ್ಯೋಗಗಳು.

೩) ಉದ್ಯೋಗದಲ್ಲಿ ತೊಡಗಿದ ಹಳ್ಳಿಗರ ಆರ್ಥಿಕ ಶಕ್ತಿಯಿಂದ ದೊರೆಯಬಹುದಾದಂಥ ಧನ ಸೌಕರ್ಯಗಳನ್ನು ಬಳಸುವ ಉದ್ಯೋಗಗಳು.

೪) ಸ್ಥಾನಿಕ ಕಚ್ಚಾ ಪದಾರ್ಥಗಳನ್ನೆ ಉಪಯೋಗಿಸುವ ಉದ್ಯೋಗಗಳು.

೫) ಮನುಷ್ಯ ಇಲ್ಲವೆ ಪ್ರಾಣಿಗಳ ಶಕ್ತಿಯ ಮೇಲೆ ನಡೆಯುತ್ತಿದ್ದವುಗಳು.

೬) ಸಮೀಪದ ಇಲ್ಲವೆ ಸ್ಥಾನಿಕ ಪೇಟೆಗಳ ಬೇಡಿಕೆಯನ್ನಷ್ಟೇ ಪೂರೈಸುವಂಥವು.

೭) ಕೂಲಿಕಾರರ ಸ್ಥಿತ್ಯಂತರ ಇಲ್ಲವೆ ನಿರುದ್ಯೋಗಕ್ಕೆ ಕಾರಣವಾಗದಂಥವು.

ಮೇಲಿನ ಕೆಲವು ಉದ್ಯೋಗಗಳಿಗೆ ಅನೇಕ ಕೂಲಿಕಾರರ ನೆರವು ಬೇಕಾಗಬಹುದು. ಕೂಲಿಕಾರರಿಗೆ ದಿನಗೂಲಿ ಕೊಡಬಹುದು ಅಥವಾ ಬಂದ ಲಾಭದಲ್ಲಿ ಪಾಲು ಕೊಡಬಹುದು. ಇಂಥ ಬೇರೆ ಬೇರೆ ಉದ್ಯೋಗಗಳಲ್ಲಿ ಕೂಲಿಕಾರರ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇರಬಹುದು.

ಉದಾಹರಣೆ—ಎಣ್ಣೆ ತೆಗೆಯುವ ನೇಯುವ, ಚರ್ಮ ಹದಗೊಳಿಸುವ ಬಡಿಗತನದ, ಕಮ್ಮಾರಿಕೆಯ ಉದ್ಯೋಗಗಳು.

ಗೃಹೋದ್ಯೋಗಗಳು

ಎಷ್ಟೋ ಪೂರ್ಣಾವಧಿ ಉದ್ಯೋಗಗಳಿಗೆ ಕಾರಖಾನೆಗಳಿಗೆ ಬೇಕಾಗುವಂಥ ಕಟ್ಟಡ ಅದರಲ್ಲೂ ಯಂತ್ರೋಪಕರಣಗಳನ್ನಿರಿಸಲು ವಿವಿಧ ಇಲ್ಲವೆ ವಿಶೇಷ ವ್ಯವಸ್ಥೆ ಬೇಕಾಗುವದಿಲ್ಲ. ಇಂಥವುಗಳನ್ನು ಉದ್ಯೋಗಸ್ಥರು ತಮ್ಮ ಗೃಹದಲ್ಲಿಯೇ ಇಲ್ಲವೆ ಗುಡಿಸಲಿನಲ್ಲಿಯೇ ಪ್ರಾರಂಭಿಸಬಹುದು. ಉದಾಹರಣೆ— ಪತ್ತಾರ ಕೆಲಸ, ಹೊಲಿಗೆಯ ಕೆಲಸ, ಕೆರವುಗಳನ್ನು ಮಾಡುವದು ಇತ್ಯಾದಿ.

ಕುಟುಂಬ ಉದ್ಯೋಗಗಳು

ಇವುಗಳಲ್ಲಿ ಮುಖ್ಯವಾಗಿ ಮನೆಯ ಕುಟುಂಬದವರೆ ತಮ್ಮ ಬಿಡುವಿನಲ್ಲಿ ಸಾಗಿಸುವಂಥ ಉದ್ಯೋಗಗಳು ಸೇರುವವು. ಉದಾ: ನೂಲುವದು; ಹಣ್ಣುಗಳನ್ನು ಕಾಯ್ದಿರಿಸುವದು, ಜೇನು ಸಾಕುವದು, ಹೊಲಿಗೆಯ ಕೆಲಸ, ಜರದ ಕೆಲಸ.

ಮೇಲೆ ಹೇಳಲ್ಪಟ್ಟ ವರ್ಗಗಳಲ್ಲಿಯ ಯಾವದೆ ಉದ್ಯೋಗಕ್ಕೆ ಅಥವಾ ವರ್ಗಗಳಿಗೆ ಆಯಾ ವರ್ಗದವರು ಧನ ಸಹಾಯ ಸಲ್ಲಿಸಬಹುದು, ಇಲ್ಲವೆ ಆ ಉದ್ಯೋಗದಲ್ಲಿ ತೊಡಗಿದವರು ಸಹಕಾರದಿಂದ ಧನ ಕೂಡಿಸಿಕೊಳ್ಳಬಹುದು.

—ಜೆ. ಸಿ. ಕುಮಾರಪ್ಪ

ಸಂದರ್ಭ ಕಳೆದುಹೋಯಿತು

ಬ್ರಿಟಿಶರ ಮುಖ್ಯ ಆಹಾರ ಮಾಂಸವು. ಯುದ್ಧವು ಪರಂಪರಾ ಪದ್ಧತಿಗಳನ್ನು ಬುಡಮೇಲು ಮಾಡಿತು. ಭೋಜನ ಪದ್ಧತಿಯು ಒಳ್ಳೆಯ ನಿಷ್ಠವಾದದ್ದು. ಅದರೂ ಪರಿಸ್ಥಿತಿಯಲ್ಲುಂಟಾದ ಬದಲಾವಣೆಯು ಬ್ರಿಟಿಶರಿಗೆ ತಮ್ಮ ಆಹಾರ ಪದ್ಧತಿಯಲ್ಲಿ ಬಹಳ ಬದಲಾವಣೆಗಳನ್ನು ಮಾಡ ಹಚ್ಚಿದೆ. ಸ್ವಾಭಾವಿಕವಾಗಿಯೇ ಮಾಂಸ ಆಹಾರದಲ್ಲಿ ಧಾನ್ಯಗಳಿಗೆ ದ್ವಿತೀಯ ಸ್ಥಾನವಿದೆ. ಅದರೂ ಅಲ್ಲಿಯ ಆಹಾರ ಮಂತ್ರಿಗಳು ರಾಷ್ಟ್ರದ ಅವಶ್ಯಕತೆಗಳಿಗೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಒಂದಾನೊಂದು ಕಾಲಕ್ಕೆ ಸಿಗುತಿದ್ದ ಬೆಡಗಿನ ಬಿಳಿ ರೊಟ್ಟಿಯು ಇಂದು ಸಿಗುತ್ತಿಲ್ಲ. ರಾಷ್ಟ್ರದಲ್ಲಿ ಆಹಾರದ ಕೊರತೆಯುಂಟಾದಾಗ ಖಾದ್ಯದಲ್ಲಿಯ ಚೈತನ್ಯಯುಕ್ತ ಭಾಗವನ್ನು ಎಸೆಯುವದರ ಮೂರ್ಖತನವನ್ನು ಅವರು ಕಂಡುಕೊಂಡಿದ್ದಾರೆ. ಕಂದು ಬಣ್ಣದ ರೊಟ್ಟಿಯೇ ಇಂದಿನ ದಿನದ ಆಹಾರ.

ನಮ್ಮ ದೇಶವು ಇದಕ್ಕೆ ವಿಪರೀತ ಉದಾಹರಣೆಯಾಗಿದೆ. ನಮ್ಮದು ಶಾಕಾಹಾರವಿದ್ದು ಅದರಲ್ಲಿ ಧಾನ್ಯಗಳಿಗೆ ಪ್ರಥಮ ಸ್ಥಾನವಿದೆ. ನಮ್ಮ ದೇಶದ ಜನತೆಯು ಅಕ್ಕಿ ಗೋದಿ ಮುಂತಾದ ಧಾನ್ಯಗಳ ಮೇಲೆಯೇ ಅವಲಂಬಿಸಿರುತ್ತದೆ. ನಮ್ಮಲ್ಲಿಯ ಎಲ್ಲ ಸೀದಾ ಅಂಗಡಿಗಳಲ್ಲಿ ಪಾಲಿಶ್ ಅದ ಅಕ್ಕಿಗಳನ್ನೇ ಕೊಡುವಷ್ಟು ನಮ್ಮ ಆಹಾರ ಮಂತ್ರಿಗಳು ಅಸ್ಥಿರರಿದ್ದಾರೆ. ಅಕ್ಕಿಯ ಗಿರಣಿಗಳನ್ನು ನಿರ್ಬಂಧಿಸಿ ಜನತೆಯ ಆಹಾರದಲ್ಲಿಯ ಚೈತನ್ಯಯುಕ್ತ ಭಾಗವನ್ನು ಹೆಚ್ಚಿಸುವ ಸುವರ್ಣ ಸಂಧಿಯನ್ನು ನಾವು ಕಳೆದುಕೊಳ್ಳಲಿಲ್ಲವೇ? ಈಗಲಾದರೂ ಕೃತಿಗಿಳಿಸಲು ಅಷ್ಟೊಂದು ತಡವಾಗಿದೆಯೇ?

ಜೆ. ಸಿ. ಕುಮಾರಪ್ಪ.

ದಾರಿ ತಪ್ಪಿದ ಉತ್ಸಾಹ

ಮದ್ರಾಸಪ್ರಾಂತದಲ್ಲಿ ಕುದುರೆಜೂಜಾಟವನ್ನು ತಪ್ಪಿಸಲು ಪ್ರಯತ್ನಿಸಿದಶ್ರೇಯಸ್ಸಿನಬಹುಭಾಗವು ಜನಾಬ ಅಬ್ದುಲ್ ಲತೀಫಫರೂಕಿಯವರಿಗೆ ಸಲ್ಲತಕ್ಕದ್ದು. ಈ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡಿಸುವದನ್ನು ವಿರೋಧಿಸಿ ಅವರ ಕಾರ್ಯದಲ್ಲಿ ಡಾ. ಸುಬ್ಬರಾಯನರು ವಿಘ್ನವನ್ನು ಉಂಟುಮಾಡಿದರು.

ಕುದುರೆಯ ಪೀಳಿಗೆಯ ಜೋಪಾನಕ್ಕೂ ಕುದುರೆಯ ಜೂಜಾಟಕ್ಕೂ ನಿಕಟ ಸಂಬಂಧವಿದೆಯೆಂದು ಭಾವಿಸಿ ಡಾ. ಸುಬ್ಬರಾಯನರು ಕುದುರೆಯ ಶರ್ಯತ್ತು ನಡೆಯುತ್ತಿದೆ, ಕಲಕತ್ತದ ರೇಸ ಕ್ಲಬ್ಬಿಗೆ ಒಂದು ಬೆಳ್ಳಿ ಬಟ್ಟಲ ಕೊಂಡುಕೊಳ್ಳಲು ರಾಜಾಜಿಯವರು ಧನಸಹಾಯ ನೀಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿದ್ದು ಲಾಂಛನಾಸ್ಪದ.

ಈ ಮಂತ್ರಿಗಳು ತಮ್ಮ ಆದಾಯದ ದೃಷ್ಟಿಯಿಂದ ಈ ಕುದುರೆ ಜೂಜಿಗೆ ಇಷ್ಟೊಂದು ಮಹತ್ವ ಕೊಟ್ಟಿದ್ದರೂ ಸದ್ಯಕ್ಕೆ ದನಗಳ ಪೀಳಿಗೆಯನ್ನು ಕಾಪಾಡಿಕೊಳ್ಳುವುದು ನಮ್ಮ ಆರ್ಥಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ನಮ್ಮ ಹಾಲಿನ ಕೊರತೆ, ದನಗಳ ಅಭಾವವನ್ನು ಹಿಂಗಿಸಲು ನಮ್ಮ ಸರಕಾರುಗಳು ಯಾವ ಪ್ರಯತ್ನ ಮಾಡಿವೆ? ಜನರ ನಿಜವಾದ ಅವಶ್ಯಕತೆಗಳನ್ನು ಇವರು ಕಣ್ತೆರೆದು ಕಂಡುಕೊಳ್ಳುವದಾದರೂ ಎಂದು?

ಹಿಂದುಗಳ ತಪ್ಪನ್ನು ಮರೆಯಿರಿ

ಮಹಾತ್ಮಾ ಗಾಂಧಿಯವರು ತಾ. ೧೪ ರ ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಅಂದಿನ ದಿನ ತಮಗೆ ಇನ್ನೂ ಹೆಚ್ಚು ಕಂಬಳಿಗಳು ಬಂದಿವೆಯೆಂದು ಸಾರಿದರು.

ಆರ್ಯ ಸಮಾಜ ಕನ್ಯಾ ಶಾಲೆಯ ಇಬ್ಬರು ಬಾಲಿಕೆಯರು ಹಾಗೂ ಶಿಕ್ಷಿಕೆಯರು ಕಂಬಳಿಗಳೊಡನೆ ಹಣವನ್ನೂ ತಂದು ಕೊಟ್ಟದ್ದಲ್ಲದೆ ಆಹಾರ ಕೊರತೆಯನ್ನೆದುರಿಸುವ ಬಗ್ಗೆ ಎಲ್ಲರೂ ೧೫ ದಿನಕ್ಕೊಮ್ಮೆ ಉಪವಾಸ ಮಾಡಬೇಕೆಂಬ ನನ್ನ ಸೂಚನೆಯನ್ನೋದಿ ಆ ಶಾಲೆಯ ಶಿಕ್ಷಿಕೆಯರು ಹಾಗೂ ಬಾಲಿಕೆಯರು ಪ್ರತಿ ಗುರುವಾರ ಉಪವಾಸ ಮಾಡಲು ನಿರ್ಧರಿಸಿರುವದಾಗಿ ತಿಳಿಸಿದರು. ಇದನ್ನು ಕೇಳಿ ನನಗೆ ಸಂತೋಷವಾಯಿತು. ತಮ್ಮ ಕೈದೋಟದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಕೂಡ ಅವರು ನಿರ್ಣಯಿಸಿರುವರಂತೆ. ಈ ಉಪಕ್ರಮವನ್ನು ಎಲ್ಲರೂ ಅನುಸರಿಸಿದರೆ ಆಹಾರ ಕೊರತೆಯು ಬೇಗನೆ ನೀಗುವದರಲ್ಲಿ ಸಂಶಯವಿಲ್ಲ.

ಇರಾಣದ ರಾಯಭಾರಿ ಹಾಗೂ ಅವನ ಹೆಂಡತಿಯು ಬಂದು ಅನೇಕ ಕಂಬಳಿಗಳನ್ನು ನನಗೆ ಕೊಟ್ಟರು. ಅವನ್ನು ನಾನು ಆದರದಿಂದ ಸ್ವೀಕರಿಸಿದೆ.

ಅನೇಕ ಸೀಖ ಸ್ನೇಹಿತರು ನನ್ನನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದರು. ನಮ್ಮನಮ್ಮೊಳಗೆ ಬಡಿದಾಡಿದರೆ ಉಪಯೋಗವಿಲ್ಲೆಂದೂ ಪರಸ್ಪರ ಸರಕಾರಗಳೇ ಕ್ರಮ ತೆಗೆದುಕೊಳ್ಳತಕ್ಕದ್ದೆಂದೂ ಅವರು ಅಭಿಪ್ರಾಯಪಟ್ಟರು.

ಸರಕಾರದವರಿಂದ ಬಂಧಿಸಲ್ಪಟ್ಟವರಲ್ಲಿ ಕೆಲವರ ಬಿಡುಗಡೆಯ ಬಗ್ಗೆ ಚಳವಳಿ ನಡೆದಿದೆ. ಇದು ಶುದ್ಧ ತಪ್ಪು. ನಿರ್ದೋಷಿಗಳನ್ನು ಸರಕಾರವು ಎಂದಿಗೂ ಬಂಧಿಸುವದಿಲ್ಲ. ಆದರೆ ಒಮ್ಮೊಮ್ಮೆ ಸರಕಾರವೂ ತಪ್ಪು ಮಾಡುವದುಂಟು. ಆಗ ಆ ತಪ್ಪನ್ನು ಸರಕಾರದ ಗಮನಕ್ಕೆ ತರುವದೊಂದೇ ಪ್ರಜೆಗಳ ಕರ್ತವ್ಯ. ಅವರ ವಿರುದ್ಧ ಚಳವಳಿ ಹೂಡಬಾರದು.

ನಿಜವಾದ ಶಾಂತಿ ಹೇಗೆ ನೆಲೆಸೀತು? ದಿಲ್ಲಿಯಲ್ಲಿ ಶಾಂತತೆಯುಂಟಾದಂತೆ ಅನಿಸಬಹುದು. ನನಗೇನೂ ಅದರಿಂದ ಸಮಾಧಾನವಿಲ್ಲ. ಹಿಂದು ಮುಸ್ಲಿಮರೀಗ ಒಬ್ಬರಿಂದೊಬ್ಬರು ದೂರವಾಗಿದ್ದಾರೆ. ಇಲ್ಲಿಯ ವರೆಗೆ ಇಬ್ಬರೂ ಬಡಿದಾಡುತ್ತಿದ್ದರು. ಒಂದೆರಡು ದಿನಗಳ ನಂತರ ಅದನ್ನೆಲ್ಲ ಮರೆತು ಬಿಟ್ಟರು. ಆದರೆ ಇಂದು ಒಬ್ಬನು ಮತ್ತೊಬ್ಬನನ್ನು ತನ್ನ ಹಳೆಯ ವೈರಿಯೆಂದು ಕಾಣುತ್ತಿದ್ದಾನೆ. ಇದು ದುರ್ಬಲತೆಯ ಲಕ್ಷಣ; ಇದು ಹೋಗಬೇಕು. ಅಂದರೇನೇ ನಮ್ಮ ರಾಷ್ಟ್ರವು ಪ್ರಬಲವಾಗಬಲ್ಲದು.

ಪ್ರತಿಯೊಬ್ಬನೂ ಮತ್ತೊಬ್ಬನ ತಪ್ಪುಗಳನ್ನು ಮರೆತು ತನ್ನ ತಪ್ಪನ್ನೇ ದೊಡ್ಡದಾಗಿ ಮಾಡಿಕೊಂಡರೆ ಇಬ್ಬರೂ ಪುನಃ ಒಂದೆಡೆ ಸೇರಬಹುದು. ಇದರಂತೆ ಮುಖ್ಯವಾಗಿ ಮುಸಲ್ಮಾನರು ನಡೆಯಬೇಕು. ಹಿಂದು-ಸೀಖರು ನನ್ನ ಮಾತಿನಂತೆ ನಡೆಯಲು ಸಿದ್ಧರಿದ್ದಾರೆ. ನಿನ್ನೆಯದಕ್ಕೆ ಮುಯ್ಯಿ ತೆಗೆದುಕೊಳ್ಳುವಲ್ಲಿ ಅರ್ಥವಿಲ್ಲ. ನನ್ನ ಮಾತಿನಂತೆ ಎಲ್ಲರೂ ನಡೆದರೆ ಪಾಕಿಸ್ತಾನಕ್ಕೆ ಹೋಗಲು ನನಗೆ ಅನುಕೂಲವಾಗುವದು.

ಮೈಸೂರಿಗೆ ಮಹಾತ್ಮರ ಧನ್ಯವಾದ

ಮಹಾತ್ಮಾಗಾಂಧಿಯವರು ತಾ. ೧೫ ರಲ್ಲಿ ಪ್ರಾರ್ಥನಾನಂತರ ಭಾಷಣ ಮಾಡುತ್ತ ಹೀಗೆ ಹೇಳಿದರು:—

ಮೈಸೂರ ಸತ್ಯಾಗ್ರಹವು ಸಮಾಧಾನಕರವಾಗಿ ಕೊನೆಗಂಡ ಬಗ್ಗೆ ನನಗೆ ಆನಂದವಾಗಿದೆ. ಸತ್ಯಾಗ್ರಹವು ಅಹಿಂಸಾತ್ಮಕವಾಗಿ ನಡೆಯುವುದೆಂದೂ ಆ ಬಗ್ಗೆ ವಿವಂಚನೆಗೆ ಕಾರಣವಿಲ್ಲೆಂದೂ ನನಗೆ ತಂತಿಯಿಂದ ತಿಳಿಸಿದ್ದರು. ಸಂಸ್ಥಾನದ ಮುಖ್ಯ ಮಂತ್ರಿಗಳಾದ ರಾಮಸ್ವಾಮಿ ಮುದಲಿಯಾರರು ಕಾಂಗ್ರೆಸಿನೊಡನೆ ಯೋಗ್ಯ ಒಪ್ಪಂದ ಮಾಡಿಕೊಂಡಿದ್ದಾರೆ. ಮಹಾರಾಜರು, ದಿವಾಣರು, ಮೈಸೂರ, ಕಾಂಗ್ರೆಸ ಈ ಸನ್ಮಾನ್ಯ ಒಪ್ಪಂದ ಸಾಧಿಸಿದ್ದಕ್ಕೆ ಧನ್ಯವಾದಗಳಿಗೆ ಅರ್ಹರು. ಉಳಿದ ಸಂಸ್ಥಾನದ ಅಧಿಪತಿಗಳೂ ಮೈಸೂರಿನ ಅನುಕರಣ ಮಾಡಿ ಹೊಣೆಗಾರ ಸರಕಾರ ಸ್ಥಾಪಿಸಬೇಕು. ಇಂಗ್ಲಂಡದ ಅರಸನಂತೆ ಸಂಸ್ಥಾನಿಕರೂ ಘಟನಾತ್ಮಕ ರಾಜರಾದರೆ ರಾಜಪ್ರಜೆಗಳ ಸಂಬಂಧವು ಹಿತಕರವಾಗಿ ಇಬ್ಬರಿಗೂ ಆನಂದ ಹಾಗೂ ಸಮಾಧಾನವೆನಿಸುವದು.

ಕುದುರೆಜೂಜಿನ ಬಯಲುಗಳನ್ನೆಲ್ಲ ರೆಂಟೆ ಹೊಡೆದು 'ಹೆಚ್ಚು ಧಾನ್ಯ ಬೆಳೆಯುವದಕ್ಕಾಗಿ ಉಪಯೋಗಿಸಿದ ದಿನವೇ ಸುದಿನವಾದೀತು.

—ಜೆ. ಸಿ. ಕುಮಾರಪ್ಪ

ಬೆಳಗಾವಿ

ನಾರ್ಥ ಕೋಟ ಕ್ರಿಕೆಟ ಶೀಲ್ಡ ಪಂದ್ಯಾಟದಲ್ಲಿ ಬೆಳಗಾವಿಯ ಲಿಂಗರಾಜ ಕಾಲೇಜಿನವರು ಧಾರವಾಡದ ಕರ್ನಾಟಕ ಕಾಲೇಜದವರನ್ನೂ ಕೊಲ್ಹಾಪುರ ರಾಜಾರಾಮ ಕಾಲೇಜದವರನ್ನೂ ಸೋಲಿಸಿ ಉಪಾಂತ್ಯ ಆಟಕ್ಕೆ ಸಿದ್ಧರಾಗಿರುವರು. ಕೊನೆಯ ಪಂದ್ಯಾಟ ಪುಣೆಯವರೊಡನೆ ನಡೆಯಲಿದೆ.

೫ ನೇ ತಾರೀಖಿನ ದಿವಸ ಭಾಷಾವಾರ ಪ್ರಾಂತ ರಚನೆ ದಿನ ನಿಮಿತ್ತ ಬೆಳಗಾವಿಯಲ್ಲಿ ಮಾರುತಿ ಗುಡಿಯಲ್ಲಿ ಕೂಡಿದ ಸಭೆಯಲ್ಲಿ ಕೆಲವು ಮರಾಠಿ ಪುಂಡರು ಕಲ್ಲು ಪಾದರಕ್ಷೆ ಮೊದಲಾದವುಗಳನ್ನು ತೂರಿದ ಸಂಬಂಧದಲ್ಲಿ ಜಿಲ್ಹಾ ಏಕೀಕರಣ ಸಂಘದ ಅಧ್ಯಕ್ಷರಾದ ಡಾ ತೆರಗುಂಡಿಯವರು ದೀರ್ಘವಾದ ಒಂದು ಪ್ರಕಟನೆಯನ್ನು ಹೊರಡಿಸಿ ಅವರ ವರ್ತನೆಯನ್ನು ಖಂಡಿಸಿದ್ದಲ್ಲದೆ ಗೊಂದಲ ನಡೆದಾಗ ಯಾವದೇ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ನಿಂತ ಪೋಲೀಸ ಅಧಿಕಾರಿಗಳ ವರ್ತನದ ವಿಚಾರಣೆ ಯಾಗಬೇಕೆಂದು ಬೇಡಿದ್ದಾರೆ.

ಮಧ್ಯವರ್ತಿ ಸರಕಾರದ ಅಧಿಕಾರಿಗಳೊಬ್ಬರು ಬೆಳಗಾವಿಯಲ್ಲಿ ಸ್ಥಾನಿಕ ಪೋಲೀಸರ ಸಹಾಯದಿಂದ ತಾಜ ಪಾಟೀಲನ್ನೂ ಕೆಲವು ಮುಸಲ್ಮಾನ ಮನೆಗಳನ್ನೂ ಶಸ್ತ್ರಾಸ್ತ್ರಗಳಿರುವ ಸಂಶಯದಿಂದ ಮುತ್ತಿ ಶೋಧ ನಡೆಸಲಾಗಿ ಪುಶಾಳಕರರ ಗ್ಯಾರೇಜಿನ ಫಿಟರನಾದ ಹಮಜೇಖಾನ ಎಂಬವನ ಮನೆಯಲ್ಲಿ ಪಿಸ್ತೂಲಿನ ಪಡಿಯಚ್ಚು ಹಾಗು ಪಿಸ್ತೂಲಿನ ಕೆಲವು ಬಿಡಿ ಭಾಗಗಳು ದೊರತಿದ್ದರಿಂದ ಅವನನ್ನು ಬಂಧಿಸಲಾಯಿತು. ಉಳಿದ ಕಡೆಗೆ ಶಸ್ತ್ರಾಸ್ತ್ರಗಳ ಸಂಬಂಧದ ಕೆಲವು ಕಾಗದ ಪತ್ರಗಳು ಸಿಕ್ಕಿದ್ದನ್ನು ಜಪ್ತ ಮಾಡಲಾಗಿರುವದು.

ಬೆಳಗಾವಿಯ ಹೋಮ ಇನಸ್ಪೆಕ್ಟರರಾದ ವಿಜಂಗಫೀಲ್ಡ ಹಾಗು ಫೌಜದಾರರಾದ ಶ್ರೀ ವಾಗಳೆಯವರು ಲಂಚಗುಳಿತನ ಬಗ್ಗೆ ಡಿಪಾರ್ಟಮೆಂಟ ವಿಚಾರಣೆಗೆ ಒಳಗಾಗಿರುವರೆಂದು ತಿಳಿಯುವದು.

ಮುಂಬಯಿಯ ಅಸೋಸಿಯೇಟೆಡ್ ರೀಸರ್ಚ ಲೆಬೋರೇಟರಿ ಕಾರಖಾನೆಯ ಒಡೆಯರಾದ ಬೆಳಗಾವಿಯ ಶ್ರೀ ದಾತಾರ ಅಶ್ವತ್ಥರಾಯರು ಬಣ್ಣದ ಹೆಚ್ಚಿನ ಸಂಶೋಧನಾತ್ಮಕ ಅಭ್ಯಾಸಕ್ಕಾಗಿ ಅಮೇರಿಕೆಗೆ ತೆರಳಿರುವರು.

ಗಡಿ ಸೀಮೆಯಾದ ಚಿಕ್ಕೋಡಿ ತಾಲೂಕಿನಲ್ಲಿ ಶ್ರೀ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು ತಮ್ಮ ಕೀರ್ತನಗಳಿಂದ ಕನ್ನಡ ಪ್ರಚಾರ ಪ್ರಾರಂಭಿಸಿದ್ದು ಕನ್ನಡಿಗರಲ್ಲಿ ಆತ್ಮೀಯತೆಯು ಜಾಗ್ರತವಾಗಹತ್ತಿದೆ.

ಯಕ್ಸಂಬಿಯಲ್ಲಿ ಪುಂಡರ ಕಾಯಿದೆ ಅನ್ವಯ ಶ್ರೀಗಳಾದ ಶಂಕರ ಹುಕ್ಕೇರಿ, ಬಂಡು ಕುಲಕರ್ಣಿ ಮೊದಲಾದ ೧೦ ಜನರು ಬಂಧಿಸಲ್ಪಟ್ಟಿರುವರು.

ಉತ್ತರ ಕನ್ನಡ

ಮಹಾಡದಲ್ಲಿ ಮಾಮಲೇದಾರರಾಗಿದ್ದ ಶ್ರೀ ವಿ. ಈ. ಕಾಳೆಯವರು ಹೊನ್ನಾವರದ ರೆಸಿಡೆಂಟ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಕಾರವಾರದಲ್ಲಿ ತಾ. ೧೧ ನೇ ದಿನ ಮಹಾತ್ಮರ ಜನ್ಮ ದಿನವು ಪ್ರಭಾತಫೇರಿ ಧ್ವಜವಂದನ, ಸೂತ್ರಯಜ್ಞ, ಮಹಾತ್ಮರ ವಿಷಯವಾಗಿ ಭಾಷಣ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳಿಂದ ಉತ್ಸಾಹದಿಂದ ಸಾಂಗವಾಯಿತು. ಮುಸ್ಲಿಂ ಲೀಗಿನವರೂ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿದ್ದರು.

ಸಿದ್ಧಾಪುರದಲ್ಲಿ ಪ್ಲೇಗು ಪ್ರಾರಂಭವಾಗಿದ್ದು ಪ್ರತಿಬಂಧಕೋಪಾಯಗಳು ನಡೆದಿವೆ.

ಜಿಲ್ಹೆಯಲ್ಲಿ ಆಹಾರ ಸಂಗ್ರಹ ಸಾಕಷ್ಟಿಲ್ಲೆಂದೂ ಆಹಾರಧಾನ್ಯ ಕಳಿಸಬೇಕೆಂದೂ ಕಲೆಕ್ಟರರು ಸರಕಾರಕ್ಕೆ ವಿನಂತಿಸಿದ್ದರ ಫಲವಾಗಿ ಮುಂಬಯಿಯಿಂದ ೨೫೦ ಟನ್ ಗೋದಿ, ೨೫೦ ಟನ್ ಕೆಂಪುಜೋಳ ಬಂದಿವೆ

ಬಳ್ಳಾರಿ

ರಾಯರಸೀಮೆ ಹಾಗು ಚಿತ್ತೂರ ಜಿಲ್ಹೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸುವ ಕುರಿತು ಸರಕಾರದವರು ಗ್ಯಾಜಿಟ ಮುಖಾಂತರ ಜನಾಭಿಪ್ರಾಯ ವಿಚಾರಿಸಿದ್ದು ರಾಯರಸೀಮೆ ಹಾಗು ಬಳ್ಳಾರಿ ಜಿಲ್ಹೆಯ ಎಲ್ಲ ಸಂಘ ಸಂಸ್ಥೆಗಳು ಈ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸಿ ಆ ಠರಾವುಗಳನ್ನು ಮದ್ರಾಸ ಸರಕಾರದ ಶಿಕ್ಷಣ ಶಾಖೆ ಕಾರ್ಯದರ್ಶಿಗಳಿಗೆ ಇದೇ ತಾ ೨೪ ರೊಳಗಾಗಿ ಕಳಿಸಬೇಕೆಂದು ಬಳ್ಳಾರಿ ಜಿಲ್ಹಾ ಕಾಂಗ್ರೆಸ ಕಮಿಟಿ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಹೊಸಪೇಟ ನಗರಸಭೆಗೆ ಶ್ರೀ ಪತ್ತಿಕೊಂಡ ಗುರುನಾಥಪ್ಪ ಶೆಟ್ಟಿಯವರು ಅಧ್ಯಕ್ಷರಾಗಿ ಆರಿಸಿ ಬಂದಿರುವರು. ಅವರಿಗೆ ೧೪ ಮತಗಳು ಬಿದ್ದವು ಪ್ರತಿಸ್ಪರ್ಧಿಗಳಾದ ಬಿ ಗೌಡರಿಗೆ ೬ ಮತಗಳು ದೊರೆತವು.

ಕರ್ನಾಟಕ

ಧಾರವಾಡ

ನವಲಗುಂದ ನಗರ ಸಭೆಯ ಉಪ ಚುನಾವಣೆಯಲ್ಲಿ ಶ್ರೀ ನಾಗನಗೌಡ ಪಾಟೀಲರು ಬಹುಮತದಿಂದ ಆರಿಸಿ ಬಂದಿದ್ದಾರೆ.

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಸೋಶಾಲಿಸ್ಟ ಪಕ್ಷದ ಕಾರ್ಯದರ್ಶಿಗಳಾದ ಎಂ. ಜಿ. ಗೋರೆಯವರು ಕರ್ನಾಟಕದಲ್ಲಿ ಸಂಚಾರಕ್ಕೆ ಬಂದಿದ್ದು ಸಾಮ್ಯವಾದ ಹಾಗು ಅದರ ಭವಿತವ್ಯ ಕುರಿತು ಧಾರವಾಡ ಹುಬ್ಬಳ್ಳಿಗಳಲ್ಲಿ ಅವರ ಸಾರ್ವಜನಿಕ ಭಾಷಣಗಳಾದವು.

ಜನಪ್ರಿಯರೂ ವರ್ತಕರ ಹಾಗು ಪ್ರವಾಸಿಕರ ಆದರಕ್ಕೆ ಪಾತ್ರರೂ ಆಗಿರುವ ಹುಬ್ಬಳ್ಳಿ ಸ್ಟೇಶನ್ ಮಾಸ್ತರರಾದ ಶ್ರೀ ಮ್ಯಾಕ ಮೋಹನರನ್ನು ಕಟರೊಡಿಗೆ ನಿಷ್ಕಾರಣವಾಗಿ ವರ್ಗ ಮಾಡಿದ್ದರಿಂದ ರೇಲ್ವೆ ಕೆಲಸಗಾರರು ಸಭೆ ಸೇರಿ ಈ ಅನ್ಯಾಯವನ್ನು ಖಂಡಿಸಿದ್ದಲ್ಲದೆ ಕೆಲವು ರೇಲ್ವೆ ನೌಕರರಿಗೆ ೫೦ ರೂ. ಮುಂಗಡ ಕೊಡುವದಾಗಿ ಸರಕಾರದವರು ಜಾಹೀರ ಮಾಡಿ ಕೆಲಸಗಾರರಲ್ಲಿ ತಾರತಮ್ಯ ಕಲ್ಪಿಸಿದ್ದನ್ನು ನಿಷೇಧಿಸಿದರು.

ತಾ ೧೧ ನೇ ದಿವಸ ಮಹಾತ್ಮರ ಜನ್ಮದಿನ ನಿಮಿತ್ತ ಜಿಲ್ಹೆಯಲ್ಲಿಯ ಯಾವತ್ತೂ ಪ್ರಾಥಮಿಕ ಶಾಲೆಗಳಿಗೆ ಬಿಡುವು ಕೊಡಲಾಗಿತ್ತು.

ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯವರು ಶ್ರೀ. ಎಚ್. ಜಿ ಮುದ್ಗಲರವರನ್ನು ಸಾಕ್ಷಿಗೆ ಆಮಂತ್ರಿಸಿದ್ದು ಅವರು ಸಾಕ್ಷಿಕೊಡಲು ಒಪ್ಪಿರುವರು.

ಹುಬ್ಬಳ್ಳಿ ನಾಡಹಬ್ಬ ಸಮಿತಿಯವರು ತಾ ೨೧ ರಿಂದ ೨೪ ರ ವರೆಗೆ ಲ್ಯಾಮಿಂಗಟನ್ ಹಾಯಸ್ಕೂಲಿನಲ್ಲಿ ಔದ್ಯೋಗಿಕ, ಯಾಂತ್ರಿಕ ಹಾಗು ಲಲಿತ ಕಲೆ ವಸ್ತುಗಳ ಪ್ರದರ್ಶನ ಏರ್ಪಡಿಸಲು ನಿಶ್ಚಯಿಸಿದ್ದಾರೆ.

ಧಾರವಾಡ ಚಿದಂಬರ ಸೇವಾಸಮಿತಿಯವರಿಗೆ ಶ್ರೀ ಶಾಮರಾವ ಇಮಾರತಿ ಹಾವನೂರ ಅವರು ತಮ್ಮ ಸಹೋದರನಾದ ದಿವಂಗತ ಶ್ರೀನಿವಾಸನ ಸ್ಮರಣಾರ್ಥ ಶಿಷ್ಯವೃತ್ತಿ ಬಗ್ಗೆ ೫೦೧ ರೂ ಕೊಟ್ಟಿದ್ದಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸಾಧಾರಣ ಸಭೆಯು ತಾ. ೧೨ನೇ ದಿವಸ ಬ್ಯಾಡಗಿಯಲ್ಲಿ ಸೇರಿ, ಭಾರತ ಒಕ್ಕೂಟದಲ್ಲಿ ಸೇರದ ಬಗ್ಗೆ ನಿಜಾಮರ ಧೋರಣವನ್ನೂ ಹೊರಗಿನ ಮುಸಲ್ಮಾನರಿಗೆ ನಿರಾಶ್ರಿತರೆಂದು ಆಶ್ರಯ ಕೊಡುತ್ತಿರುವದನ್ನೂ ಖಂಡಿಸಲಾಯಿತು. ಇದಲ್ಲದೆ ಹೈದರಾಬಾದ ಸತ್ಯಾಗ್ರಹಕ್ಕೆ ಸಹಾಯ ನೀಡಲು ೧೨ ಜನರ ಒಂದು ಸಮಿತಿಯು ನಿಯಮಿಸಲ್ಪಟ್ಟಿತು. ಮತ್ತು ಅಕ್ಟೋಬರ ೨೧ಕ್ಕೆ ನೇತಾಜಿ ಸುಭಾಸರು ಸ್ವತಂತ್ರ ಹಿಂದುಸ್ತಾನ ಸರಕಾರ ಸ್ಥಾಪಿಸಿದ್ದರ ದಿನವನ್ನಾಚರಿಸಬೇಕು, ಅಝಾದ ಹಿಂದ ಫೌಜಿನವರನ್ನು ಮಿಲಿಟರಿಯಲ್ಲಿ ಸೇರಿಸಲು ಕೇಳಿಕೊಳ್ಳಬೇಕು, ರವಿವಾರ ಬದಲು ಸೋಮವಾರ ಸಾಪ್ತಾಹಿಕ ಸಾರ್ವತ್ರಿಕ ಬಿಡುವು ಜಾಹೀರ ಮಾಡಲು ಕೇಂದ್ರ ಸರಕಾರಕ್ಕೆ ಸೂಚಿಸಬೇಕು ಮುಂತಾದ ನಿರ್ಣಯಗಳಾದವು.

ಸುಪ್ರಸಿದ್ಧ ನರ್ತಕರಾದ ಶ್ರೀ ಕುಲಕರ್ಣಿ ಶ್ರೀನಿವಾಸರು ತಮ್ಮ ನೃತ್ಯ ಮಂಡಲಿಯೊಡನೆ ಮುಂದಿನ ತಿಂಗಳ ಭಾರತ ಪ್ರವಾಸ ಕೈಕೊಳ್ಳಲಿರುವರು.

ಶ್ರೀ ಶಾಂತೇಶ ಪಾಟೀಲರ ದಿಗ್ದರ್ಶನದಲ್ಲಿ ಸಿದ್ಧವಾಗಿರುವ ಪಂಪಾ ಚಿತ್ರ ಸಂಸ್ಥೆಯ ಚಂದ್ರಹಾಸ ಎಂಬ ಕನ್ನಡ ಚಿತ್ರಪಟವು ದೀಪಾವಳಿಯಲ್ಲಿ ಕನ್ನಡ ನಾಡಿನ ಮುಖ್ಯ ಮುಖ್ಯ ಸಿನೇಮಾ ಮಂದಿರಗಳಲ್ಲಿ ಪ್ರದರ್ಶನಕ್ಕೆ ಬರಲಿರುವದು.

ಗದಗ ಬೆಟಗೇರಿಯಲ್ಲಿ ಜವಳಿ ಲಾಯಸೆನ್ಸ ಧಾರಣ ಮಾಡಿದ ನಾಲ್ಕು ಸಹಕಾರ ಸಂಘಗಳಿಗೆ ಪ್ರತ್ಯೇಕ ಅಂಗಡಿಗಳಿರಬೇಕೆಂದು ಶ್ರೀ ಗೋಪಾಳರಾವ ನವಲಿ ಹಾಗು ಶ್ರೀ ಕೆ. ಎಂ. ಕುಲಕರ್ಣಿಯವರು ಅರ್ಥ ಮಂತ್ರಿಗಳಾದ ಶ್ರೀ ವೈಕುಂಠಲಾಲರನ್ನು ಕಂಡು ಬಿನ್ನವಿಸಲಾಗಿ ಮಂತ್ರಿಗಳು ಸಹಾನುಭೂತಿಪರ ಆಶ್ವಾಸನವಿತ್ತರು.

ಹೊಸರಿತ್ತಿಯಲ್ಲಿ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕನಿಧಿ ಪರವಾಗಿ ಮಹಾತ್ಮಾ ಗಾಂಧಿಯವರ ಜನ್ಮದಿನವಾದ ತಾ. ೨ ರಿಂದ ಬಾಲಮಂದಿರವು ಪ್ರಾರಂಭವಾಗಿದ್ದು ಶ್ರೀ ಹೊಸಮನಿ ಸಿದ್ದಪ್ಪನವರು ಅದರ ಉದ್ಘಾಟನ ಜರುಗಿಸಿದರು.

ದಕ್ಷಿಣ ಭಾಗದ ಅರಣ್ಯ ರಕ್ಷಕರ (ರೇಂಜರರ) ಪರಿಷತ್ತು ತಾ. ೧೨ ನೇ ದಿನ ಧಾರವಾಡದಲ್ಲಿ

ಸಂಸ್ಥಾನಗಳು

ರಬಕವಿ ನಾಗರಿಕರು ನಗರಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಲವು ದಕ್ಷಿಣ ಸಂಸ್ಥಾನಗಳ ಸಂಕಲ್ಪಿತ ಒಕ್ಕೂಟವನ್ನು ಖಂಡಿಸಿ ಅದರಿಂದ ಕರ್ನಾಟಕದ ಹಿತ ಸಾಧಿಸಲಾರದೆಂದೂ ಸಂಸ್ಥಾನಿಕರು ಪ್ರಜಾಭಿಪ್ರಾಯದಂತೆ ನಡೆಯಬೇಕೆಂದೂ ಅಭಿಪ್ರಾಯ ವ್ಯಕ್ತಮಾಡಿದರು. ಕನ್ನಡ ದಕ್ಷಿಣ ಸಂಸ್ಥಾನಗಳ ಸಲುವಾಗಿ ಬೇರೆ ಪ್ರಾದೇಶಿಕ ಸಮಿತಿ ರಚಿಸಬೇಕೆಂದು ಮತ್ತೊಂದು ಗೊತ್ತುವಳಿಯಿಂದ ಕೇಳಿಕೊಳ್ಳಲಾಯಿತು.

ಸಂಸ್ಥಾನಗಳು ತಮ್ಮ ನೆರೆಹೊರೆಯ ಸ್ವಭಾಷೆ ಪ್ರಾಂತಗಳಲ್ಲಿ ಸಮ್ಮಿಲಿತವಾಗುವದೇ ಯೋಗ್ಯವಾಗಿರುವದೆಂದೂ ಸಂಯುಕ್ತ ದಕ್ಷಿಣ ಸಂಸ್ಥಾನ ಯೋಜನೆಯು ನಿಜವಾಗಿ ಒಳ್ಳೆಯದಿದ್ದು ಕೊಲ್ಹಾಪುರವೂ ಅದರಲ್ಲಿ ಸೇರಿದರೆ ಅದು ಹೆಚ್ಚು ಕಾರ್ಯಕ್ಷಮವಾಗುವದೆಂದೂ ಪ್ರಜೆಗಳು ಇಚ್ಛಿಸಿದರೆ ಮಾತ್ರ ಜಮಖಂಡಿಯೂ ಅದರಲ್ಲಿ ಸೇರಬಹುದೆಂದೂ, ಜಮಖಂಡಿ ಮಹಾರಾಜರು ಸಂದರ್ಶನದಲ್ಲಿ ಹೇಳಿದರು.

ದಕ್ಷಿಣ ಸಂಸ್ಥಾನಗಳ ಕಾರ್ಯಕರ್ತರು ತಾ, ೧೨ ನೇ ದಿನ ಲಕ್ಷ್ಮೇಶ್ವರದಲ್ಲಿ ಶ್ರೀ ಮುನವಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಏಳು ದಕ್ಷಿಣ ಸಂಸ್ಥಾನಿಕರ ಒಕ್ಕೂಟ ಯೋಜನೆಯು ತ್ಯಾಜ್ಯವಿರುವದೆಂದೂ ಅದು ಒತ್ತಾಯದಿಂದ ಹೇರಲ್ಪಟ್ಟಲ್ಲಿ ಸಂಸ್ಥಾನಗಳಲ್ಲಿಯ ಕಾಯದೆ ಮಂಡಳದ ಸದಸ್ಯರೂ ಮಂತ್ರಿಗಳೂ ರಾಜೀನಾಮೆ ಕೊಟ್ಟು ಹೊರಬೀಳಬೇಕೆಂದೂ ನಿರ್ಣಯಿಸಿದರು. ಜಮಖಂಡಿ ಮಹಾರಾಜರ ಇತ್ತೀಚಿನ ಘೋಷಣೆ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ಒಕ್ಕೂಟ ಯೋಜನೆಯ ಕರಾರ ನಾಮೆ ಸಿದ್ಧಪಡಿಸುವಾಗ ಜನರ ಸಲಹೆ ಸೂಚನೆ ತೆಗೆದುಕೊಳ್ಳಲಾಗಿಲ್ಲವೆಂದೂ ಯೋಜನೆಯಲ್ಲಿ ರಾಜಪ್ರಮುಖನು ನಿರಂಕುಶನಾಗಿರುವದಲ್ಲದೆ ಭಾಷಾವಾರ ಪ್ರಾಂತತತ್ವಕ್ಕೆ ಒಪ್ಪಿಗೆ ಕೊಡಲಾಗಿದ್ದರೂ ಅದಕ್ಕೆ ರಾಜಪ್ರಮುಖ ಹಾಗು ರಾಜಮಂಡಲದ ಸಮ್ಮತಿಯ ನಿರ್ಬಂಧ ಹಾಕಲಾಗಿರುವದೆಂದೂ ಸಭೆಯ ಅಭಿಪ್ರಾಯವಾಯಿತು.

ಶ್ರೀ ಮ್ಯಾಥ್ಯೂಸರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶ್ರೀ ವ್ಹಿ. ಬಿ. ನಾಯಕರು ಪರಿಷತ್ತಿನ ಉದ್ಘಾಟನ ಮಾಡಿದರು.

ಧಾರವಾಡ ಸ್ತ್ರೀಯರ ಸಹಕಾರಿ ಸಂಘದ ಉದ್ಘಾಟನವು ತಾ. ೧೨ ನೇ ದಿನ ಕಲೆಕ್ಟರರ ಹಸ್ತದಿಂದ ಜರುಗಿತು. ರಾಷ್ಟ್ರದ ಉನ್ನತಿಯಾಗಬೇಕಾದರೆ ಸ್ತ್ರೀಯರು ಮುಂದೆಬಂದು ರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕೆಂದು ಕಲೆಕ್ಟರರು ಹೇಳಿದರು. ಸೌ ಶಕುಂತಲಾ ಕುರ್ತಕೋಟಿಯವರು ಸಂಘಕ್ಕೆ ಗೌರವ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿದ್ದು ಸಂಘದಿಂದ ಒಂದು ಸ್ವದೇಶಿ ವಸ್ತು ಸಂಗ್ರಹಾಲಯ ತೆರೆಯಲ್ಪಡಲಿದೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡು.. ವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚಸಹಿತ(ಚಂದಾಹಣ ಮುಂಗಡ)

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೦—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ವ್ಯವಸ್ಥಾಪಕ.

ಭಾಷೀ ಘಟನೆ ಸಂಬಂಧದಲ್ಲಿ ಕೊಲ್ಹಾಪುರ [illegible] ಮಹಾರಾಜರ ಘೋಷಣೆಯು [illegible] ದಿವಸ ಹೊರಬೀಳುವದೆಂದು ತೋರುತ್ತದೆ.

ಸಂಯುಕ್ತ ದಕ್ಷಿಣಸಂಸ್ಥಾನಯೋಜನೆ ಪರಿಶೀಲನೆಗಾಗಿ ಮಿರಜಿಯಲ್ಲಿ ತಾ ೧೨ ಕ್ಕೆ ಡಾ. ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ಸೇರಿದ ಮಹಾಸಭೆಯು ಅಧ್ಯಕ್ಷರ ಭಾಷಣದ ನಂತರ ವಿಸರ್ಜಿಸಲ್ಪಟ್ಟಿತು ಸೇರ್ಪಡೆ ಪತ್ರದ ನಕಲನ್ನು ಪ್ರತಿನಿಧಿಗಳಿಗೆ ಪೂರೈಸಿಲ್ಲ ಮುಂತಾಗಿ ತಕರಾರುಗಳು ಉಪಸ್ಥಿತವಾದ್ದರಿಂದ ಹೀಗೆ ಮಾಡಲಾಯಿತು. ಪ್ರಜೆಗಳ ಇಚ್ಛೆಯ ವಿರುದ್ಧ ಯೋಜನೆ ಹೇರುವದು ಯಾರ ಉದ್ದೇಶವಿಲ್ಲೆಂದೂ ರಾಜರು ಪುನಃ ವಿಚಾರ ಮಾಡಿ ಈ ವರೆಗಿನ ಪರಿಶ್ರಮ ವ್ಯರ್ಥವಾಗದಂತೆ ನೋಡಿಕೊಳ್ಳಬೇಕೆಂದೂ ಡಾ. ಪಟ್ಟಾಭಿಯವರು ಹೇಳಿದರು.

ಕೊಲ್ಹಾಪುರದ ಮುಖ್ಯ ನ್ಯಾಯಾಧೀಶರಾದ ಶ್ರೀ [illegible] ಹಾಗು ಶಿಕ್ಷಣ ಮಂತ್ರಿ ಶ್ರೀ ಎಸ್. ಎಸ್. [illegible] [illegible] ಉತ್ಪನ್ನವಾಗಿರುವದೆಂದೂ ತಿಳಿಯುತ್ತದೆ.

ದಕ್ಷಿಣ ಸಂಸ್ಥಾನ ಪ್ರಾದೇಶಿಕ ಸಮಿತಿಯವರು [illegible] ದಕ್ಷಿಣ ಸಂಸ್ಥಾನದ ಸ್ಥಾಪನೆಗೆ ಒಪ್ಪಿಕೊಂಡಿದ್ದಾರೆಂದು ತಿಳಿಯುತ್ತದೆ. [illegible] ಸ್ಥಾನ ಸ್ಥಾಪನೆಯ ಕರಾರ ಪತ್ರಕ್ಕೆ ಸಹಿ ಹಾಕಿಲ್ಲದ್ದಾರೆಂದೂ [illegible] ಸೇರಿದ ಮಹಾಸಭೆಯು [illegible] ಹೋದುದರ ಪರಿಣಾಮದಿಂದ ಮೊದಲಿನ ಯೋಜನೆಯಲ್ಲಿ ವ್ಯತ್ಯಾಸವಾಗಿಲ್ಲವೆಂದು ತಿಳಿಯುತ್ತದೆ.

ಮುಂಬಯಿ

ಹಿಂದೀ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ. ಸುರೇಶಚಂದ್ರ ಬ್ಯಾನರ್ಜಿಯವರು ಕಾರ್ಯಬಾಹುಳ್ಯದ ಕಾರಣ ಹೇಳಿ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಅವರ ಸ್ಥಳದಲ್ಲಿ ಸಂಯುಕ್ತಪ್ರಾಂತದ ಕೂಲಿಕಾರ ಧುರೀಣರಾದ ಶ್ರೀ ಹರಿಹರನಾಥ ಶಾಸ್ತ್ರಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಮುಂಬಯಿ ಶಾಸನ ಸಭೆಯಲ್ಲಿ ಸಾತಾರಾ ಜಿಲ್ಲೆಯ ಸದಸ್ಯರಾಗಿರುವ ಶ್ರೀ ಕೇಶವ ಬಿ. ಪಾಟೀಲರನ್ನು ಪುಣೆಯಲ್ಲಿ ಮನೆಗೆ ಹೋಗುತ್ತಿದ್ದಾಗ ಯಾರೋ ಕೊಡಲಿಯೇಟಿನಿಂದ ಕೊಂದರೆಂದು ತಿಳಿಯುತ್ತದೆ.

ಅ. ಭಾ. ಹರಿಜನ ಪರಿಷತ್ತು ಮುಂಬಯಿಯಲ್ಲಿ ನವಂಬರದ ಕೊನೆಯ ವಾರದಲ್ಲಿ ಸೇರುವುದು. ಪಶ್ಚಿಮ ಬಂಗಾಲದ ಮಂತ್ರಿಗಳಾದ ಶ್ರೀ ಹೇಮಚಂದ್ರ ನಾಸ್ಕರರು ಅಧ್ಯಕ್ಷತೆ ವಹಿಸುವರು. ಶ್ರೀ ಖಂಡುಭಾಯಿ ದೇಸಾಯಿ [illegible] ಸ್ವಾಗತಾಧ್ಯಕ್ಷರಿರುವರು.

ಪುಣೆಯ ಶ್ರೀ ನರಸಿಂಹ ಚಿಂತಾಮಣಿ ಕೇಳಕರರು ತಮ್ಮ ೭೫ ನೆಯ ವಯಸ್ಸಿನಲ್ಲಿ ಹೃದಯಕ್ರಿಯೆ ನಿಂತು ತಾ. ೧೪ ರಲ್ಲಿ ನಿಧನ ಹೊಂದಿದರು. ಅವರು ಕೆಲವು ದಿನಗಳಿಂದ ಹೃದಯವಿಕಾರದಿಂದ ಬಳಲುತ್ತಿದ್ದರು. ಅವರ ಅಂತ್ಯಸಂಸ್ಕಾರ ಅದೇ ದಿನ ಸಾಯಂಕಾಲ ನೆರವೇರಿತು.

ಬೇರೆ ಬೇರೆ ರೇಲ್ವೆಗಳಲ್ಲಿ ರೂಢವಿರುವ ಬೇರೆ ಬೇರೆ ವೇತನ ಶ್ರೇಯಾಣಿಗಳನ್ನು ರದ್ದುಗೊಳಿಸಿ ಕೇಂದ್ರ ವೇತನ ಸಮಿತಿಯ ಸೂಚನೆಗಳನುಸಾರ [illegible] ವೇತನ ಪ್ರಯಾಣವನ್ನು ನಿಶ್ಚಯಿಸಬೇಕೆಂದು ತಾ ೧೩ ರಲ್ಲಿ ಮುಂಬಯಿಯಲ್ಲಿ ಸೇರಿದ್ದ ಹಿಂದುಸ್ಥಾನ ರಾಷ್ಟ್ರೀಯ ಮಜೂರ ಸಂಘದ ಕಾರ್ಯ ಸಮಿತಿಯು ನಿರ್ಣಯಿಸಿತು.

ಅ. ಭಾ. ವೃತ್ತ ಪತ್ರ ಸಂಪಾದಕರ ಪರಿಷತ್ತಿನ ಸ್ಥಾಯಿ ಸಮಿತಿಯು ಅಕ್ಟೋಬರ ೮ ರಿಂದ ೧೧ ರ ವರೆಗೆ ಜರುಗಿತು. ಜಾತೀಯ ಗಲಭೆಗಳಿಗೆ ಸಂಬಂಧಿಸಿದ ಸುದ್ದಿ ಮತ್ತು ಟೀಕೆಗಳನ್ನು ಪ್ರಕಟಿಸುವ [illegible] ಸಮಿತಿಯು ಹೊಸ [illegible] ಸ್ವೀಕರಿಸಿತು. [illegible] ಹಿಂದುಸ್ಥಾನದ ಎಲ್ಲ ಪತ್ರಿಕೆಗಳಿಗೂ ಅನ್ವಯಿಸುವುದು.

ಮುಂಬಯಿಯಲ್ಲಿ ಶ್ರೀ ಶಾಂತೇಶ ಪಾಟೀಲರ ದಿಗ್ದರ್ಶನದಲ್ಲಿ ಸಿದ್ಧವಾಗಿರುವ ಪಂಪಾ ಚಿತ್ರ ಸಂಸ್ಥೆಯವರ "ಚಂದ್ರಹಾಸ" ಎಂಬ ಪ್ರಥಮ ಚಿತ್ರಪಟವು ಬರುವ ದೀಪಾವಳಿಯಲ್ಲಿ ಕನ್ನಡ ನಾಡಿನ ಮುಖ್ಯ ಮುಖ್ಯ ಚಿತ್ರಮಂದಿರಗಳ ಬೆಳ್ಳಿತೆರೆಯ ಮೇಲೆ [illegible].

ಬ್ರಿಟಿಶರನ್ನು ಹೊರದೂಡಿದ್ದಲ್ಲದೆ ಹಿಂದುಸ್ಥಾನ ಸ್ವಾವಲಂಬಿಯಾದ ದೇಶವಾಗುವಂತೆ ಮಾಡುವುದು ಸ್ವರಾಜ್ಯದ ಉದ್ದೇಶವೆಂದು ಗಾಂಧಿ ಜಯಂತಿಯ ದಿನ ಮುಂಬಯಿಯ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಆಚಾರ್ಯ ಕೃಪಲಾನಿಯವರು ಭಾಷಣಮಾಡುತ್ತ, ಹೇಳಿದರು.

ಆಲುಗಡ್ಡೆಯ ಬೆಳೆ ಹೆಚ್ಚಿಸುವ ಯೋಜನೆಗೆ ಮುಂಬಯಿ ಸರಕಾರವು ೭೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾಗಿ ತಿಳಿದು ಬರುತ್ತದೆ.

ಪೋಲೀಸ ಕಮಿಶನರು ಅಕ್ಟೋಬರ ೧೩ ರ [illegible] ಮುಂಬಯಿಯ ಅನೇಕ ಸ್ಥಳಗಳಲ್ಲಿ ಕರ್ಫ್ಯೂ ಜಾರಿ ಮಾಡಿದ್ದರು.


ತಾ. [illegible] ರಾತ್ರಿ ಮುಂಬಯಿಯ ಲಾಲಬಾಗ [illegible] ೬ ಜನರು ಚೂರಿಯಿಂದ ತಿವಿಯಲ್ಪಟ್ಟರೆಂದೂ ತಾ. ೧೪ ರ ಮಧ್ಯಾಹ್ನದಲ್ಲಿ ಪಾಯಧೋನಿ ಭಾಗದಲ್ಲಿ ಒಂದು ತಿವಿತ ಸಂಭವಿಸಿತೆಂದೂ ಆಗ ಜನರು ಕೂಡಿ ಕಲ್ಲು ಒಗೆಯಹತ್ತಿದ್ದರಿಂದ ಒಬ್ಬ ಸಶಸ್ತ್ರ ಪೋಲೀಸನಿಗೆ ಗಾಯವಾಯಿತೆಂದೂ ಆಗ ೬ ಸುತ್ತು ಗುಂಡು ಹಾರಿಸಿದ್ದರಿಂದ ಇಬ್ಬರಿಗೆ ಗಾಯವಾಯಿತೆಂದೂ ಸರಕಾರೀ ಪ್ರಕಟನೆ ಹೊರಟಿದೆ.

ಮಧ್ಯಪ್ರಾಂತ

ಅ. ಭಾ. ಅಸ್ಪೃಶ್ಯ ಲೀಗಿನ ಅಧ್ಯಕ್ಷರಾದ ಶ್ರೀ ಎಚ್. ಜೆ. ಖಾಂಡೇಕರರು ಒಂದು ಪ್ರಕಟನೆ ಹೊರಡಿಸಿ ಅದರಲ್ಲಿ ಪಾಕಿಸ್ಥಾನದಲ್ಲಿ ಅಸ್ಪೃಶ್ಯರಿರುವುದಾದರೆ ಅವರ ನಿರ್ನಾಮ ಖಂಡಿತವಾಗುವುದರಿಂದ ಅವರೆಲ್ಲ ಶೀಘ್ರವಾಗಿ ಹಿಂದುಸ್ಥಾನಕ್ಕೆ ಹೊರಟು ಬರಬೇಕಾಗಿ ಹೇಳಿದ್ದಾರೆ.

ಬಿಹಾರ

ಪಾಟಣದ ಪೋಲೀಸರು ಶಸ್ತ್ರಾಸ್ತ್ರಗಳ ಬಗ್ಗೆ ಶೋಧ ನಡೆಸಿದಾಗ ದಾರುಸಾಮ್ಗ್ರಿ [illegible] ದೊರೆತಿವೆ. ಮೋಟಾರು ಕಾರೊಂದರಲ್ಲಿ ಬಾಟಲಿ [illegible] ಬಂದೂಕು ಕಾಡತೂಸುಗಳು ಹೇರಳ [illegible] ಸಿಕ್ಕಿದವು. ಅದರಲ್ಲಿದ್ದ ಪ್ರತಿಷ್ಠಿತ ಮುಸ [illegible] ಬಂಧಿಸಲಾಗಿದೆ.



ಹೊಸದಿಲ್ಲಿ

ಮುಸ್ಲಿಂ ಲೀಗಿನವರು ತಾವಾಗಿಯೆ ವಿಸರ್ಜಿಸಿ ರಾಜಕೀಯ ಮತ್ತು ಆರ್ಥಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ಸನ್ನು ಎಲ್ಲರೊಂದಾಗಿಯೆ ಸೇರಬೇಕು. ಕಷ್ಟಮಯವಾದ ದ್ವಿಜನಾಂಗ ತತ್ವವನ್ನು ತ್ಯಜಿಸಿಬಿಡಬೇಕು. ಅಕ್ರಮವಾಗಿಟ್ಟುಕೊಂಡಿದ್ದ ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸಿಕೊಡಬೇಕು—ಎಂದು ಪಂಜಾಬಿನ ರಾಷ್ಟ್ರೀಯ ಮುಸ್ಲಿಮರ ಮುಖಂಡರಾದ ಪ್ರೊ! ಅಬ್ದುಲ್ ಮಜೀದಖಾನರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಪಾಕಿಸ್ಥಾನದಿಂದ ಬಂದ ಶೀಖರಿಗೆ ಹಿಂದುಸ್ಥಾನ ಸರಕಾರದಿಂದ ಸರ್ವ ಸಹಾಯ ಪಡೆವ ಅಧಿಕಾರವಿದೆಯೆಂದು ಖನಿಜ ಶಾಖೆಯ ಮಂತ್ರಿಗಳಾದ ಶ್ರೀ ಗಾಡಗೀಳರು ಸರದಾರ ಸಂತಸಿಂಗರು ಹೊಸದಿಲ್ಲಿಯಲ್ಲಿ ಏರ್ಪಡಿಸಿದ್ದ ಭೋಜನ ಸಮಾರಂಭದಲ್ಲಿ ಹೇಳಿದರು.

ಪಾಕಿಸ್ಥಾನದಿಂದ ಹಿಂದುಸ್ಥಾನಕ್ಕೆ ತಾ ೮—೯ ರಲ್ಲಿ ೨೨೩೮೦ ಮುಸ್ಲಿಮೇತರರು ಬಂದಿರುವುದಾಗಿಯೂ ಇಲ್ಲಿಂದ ಅಲ್ಲಿಗೆ ೨೯೫೦೦ ಮುಸ್ಲಿಮರನ್ನು ಕಳುಹಲಾಗಿದೆಯೆಂದೂ ತಿಳಿಯುತ್ತದೆ.

ಅಂತರ್ರಾಷ್ಟ್ರೀಯ ಕೂಲಿಕಾರ ಸಂಸ್ಥೆಯ ಏಶಿಯ ಪ್ರಾದೇಶಿಕ ಪರಿಷತ್ತು ಅಕ್ಟೋಬರ ೨೭ಕ್ಕೆ ಹೊಸದಿಲ್ಲಿಯಲ್ಲಿ ಕೂಡಲಿದ್ದು ಮಹಾತ್ಮಾ ಗಾಂಧಿಯವರು ಅದರ ಉದ್ಘಾಟನೆ ಮಾಡಲೊಪ್ಪಿದ್ದಾರೆ.

ಮೈಸೂರು ಸಂಸ್ಥಾನದ ಬಿಕ್ಕಟ್ಟನ್ನು ಯಶಸ್ವಿಯಾಗಿ ಬಗೆಹರಿಸಿದ್ದಕ್ಕಾಗಿ ಮೈಸೂರು ಮಹಾರಾಜರು ದಿವಾನರು ಮತ್ತು ಕಾಂಗ್ರೆಸ ಅಧ್ಯಕ್ಷರು ಇವರಿಗೆ ಸರದಾರ ವಲ್ಲಭಭಾಯಿ ಪಟೇಲರು ಅಭಿನಂದನಪರ ತಂತಿಗಳನ್ನು ಕಳುಹಿಸಿದ್ದಾರೆ.

ಹಿಂದುಸ್ಥಾನ ಸರಕಾರವು ತಾ. ೧೨ ರಲ್ಲಿ ಹಿಂದುಸ್ಥಾನ ಆಕಾಶವಾಣಿಯಲ್ಲಿ ಇಂಡೋನೇಶಿಯದ ಭಾಷೆಯಲ್ಲಿ ಸುದ್ದಿ ಬಿತ್ತರಿಸುವ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಎರಡೂ ರಾಷ್ಟ್ರಗಳ ಬಾಂಧವ್ಯವನ್ನು ಹೆಚ್ಚಿಸುವುದರ ಸಲುವಾಗಿ ಹೀಗೆ ಮಾಡಲಾಯಿತೆಂದು ಗೃಹಮಂತ್ರಿ ಸರದಾರರು ತಮ್ಮ ಭಾಷಣದಲ್ಲಿ ಹೇಳಿದರು.

ಹೊಸದಿಲ್ಲಿಯ ಗುಜರಾಥಿಗಳು ಮಹಾತ್ಮರಿಗೆ ಜನ್ಮದಿನದ ನಿಮಿತ್ತ ೯೫೦೦ ರೂಪಾಯಿಗಳನ್ನೂ ೨೨೫ ಉಣ್ಣೆಯ ಕೋಟು ಹಾಗೂ ೭೯ ಉಂಡೆ ನೂಲನ್ನೂ ಕಾಣಿಕೆಯಾಗಿ ಕೊಟ್ಟರು.

ಆಸ್ಟ್ರೇಲಿಯದ ಸರಕಾರವು ಹಿಂದುಸ್ಥಾನ ಸರಕಾರಕ್ಕೆ ೨೦ ಲಕ್ಷ ಸಿ. ಸಿ. ಕಾಲರಾ ಪ್ರತಿಬಂಧಕ ಚುಚ್ಚುಮದ್ದನ್ನು ಪುಕ್ಕಟೆ ಕೊಡುವುದೆಂದು ಆಸ್ಟ್ರೇಲಿಯದ ಹೈ ಕಮೀಶನರು ಜಾಹೀರುಮಾಡಿದ್ದಾರೆ.

ಜರ್ಮನಿಯಲ್ಲಿಯ ವಿಜ್ಞಾನಿಗಳು ಮತ್ತು ಕೈಗಾರಿಕೆ ತಂತ್ರಜ್ಞರು ಭಾರತದ ಔದ್ಯೋಗಿಕ ಪ್ರಪಂಚದಲ್ಲಿ ನೌಕರಿ ಬೇಡುತ್ತಿರುವರೆಂದೂ ಜರ್ಮನಿಯ [illegible] ಜೀವನ ಅವರಿಗೆ ಅಸಹ್ಯವಾಗಿದೆಯೆಂದೂ [illegible] ಪರಿಷತ್ತಿಗೆ ಹೋಗಿಬಂದ ಪ್ರತಿನಿಧಿ [illegible] ಅಭಿಪ್ರಾಯ ಪಡುತ್ತಾರೆ.

ಮದ್ರಾಸ

ಮದ್ರಾಸ ಶಾಸನ ಸಭೆಯಲ್ಲಿ ಮಂಡಿಸಲಾದ ಜಮೀನುದಾರಿ ನಿರ್ಮೂಲನ ಮಸೂದೆಯಲ್ಲಿ ಧಾರ್ಮಿಕ ಉಂಬಳಿಯನ್ನು ಸೇರಿಸುವುದಿಲ್ಲವೆಂದ ಮುಖ್ಯ ಮಂತ್ರಿಗಳು ಈಗ ಅವನ್ನು ಸೇರಿಸಿರುವುದರಿಂದ ತಾವು ರಾಜೀನಾಮೆ ಕೊಟ್ಟಿರುವುದಾಗಿ ಶ್ರೀ ವೈದ್ಯನಾಥ ಅಯ್ಯರರು ಸ್ಪಷ್ಟಪಡಿಸಿದ್ದಾರೆ.

ಪಶ್ಚಿಮ ಬಂಗಾಲದ ಗವರ್ನರರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ತಮಿಳು ಭಾಷೆಯ ಪ್ರಸಿದ್ಧ ಕವಿಗಳಾದ ಭಾರತಿಯವರ ಸ್ಮಾರಕ ಮಂದಿರದ ಉದ್ಘಾಟನವನ್ನು ಮದ್ರಾಸಿನಲ್ಲಿ ಮಾಡುತ್ತ ತಾವು ಗವರ್ನರ ಪದದಿಂದ ನಿವೃತ್ತರಾದೊಡನೆ ರಾಜಕಾರಣದಿಂದಲೂ ನಿವೃತ್ತಿ ಹೊಂದುವುದಾಗಿ ಹೇಳಿದರು.

ಈಗ ಪ್ರತಿಯೊಬ್ಬ ನಾಗರಿಕನೂ ಶಾಂತಿಸುವ್ಯವಸ್ಥೆಗಳನ್ನು ಕಾದುಕೊಳ್ಳುವುದಗತ್ಯವೆಂದು ಪಶ್ಚಿಮ ಬಂಗಾಲದ ಗವರ್ನರರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ಮದ್ರಾಸ ನಗರ ಸಭೆಯ ಮಾನಪತ್ರಕ್ಕೆ ಉತ್ತರವೀಯುತ್ತ ಹೇಳಿದರು.

ಸಂಯುಕ್ತಪ್ರಾಂತ

ಸಂಯುಕ್ತಪ್ರಾಂತ ಸಾಮ್ಯವಾದಿ ಪಕ್ಷದ ಕಾರ್ಯದರ್ಶಿಗಳಾದ ಮೋಹನಲಾಲ ಗೌತಮರು ತಮ್ಮ ಪಕ್ಷದ ಧೋರಣವು ದೇಶದ ಪ್ರಗತಿಗೆ ವಿರೋಧವಾಗಿದೆಯೆಂದು ಮತ್ತು ಕಾಂಗ್ರೆಸನ್ನು ಬಲಪಡಿಸುವದು ಇಂದು ಅಗತ್ಯವಾಗಿದೆಯೆಂದು ಅಭಿಪ್ರಾಯಪಟ್ಟು ಪಕ್ಷಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಸಂಯುಕ್ತಪ್ರಾಂತದ ಅಡ್ವೊಕೇಟ ಜನರಲ್ಲರಾದ ಮಹಮ್ಮದ ವಜೀರರು ರಾಜೀನಾಮೆ ಸಲ್ಲಿಸಿದರೆಂದೂ ಗವರ್ನರರಿಂದ ಅದು ಸ್ವೀಕೃತವಾಯಿತೆಂದೂ ತಿಳಿಯುತ್ತದೆ.

೧೫ ದಿನಗಳಿಂದ ಫೀ ಏರಿಸಿದ್ದನ್ನು ಪ್ರತಿಭಟಿಸಿ ಲಖನೌವಿನ ವಿದ್ಯಾರ್ಥಿಗಳು ಹೂಡಿದ ಮುಷ್ಕರ ಈಗ ಮುಕ್ತಾಯವಾಯಿತು.

ದಿಲ್ಲಿಯಲ್ಲಿ ಇತ್ತೀಚೆಗೆ ಪೋಲೀಸರಿಗೆ ಅನೇಕ ಕಡೆಗಳಲ್ಲಿ ಶಸ್ತ್ರಾಸ್ತ್ರ ಹಾಗೂ ಮದ್ದು ಗುಂಡುಗಳು ದೊರೆತದ್ದನ್ನು ಕಂಡು ಸಂಯುಕ್ತಪ್ರಾಂತ ಸರಕಾರದವರು ಆಗ್ರಾ, ಮಿರತ, ಕಾನಪುರ ಮುಂತಾದ ಸ್ಥಳಗಳಲ್ಲಿ ಝಡತಿ ನಡೆಸಲು ಅವರಿಗೆ ಅನೇಕ ಶಸ್ತ್ರಾಸ್ತ್ರ ಸಂಗ್ರಹಗಳು ದೊರೆತಿವೆ. ಇದರಿಂದ ಮುಸಲ್ಮಾನ ಸುಶಿಕ್ಷಿತರ ದೇಶನಿಷ್ಠೆಯ ಬಗ್ಗೆ ಸಂಶಯ ಉಂಟಾಗಿ ಝಡತಿಯನ್ನು ಇನ್ನೂ ವೇಗವಾಗಿ ನಡೆಸಲಾಗುತ್ತಿದೆ.

ತಾ. ೧೩ ರಲ್ಲಿ ಪೋಲೀಸರಿಗೆ ಆಗ್ರಾದ ಒಂದು ಹೊಟೇಲಿನಲ್ಲಿ ಮದ್ದಿನರಾಶಿ, ದೇಶೀತೋಫು ಸಿಕ್ಕಿದ್ದು ಹೊಟೇಲಿನ ಒಡೆಯನನ್ನೂ ವ್ಯವಸ್ಥಾಪಕನನ್ನೂ ಬಂಧಿಸಲಾಗಿದೆ.

ಪಶ್ಚಿಮ ಬಂಗಾಲ

ಶ್ರೀ ಎನ್ ಆರ್ ಸರಕಾರರು ಒಂದು ದೀರ್ಘ ಪ್ರಕಟನೆಯನ್ನು ಹೊರಡಿಸಿ ಅದರಲ್ಲಿ ಭಾರದಂಥ ದರಿದ್ರ ರಾಷ್ಟ್ರವು ತನ್ನ ಸುಪ್ತ ಸಂಪತ್ತನ್ನು ಉಪಯೋಗಿಸಿಕೊಳ್ಳದೆ ಬಿಡಲಾರದೆಂದು ಹೇಳಿದ್ದಾರೆ.

ಪೂರ್ವ ಬಂಗಾಲದಿಂದ ಮುಸಲ್ಮಾನೇತರರು ಪಶ್ಚಿಮ ಬಂಗಾಲಕ್ಕೆ ಬಂದರೆ ಅವರಿಗೆ ಆಶ್ರಯ ಕೊಡುವುದು ಕರ್ತವ್ಯವೆಂದು ಪ. ಬಂಗಾಲದ ಮುಖ್ಯಮಂತ್ರಿಗಳಾದ ಡಾ. ಪಿ. ಸಿ. ಘೋಷರು ಕಲಕತ್ತದಲ್ಲಿ ಸೇರಿದ ಪತ್ರಿಕಾ ಕರ್ತರ ಪರಿಷತ್ತಿನಲ್ಲಿ ಹೇಳಿದರು.

ರ್‍ಯಾಡಕ್ಲಿಫ್ ತೀರ್ಪಿನನ್ವಯ ಇಬ್ಭಾಗವಾಗಿರುವ ಪಶ್ಚಿಮ ಬಂಗಾಲ ಪ್ರಾಂತದ ಎರಡೂ ಭಾಗಗಳ ನಡುವೆ ರಸ್ತೆ ಮತ್ತು ರೇಲ್ವೆ ಸಂಬಂಧವನ್ನುಂಟು ಮಾಡಬೇಕೆಂದು ದಿಲ್ಲಿಯಲ್ಲಿ ಸೇರಿದ ಹಿಂದುಸ್ಥಾನ ಸರಕಾರ, ಆಸಾಮ ಸರಕಾರ ಮತ್ತು ಪ. ಬಂಗಾಲ ಸರಕಾರ ಇವುಗಳ ಪ್ರತಿನಿಧಿಗಳ ಪರಿಷತ್ತಿನಲ್ಲಿ ನಿರ್ಣಯವಾಯಿತೆಂದು ತಿಳಿಯುತ್ತದೆ.

ಪೂರ್ವ ಪಂಜಾಬ

ದುರ್ಘಟನೆಗಳನ್ನು ಪ್ರತಿಬಂಧಿಸಲು ಪೂರ್ವ ಪಂಜಾಬು ಸರಕಾರದವರು ಗಡಿಭಾಗಗಳಲ್ಲಿ ಉಗ್ರೋಪಾಯಗಳನ್ನು ಕೈಕೊಳ್ಳಲಿರುವರೆಂದು ತಿಳಿಯುತ್ತದೆ. ಈ ಸಂಬಂಧದಲ್ಲಿ ಮುಖ್ಯ ಪ್ರಧಾನರಾದ ಡಾ. ಗೋಪಿಚಂದ ಭಾರ್ಗವರು ಡೆಪ್ಯುಟಿ ಕಮಿಶನರಿಗೆ ಒಂದು ಆಜ್ಞೆಯಿತ್ತು ಗಡಿಭಾಗಗಳಲ್ಲಿಯ ಹಳ್ಳಿಗರಿಗೆ ಅನಿರ್ಬಂಧವಾಗಿ ಶಸ್ತ್ರಾಸ್ತ್ರ ಪೂರಯಿಸುವಂತೆ ತಿಳಿಸಿದ್ದಾರೆ.

ಹಿಂದೀ ಸಂಸ್ಥಾನ

ಹಿಂದು ಸಭೆ ಶಿಷ್ಟಮಂಡಲದವರು ತಾ. ೧೩ ರಲ್ಲಿ ಕೊಲ್ಹಾಪುರ ಮಹಾರಾಜರನ್ನು ಕಂಡು ಭಾವೀ ಘಟನೆಯ ಬಗ್ಗೆ ಚರ್ಚಿಸಿದರು. ಮಹಾರಾಜರು ಪ್ರಜಾಪರಿಷತ್ತಿನ ಧುರೀಣರನ್ನು ಬರಮಾಡಿಕೊಂಡು ಈ ಸಂಬಂಧದಲ್ಲಿ ತಮ್ಮ ಖಂಡಿತ ಸೂಚನೆಗಳನ್ನಿಡಲಿರುವರೆಂದು ತಿಳಿಯುತ್ತದೆ. ದಸರೆಯ ದಿನ ಮಹಾರಾಜರ ಘೋಷಣೆ ಹೊರಬೀಳಬಹುದೆಂದು ತರ್ಕಿಸಲಾಗಿದೆ.

ಮಿರಜಿನಲ್ಲಿ ರಾಷ್ಟ್ರಧ್ವಜವಂದನೆ ಶ್ರೀ ದಿವಾಕರರ ಹಸ್ತದಿಂದ ಜರುಗಿತು.

ಸಾಮ್ಯವಾದೀ ಪಕ್ಷದ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಕೊಲ್ಹಾಪುರದ ರಾಜಾರಾಮ ಕಾಲೇಜಿನ ೬೭ ನೆಯ ಹುಟ್ಟುಹಬ್ಬದ ನಿಮಿತ್ತ ಭಾಷಣ ಮಾಡುವಾಗ ಹಿಂದು ರಾಷ್ಟ್ರವೆಂದು ಕೂಗುವುದು ಪ್ರತಿಗಾಮಿಗಳ ಕಾರ್ಯವೆಂದೂ ಆದುದರಿಂದ ತರುಣರು ಇದಕ್ಕೆ ಬೆಂಬಲ ಕೊಡಬಾರದೆಂದೂ ಹೇಳಿದರು.

ಪಾಕಿಸ್ಥಾನ

ಸಿಂಧ

ಕಾಶ್ಮೀರದಲ್ಲಿ ಮುಸಲ್ಮಾನರ ಹಳ್ಳಿಗಳನ್ನು ಸುಲಿಯಲಾಗುತ್ತಿದೆಯೆಂದು ಪಾಕಿಸ್ಥಾನ ಸರಕಾರವು ಕರಾಚಿಯಿಂದ ಕಾಶ್ಮೀರ ಸರಕಾರಕ್ಕೆ ಒಂದು ಉದ್ಧಟ ಪತ್ರ ಕಳುಹಿದೆಯೆಂದು ತಿಳಿಯುತ್ತದೆ.

ಪಾಕಿಸ್ಥಾನ ಸರಕಾರದ ಸಾರಿಗೆ ಮಂತ್ರಿಗಳಾದ ಸರದಾರ ಅಬ್ದುರ ರಾಬ ನಿಸ್ತಾರರು ತಿಕೀಟು ಇಲ್ಲದೆ ಪ್ರವಾಸ ಮಾಡುವವರ ಮೇಲೆ ಉಗ್ರಕ್ರಮ ಕೈಕೊಳ್ಳಬೇಕೆಂದು ಕರಾಚಿಯ ಒಂದು ಸಭೆಯಲ್ಲಿ ಹೇಳಿದರು.

ಕಳೆದ ಕೆಲವು ದಿನಗಳಿಂದ ಅವಶ್ಯಕ ಪದಾರ್ಥಗಳ ಬೆಲೆ ಮಿತಿಮೀರಿ ಏರಿ ಕರಾಚಿಯಲ್ಲಿ ಸಿಗರೇಟು, ಕಡ್ಡಿಪೆಟ್ಟಿಗೆ ಆಹಾರಧಾನ್ಯ ಮುಂತಾದವುಗಳನ್ನು ಕೊಳ್ಳುವುದು ದುಸ್ಸಾಧ್ಯವಾಗಿದೆ.

ಕರಾಚಿಯಲ್ಲಿ ಭಾಷಣ ಮಾಡುತ್ತ ಚೌಧರಿ ಖಲಿಕುಜಮಾನರು ಹಿಂದುಸ್ಥಾನದಲ್ಲಿಯ ಮುಸಲ್ಮಾನರು ಪಂಚಮದಲದವರೆಂದು ಹೇಳುತ್ತಿರುವುದು ತಪ್ಪು; ಅದು ಕೇವಲ ಸ್ವಾರ್ಥಸಾಧಕರಗುಲ್ಲು; ಎರಡೂ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾಕರಿದ್ದಲ್ಲಿ ಯುದ್ಧವಾಗುವ ಸಂಭವವನ್ನು ತಪ್ಪಿಸಿದಂತಾಗುವುದು ಎಂದು ಮುಂತಾಗಿ ಹೇಳಿ ಮುಸಲ್ಮಾನರನ್ನು ಹಿಂದಕ್ಕೆ ಕರೆಸಿಕೊಳ್ಳಲು ಕಾಂಗ್ರೆಸ ಮಂತ್ರಿಗಳು ಕೇಳುತ್ತಿರುವುದನ್ನು ಖಂಡಿಸಿದರು.

ಪಾಕಿಸ್ಥಾನದ ಮುಖ್ಯ ಪ್ರಧಾನರಾದ ಲಿಯಾಖತ ಅಲ್ಲಿಖಾನರು ತಾ. ೧೪ ರಲ್ಲಿ ಪಾಕಿಸ್ಥಾನ ಮಂತ್ರಿಮಂಡಲದ ವಿಶೇಷ ಸಮಿತಿಯ ೨ ಸಭೆಗಳಿಗೆ ಉಪಸ್ಥಿತರಿದ್ದು ನಿರಾಶ್ರಿತರ ಪುನರ್ನಿಯೋಜನೆ ಮತ್ತು ನಿರಾಶ್ರಿತರ ದ್ವಿಮಾರ್ಗ ಸ್ಥಳಾಂತರ ಚರ್ಚೆಯಲ್ಲಿ ಭಾಗವಹಿಸಿದ್ದರು. ಈ ಸಭೆಗಳಿಗೆ ಪ. ಪಂಜಾಬಿನ ಗವರ್ನರರಾದ ಮುಡಿಯವರೂ ಬಂದಿದ್ದರು.

ಸುಹ್ರವರ್ದಿಯವರು ತಾ ೧೩ ರಲ್ಲಿ ಲಾಹೋರಿಂದ ಕರಾಚಿಗೆ ಬಂದು ಲಿಯಾಖತರ ಭೆಟ್ಟಿತೆಗೆದುಕೊಂಡು ಮಹಾತ್ಮಾ ಗಾಂಧಿ ಹಾಗೂ ಹಿಂದುಸ್ಥಾನ ಸರಕಾರದ ಮಂತ್ರಿಗಳೊಡನೆ ನಡೆಸಿದ ಮಾತುಕತೆಯನ್ನು ನಿವೇದಿಸಿದರು.

ಪಶ್ಚಿಮ ಪಂಜಾಬ

೧೦ ಸಾವಿರ ಸಶಸ್ತ್ರ ಜನರು ಸೆಪ್ಟಂಬರ ೩೦ ಹಾಗೂ ಅಕ್ಟೋಬರ ೧ ಕ್ಕೆ ಪಶ್ಚಿಮ ಪಂಜಾಬಿನ ಮಿಯಾನವಾಲಿಯ ಮೇಲೆ ದಾಳಿ ಮಾಡಿ ೪೦೦೦ ನಿರಾಶ್ರಿತರನ್ನು ಕೊಂದು ೭೦೦ ಹುಡುಗಿಯರನ್ನು ಅಪಹರಿಸಿ ಕೊಂಡು ಹೋಗಿರುವುದಾಗಿ ಸುದ್ದಿ ಬಂದಿದೆ.

ಪಾಕಿಸ್ಥಾನದ ಮುಸಲ್ಮಾನರು ತಮ್ಮ ವರ್ತನೆಯನ್ನು ಸುಧಾರಿಸಿಕೊಂಡು ಅಲ್ಪಸಂಖ್ಯಾಕರಿಗೆ ಸಂರಕ್ಷಣೆ ಕೊಡದಿದ್ದರೆ ಪಾಕಿಸ್ಥಾನದ ಭವಿಷ್ಯವನ್ನು ಗಂಡಾಂತರದಲ್ಲಿ ನೂಕುವಿರೆಂದು ಪಾಕಿಸ್ಥಾನದ ಆಹಾರ ಮಂತ್ರಿಗಳಾದ ಗಜನಫರ ಅಲ್ಲಿಖಾನರು ರಾವಲಪಿಂಡಿಯ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು.


ಪಾಕಿಸ್ಥಾನದ ಮುಖ್ಯಮಂತ್ರಿಗಳಾದ ಲಿಯಾಖತ ಅಲ್ಲಿಖಾನರು ಒಂದು ಪ್ರಕಟನೆ ಹೊರಡಿಸಿ ಪೂರ್ವ ಪಂಜಾಬೇತರ ಮುಸಲ್ಮಾನರಿಗೆ ಪಾಕಿಸ್ಥಾನದಲ್ಲಿ ಸ್ಥಾನವಿಲ್ಲೆಂಬ ತಮ್ಮ ಹೇಳಿಕೆಯನ್ನು ಸ್ಪಷ್ಟಪಡಿಸಿದ್ದಾರೆ.

ಪೂರ್ವ ಬಂಗಾಲ

ಪ. ಪಂಜಾಬಿನಲ್ಲಿ ಹಿಂದು ಶೀಖರಿಗೆ ಆದುದೇ ತಮಗಾಗಬಹುದೆಂದು ಪೂರ್ವ ಮತ್ತು ಉತ್ತರ ಬಂಗಾಲದ ಹಿಂದುಗಳು ಪಶ್ಚಿಮ ಬಂಗಾಲಕ್ಕೆ ಸಾಗುತ್ತಿದ್ದಾರೆ. ಇದರಲ್ಲಿ ಅವರದು ಎಳ್ಳಷ್ಟೂ ತಪ್ಪಿಲ್ಲ. ಪೂರ್ವ ಬಂಗಾಲದಲ್ಲಿ ತಮ್ಮ ಜೀವಿತ ಆಸ್ತಿಪಾಸ್ತಿ ಮತ್ತು ಮಾನಿನಿಯರ ಮಾನ ಇವು ಸುರಕ್ಷಿತವಿಲ್ಲವೆಂದು ಹಿಂದುಗಳು ಮನಗಂಡಿದ್ದಾರೆಂದು ಪಾಕಿಸ್ಥಾನ ಘಟನಾ ಸಮಿತಿಯ ಕಾಂಗ್ರೆಸಪಕ್ಷದ ಮುಖಂಡರಾದ ಶ್ರೀ ಕಿರಣ ಶಂಕರರಾಯರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಗಂಗಾ ಅಥವಾ ಭಾಗೀರಥಿಯ ಉಗಮ

ಲೇ:— ಶ್ರೀ ಕೃ. ನಾ. ಗೋಸಾವಿ, ಭಾರತ ಸಂಚಾರಿ



(ಮೇಜರ ಪೋಸ್ಟ್ ಮಾಸ್ಟರ್ ಅಫೀಸರ—ಇನ್‌ಚೀಫ, ಸರ್ವೆಅಫ್ ಇಂಡಿಯಾ ಇವರ ಪತ್ರದ ಸಾರವು)

"ದೇವಪ್ರಯಾಗದಲ್ಲಿ ಮುಖ್ಯ (ಗಂಗಾ) ನದಿಯು ಭಾಗೀರಥಿ ಮತ್ತು ಅಲಕನಂದಾ ಎಂದು ಇಬ್ಭಾಗವಾಗಿದೆ. ಇವು ಗೋಮುಖ ಮತ್ತು ಬದರಿಗಳ ಕಡೆಯಿಂದ ಹರಿದು ಬಂದು ದೇವಪ್ರಯಾಗದಲ್ಲಿ ಸಂಗಮವಾಗಿವೆ. ದೇವಪ್ರಯಾಗದ ಮೇಲ್ಭಾಗದಲ್ಲಿರುವ ಯಾವತ್ತೂ ಶಾಖೆಗಳಿಗೂ ಗಢವಾಲೀ ಜನರು 'ಗಂಗೆ' ಎಂದೇ ಅನ್ನುತ್ತಾರೆ. ಒಂದು ವೇಳೆ ನಾವು ಭೂಗೋಲಿಕ ದೃಷ್ಟಿಯಿಂದ ವಿಚಾರ ಮಾಡಿದರೆ ಎರಡೂ ಶಾಖೆಗಳು ಗಂಗೆಯ ಉಗಮಸ್ಥಾನದಿಂದಲೇ ಬಂದಿವೆ ಎಂದು ಹೇಳಬಹುದು. ಯಾಕಂದರೆ ಎರಡೂ ನದಿಗಳ ಉದ್ದಳತೆಯಲ್ಲಿಯೂ (ಹರಿಯುವ ಭಾಗ) ನೀರಿನ ಪೂರೈಕೆಯಲ್ಲಿಯೂ (ಸುಮಾರು ಅಷ್ಟೇ ಇದೆ.) ವಿಶೇಷ ಅಂತರವಿಲ್ಲ. ಆದ್ದರಿಂದ ಯಾವದೊಂದಕ್ಕೇ ಗಂಗೆಯ ಉಗಮ ಸ್ಥಾನವೆನ್ನಲು ಬರುವಂತಿಲ್ಲ.

ಆದರೂ ಈ ಪ್ರದೇಶದೊಳಗಿನ ಎಲ್ಲ ನದಿಗಳಲ್ಲಿ ಭಾಗೀರಥಿಯೇ ಮುಖ್ಯವೆಂದು ಎಣಿಸಲ್ಪಡುತ್ತದೆ. ಇದು 'ಹರಸಿಲ'ವೆಂಬ ಸ್ಥಳದಿಂದ ಕೆಲವು ಮೈಲುಗಳ ವರೆಗೆ (ಭೂಭಾಗವನ್ನು) ಕೊರೆಯುತ್ತ ಬಂದಿದೆ. ಭೈರೊಘಾಟದಲ್ಲಿ (ಮುಂದೆ) ಉತ್ತರ ಕಡೆಯಿಂದ 'ಜಡಗಂಗಾ' ಎಂಬ ನದಿಯು ಇದರಲ್ಲಿ ಬಂದು ಕೂಡುತ್ತದೆ. ಇದು ಭಾಗೀರಥಿಯ ದುಪ್ಪಟ್ಟು ನೀರನ್ನು ತರುತ್ತದೆ. (ಎರಡು ಪಟ್ಟು ದೊಡ್ಡದಿದೆ) ಜಡಗಂಗಾ ಮತ್ತು ಅದರ ಸಹಾಯಕ 'ಮೀನಾಗಡ' ಎಂಬ ನದಿಗಳ ಉಗಮವು ಹಿಮಾಲಯದ ಮುಖ್ಯ ಶ್ರೇಣಿ(ಅದಕ್ಕೆ ಜಾಸ್ಕರ ಶ್ರೇಣಿ ಎಂತಲೂ ಅನ್ನುತ್ತಾರೆ.) ಯಲ್ಲಿದೆ. ಸತಲಜ ನದಿಯ ಕೊಳ್ಳವೂ ಈ ಶಿಖರದ (ಶ್ರೇಣಿಯ) ಈಶಾನ್ಯ ದಿಕ್ಕಿನಲ್ಲಿದೆ. ಗಂಗೋತ್ರಿ ಹಿಮನದಿಯಿಂದ (ಗ್ಲೇಶಿಯರ) ಹೊರಟ ಭಾಗೀರಥಿಯು ಗೋಮುಖದಲ್ಲಿ ಪ್ರಕಟವಾಗಿದೆ. ದಾಟಲಿಕ್ಕು ಸಹ ಬಾರದಷ್ಟು ಭಯಂಕರವಾಗಿ (ವೇಗದಿಂದ) ಹರಿಯುತ್ತದೆ. (ಧುಮುಕುತ್ತದೆ. ; ಅಂದ ಮೇಲೆ ಇದು ಉಗಮವಂತೂ ಅಲ್ಲ.)

ಗೋಮುಖದಿಂದ ಮೇಲ್ಪದಿಗೆ (ಹೋದರೆ) ಈ ನದಿಯು ಗ್ಲೇಶಿಯರದ ಕೆಳಭಾಗದಲ್ಲಿ ಬಹಳ ದೂರದ ವರೆಗೆ ಹರಿಯುತ್ತಿರುತ್ತದೆ. ಗೋಮುಖದಿಂದ (ಮುಂದೆ) ಎರಡು ಮೈಲು ದೂರದಲ್ಲಿ ಉತ್ತರದಿಂದ ಒಂದು ದೊಡ್ಡ ಧಾರೆಯು ಹರಿದು ಬಂದು(ಉತ್ತರದ ಕಡೆಯಿಂದ) ಹಿಮ ನದಿಯಲ್ಲಿ ಕೂಡುತ್ತದೆ.

ಇದರ ಉಗಮವು ಎರಡು ಮೂರು ಮೈಲು ದೂರದಲ್ಲಿರುವ ಒಂದು ಘಟ್ಟದ ಸಣ್ಣ ಹಿಮನದಿಯಲ್ಲಿದೆ. (ಈ ನದಿಗಳು ಎಷ್ಟೋ ಕಡೆಯಲ್ಲಿ ಹಿಮದಿಂದ ಮುಚ್ಚಿ ಒಳಗಡೆಗೇ ಹರಿಯುತ್ತಿರುತ್ತದೆ.

ಗಂಗೋತ್ರಿ ಹಿಮನದಿಯು (ಗ್ಲೇಶಿಯರ) ೧೫ ಮೈಲು ಉದ್ದವಾಗಿದೆ. ಮತ್ತು ಅದರ ವಿಸ್ತಾರವಾದ ಹಿಮದ ಆಗರವು(ಇದರಲ್ಲಿ ಕೇದಾರನಾಥದ ಉತ್ತರದ ಇಳುಕಲಿನ ಭಾಗವೂ ಕೂಡಿದೆ) ಇದರ ರಿಕ್ತಭಾಗವನ್ನು ತುಂಬುತ್ತಿರುತ್ತವೆ. (ಅಂದರೆ ಗ್ಲೇಶಿಯರ ಅಥವಾ ಹಿಮನದಿಗಳು ಸಾವಕಾಶವಾಗಿ ಜರೆಯುತ್ತ ಹರಿಯುತ್ತಿರುತ್ತವೆ.)

'ಚೌಖಂಬಾ' ಎಂಬ ಸುಂದರ ಹಿಮ ಶಿಖರಗಳು ಈ ಹಿಮನದಿಯ ಮೇಲ್ಭಾಗದಲ್ಲಿಯೇ ಇವೆ. ಗೋಮುಖದಿಂದ ಸುಮಾರು ೪ ಮೈಲು ಮೇಲ್ಪದಿಗೆ ಒಂದು ದೊಡ್ಡ ಹಿಮನದಿಯು ಗಂಗೋತ್ರಿ ಹಿಮನದಿಗೆ ಬಂದು(ಮೇಲ್ಪದಿಯಿಂದ)ಕೂಡುತ್ತದೆ. ಇದು ಹರಿದು ಬರುವಾಗ ಹಿಮನದಿಗಳ ಅಂಚುಗಳೊಡೆದು ಹಿಮಕಣಗಳಲ್ಲಿ ಬಣ್ಣ ಕಾಣುತ್ತವೆ. ನಾಲ್ಕು ಪ್ರಕಾರದ ಭಿನ್ನ ತರದ ಬಣ್ಣಗಳು ಬರ್ಫಿನ ಕಣಗಳೊಳಗಿಂದ ಹೊರಬಿದ್ದು ಇದಕ್ಕೆ ಶೋಭೆಯನ್ನುಂಟು ಮಾಡುತ್ತದೆ. (ಇಂದ್ರಧನು) ಆದ್ದರಿಂದ ಇದಕ್ಕೆ 'ಚತುರಂಗೀ ಬಾಮಕ' ಎಂದು ಹೆಸರು ಬಿದ್ದಿದೆ. ಚೌಖಂಬಾದ ಉತ್ತರದಲ್ಲಿ ಭಾಗೀರಥಿ ಮತ್ತು ಅಲಕನಂದಾ ನದಿಗಳ ಮಧ್ಯ (ಜಲವಿಭಾಗದಲ್ಲಿ) ನೀರನ್ನು ಬೇರ್ಪಡಿಸುವ ಭಾಗದಲ್ಲಿ ಈ ಹಿಮನದಿಯು ಹಿಮಾಚ್ಛಾದಿತ ಉನ್ನತ ಕ್ಷೇತ್ರಗಳಿಂದ ಇಳಿದು ಬರುವದು. ಕಂಡು ಬರುತ್ತದೆ. ಹಿಮನದಿಗಳಲ್ಲಿ ಕೆಲವು ಕಿಂದಿಗಳಿಂದ ನೀರೂ ಚಿಮ್ಮಿ ಬರುತ್ತದೆ.

ಇದರಿಂದ ಭಾಗೀರಥಿ ಮತ್ತು ಅದರ ಸಹಾಯಕ ನದಿಗಳ ಉಗಮವು ಹಿಮಾಲಯದ ಮುಖ್ಯ ಶ್ರೇಣಿಯಲ್ಲಿದ್ದು, ಮಧ್ಯದಲ್ಲಿರುವ ಈ ಉನ್ನತ ಗಿರಿ ಶಿಖರಗಳನ್ನು ದಾಟಿ ತಿಬೇಟಿದ ತಪ್ಪಲ (ಕೆಳಭಾಗ ೧೪೦೦೦ ಅಡಿ) ದಿಂದ ಯಾವ ನದಿಗಳದೂ ಅದಕ್ಕೆ ಸಂಬಂಧವಿಲ್ಲವೆಂದು ಹೇಳಲಡ್ಡಿ ಇಲ್ಲ"

ಈ ಮೇಲಿನ ಸಂಶೋಧಕರ ಪತ್ರದ ಸಾರದಿಂದ ನಮಗೆ ಬೇಕಾದ ಕೆಲ ಸಂಗತಿಗಳೇನೋ ಗೊತ್ತಾದಂತಾದವು. ಆದರೆ ಇನ್ನೂ ಪೂರ್ಣ ಶೋಧವಾಗಿಲ್ಲವೆಂದು 'ಭೂಗೋಲ'ದ ಸಂಪಾದಕರೇ ಒಪ್ಪಿದ್ದಾರೆ. ಈ ಬಗ್ಗೆ ಯಾರಿಗಾದರೂ ಹೆಚ್ಚಿನ ಸಂಗತಿಗಳು ತಿಳಿದು ಬಂದಿದ್ದರೆ ಅವನ್ನೆಲ್ಲ ಸಂಗ್ರಹಿಸಿ ಪ್ರಸಿದ್ಧಿಸಲು ಅಡ್ಡಿಯಿಲ್ಲ. ಅಂತೂ ನಮ್ಮ ಶಿಕ್ಷಣ ಖಾತೆಯವರು (ಟೆಕ್ಸ್ಟ ಬುಕ್ ಕಮಿಟಿ) ಇನ್ನು ಮುಂದೆ ಸಂಶೋಧ ಮಾಡಿ ಅಥವಾ ಮಾಡಿಸಿ ನಿಜವಾದ ಜ್ಞಾನ ಮಾಡಿಕೊಡುವ ಗ್ರಂಥಗಳನ್ನೇ ಬರೆಯಿಸಿ ಮಂಜೂರ ಮಾಡಬೇಕಾಗಿ ಬೇಡಿಕೆ. ಅಂದರೆ ಸ್ವತಂತ್ರ ಭಾರತದಲ್ಲಿ ಅವು ಬಹು ದಿನ ಬಾಳಿ, ಬದುಕಿ ಭಾರತದ ಹೆಸರನ್ನು ಬೆಳಗುವಂತಾಗಲೆಂದು ಕೋರುತ್ತೇನೆ.

ಹುಬ್ಬಳ್ಳಿಯಲ್ಲಿ ಅರ್ಥಸಚಿವರು ವಾಣಿಜ್ಯ ಕಾಲೇಜಿನ ಉದ್ಘಾಟನೆ

ಮುಂಬಯಿ ಸರಕಾರದ ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೆಹತಾರವರು ತಾ೧೧ ನೇ ದಿವಸ ಹುಬ್ಬಳ್ಳಿಗೆ ಆಗಮಿಸಿ ಜಗದ್ಗುರು ಗಂಗಾಧರ ವಾಣಿಜ್ಯ ಕಾಲೇಜಿನ ಉದ್ಘಾಟನ ಜರುಗಿಸಿದರು. ಪ್ರಾರಂಭದಲ್ಲಿ ಶ್ರೀ ಹುಲಕೋಟಿಯವರು ಕರ್ನಾಟಕ ಲಿಂಗಾಯತ ಎಜುಕೇಶನಲ್ ಸೊಸಾಯಿಟಿ ಪರವಾಗಿ ಮಾನಪತ್ರ ಸಮರ್ಪಿಸಿ ಶ್ರೀ ಜಗದ್ಗುರು ಮೂರುಸಾವಿರ ಮಠದ ಸ್ವಾಮಿಗಳು ಹಾಗು ಕರ್ನಾಟಕ ವಣಿಕ ಸಂಘದವರು ಕಾಲೇಜಕ್ಕೆ ಒಂದೊಂದು ಲಕ್ಷ ರೂಪಾಯಿ ಕೊಟ್ಟದ್ದರಿಂದ ಕಾಲೇಜನ್ನು ತೆಗೆಯಲು ಸಾಧ್ಯವಾಯಿತೆಂದೂ ಶ್ರೀಮಂತ ಭೋಮರಡ್ಡಿಯವರು ಪಾಲಿ ಟೆಕ್ನಿಕ ಶಾಲೆಗೆ ೩ ಲಕ್ಷ ರೂಪಾಯಿ ಕೊಟ್ಟದ್ದರಿಂದ ಅದನ್ನು ಪ್ರಾರಂಭಿಸುವದು ಶಕ್ಯವಾಯಿತೆಂದೂ ಹೇಳಿದರು. ಅನಂತರ ಶ್ರೀ ಕಟ್ಟಿಮನಿಯವರು ಸಮಾರಂಭಕ್ಕೆ ಬಂದ ಶುಭ ಸಂದೇಶಗಳನ್ನೋದಿ ಕಾಲೇಜದಲ್ಲಿ ಈಗ ೧೨೦ ವಿದ್ಯಾರ್ಥಿಗಳಿರುವರೆಂದೂ ಅವರಲ್ಲಿ ಕೆಲವರು ತಿರುವಾಂಕೂರ ಮೈಸೂರ ಮದ್ರಾಸಗಳಿಂದ ಬಂದಿರುವರೆಂದೂ ಮುಂದಿನವರ್ಷ ಬಿ ಕಾಂ ವರ್ಗ ತೆಗೆಯಲು ಅಪ್ಪಣೆಯಾಗಿದೆಂದೂ ತಿಳಿಸಿದರು.

ಆ ಮೇಲೆ ಮಂತ್ರಿಗಳು ಉದ್ಘಾಟನ ಭಾಷಣ ಪ್ರಾರಂಭಿಸಿ ವಾಣಿಜ್ಯವಿದ್ಯೆಯು ಹಣ ಗಳಿಸುವ ವಿದ್ಯೆಯೆಂದೆನಿಸಿಕೊಂಡರೂ ಸಮಾಜದ ಸಾಂಸ್ಕೃತಿಕ ಜೀವನದಿಂದ ಅದೇನೂ ಬೇರೆ ಇರುವದಿಲ್ಲೆಂದೂ ಈ ವರೆಗೆ ಶಿಕ್ಷಣಕ್ಕೂ ಜೀವನಕ್ಕೂ ಸಂಬಂಧವಿರದಿದ್ದರೂ ಇನ್ನು ಮುಂದೆ ಹಾಗಾಗುವದಿಲ್ಲೆಂದೂ ಈಗಾಗಲೆ ಸರಕಾರವು ಮೂಲ ಶಿಕ್ಷಣ ಕಡೆಗೆ ಲಕ್ಷ ಹೊರಳಿಸಿದೆಂದೂ ಜೀವನದಿಂದ ಸತ್ವ ಪಡೆಯುವ ಶಿಕ್ಷಣವೇ ನಿಜವಾದ ಶಿಕ್ಷಣವೆಂದೂ ಹೇಳಿದರು. ಸರಕಾರವು ಇನ್ನು ಮೇಲೆ ಉದ್ಯೋಗಗಳನ್ನು ರಾಷ್ಟ್ರೀಕರಿಸುವದು. ಅವುಗಳನ್ನು ನಡೆಸಲು ಹೊಣೆಗಾರ ವಿದ್ವಜ್ಜನರು ಬೇಕು. ಅಂಥವರನ್ನು ತರಬೇತುಗೊಳಿಸಬೇಕು. ಕಾರಣ ವಾಣಿಜ್ಯ ವಿದ್ಯೆಯನ್ನು ಹಣ ಗಳಿಸುವ ವಿದ್ಯೆಯನ್ನಾಗಿ ಮಾಡದೆ ಸೇವಾಬುದ್ಧಿ ಸಂಸ್ಕೃತಿ ಆಧ್ಯಾತ್ಮಿಕತೆ ವಿದ್ಯೆಯನ್ನಾಗಿ ಮಾಡಿರಿ ಎಂದು ಅವರು ತಿಳಿಸಿದರು.

ಅವರ ಭಾಷಣದ ನಂತರ ಶ್ರೀ ಕಟ್ಟಿ ಮನಿಯವರು ಗದಗಿನ ಶ್ರೀ ಬಸರಿ ಗಿಡದ ವೀರಪ್ಪನವರು ಪಾಲಿಟೆಕ್ನಿಕ ಶಾಲೆಗೆ ೫೦ ಸಾವಿರ ರೂಪಾಯಿ ವಾದಾ ನವಿತ್ತು ೧೦ ಸಾವಿರ ರೂಪಾಯಿ ರೋಖ ಕೊಟ್ಟದ್ದನ್ನು ಜಾಹೀರ ಮಾಡಿದರು. ಸಂಸ್ಥೆಯ ಪರವಾಗಿ ಶ್ರಿ. ವೀರಪ್ಪನವರಿಗಿ ಹೂಮಾಲೆ ಹಾಕಿ ಕೃತಜ್ಞತೆ ವ್ಯಕ್ತ ಮಾಡಲಾಯಿತು.

ಮಂತ್ರಿಗಳು ಅಲ್ಲಿಂದ ಪಾಲಿಟೆಕ್ನಿಕ್ ಶಾಲೆಯನ್ನು ಸಂದರ್ಶಿಸಿ, ನವಯುಗ ಕಚೇರಿ, ಗುಜರಾತಿ ಸಮಾಜ, ಏಶಿಯನ್ ಬ್ರಶ್ ಫ್ಯಾಕ್ಟರಿಗಳಿಗೆ ಭೆಟ್ಟಿಕೊಟ್ಟು ಕರ್ನಾಟಕ ಪ್ರೆಸ್ಸಿನಲ್ಲಿ ಕಾಂಗ್ರೆಸ ಕಾರ್ಯಕರ್ತರನ್ನು ಕಂಡು ಮಹಾತ್ಮರ ಶಾಂತಿ ಮಂತ್ರವನ್ನು ಎಲ್ಲರೂ ಆಚರಣೆಯಲ್ಲಿ ತರಬೇಕೆಂದು ಉಪದೇಶಿಸಿ ರಾತ್ರಿ ದುರ್ಗದ ಬೈಲಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಸತ್ಯ ಹಾಗು ಅಹಿಂಸೆ ಕುರಿತು ಭಾಷಣ ಮಾಡಿದರು. ನೂಲುವ ಪಂದ್ಯಾಟ ಹಾಗು ಗಾಂಧಿಜಿಯವರ ಸಂಬಂಧದ ವಾಕ್‌ಸ್ಪರ್ಧೆಯಲ್ಲಿ ಮೆಚ್ಚುಪಡೆದವರಿಗೆ ಅವರ ಹಸ್ತದಿಂದ ಪಾರಿತೋಷಕ ಕೊಡಿಸಲಾಯಿತು.

(೪ ನೇ ಪುಟದಿಂದ)

ಸಾವಿರಗಟ್ಟಲೆ ಮುಸಲ್ಮಾನರು ಕೇವಲ ಉರ್ದು ಪತ್ರಿಕೆಗಳ ಪ್ರಚಾರದ ದೆಸೆಯಿಂದಾಗಿ ಕಿತ್ತಿದ್ದು ಬರುತ್ತಿರುವುದು ಈ ಮಾತಿಗೆ ಸಮರ್ಥನೆ ಕೊಡುತ್ತದೆ. ಜುನಾಗಡದೊಳಗೆ ೪ ನೂರು ಪಾಕಿಸ್ತಾನಿಗಳು ಬಂದು ಸಶಸ್ತ್ರರಾಗಿ ನಿಂತಿರುವುದು ಇದಕ್ಕೆ ಮತ್ತೊಂದು ದೃಷ್ಟಿಯಿಂದ ಪುಷ್ಟಿ ಕೊಡುತ್ತಿದೆಯೆಂದು ಯಾವ ಒಕ್ಕೂಟದ ಪ್ರಜೆಗೂ ಎನ್ನಿಸದಿರದು.

ಜುನಾಗಡದ ಕುತಂತ್ರ

ಪಾಕಿಸ್ತಾನದಿಂದ ಜುನಾಗಡಕ್ಕೆ ಪ್ರೇಕ್ಷಕರೆಂದು ಹೇಳಿಕೊಂಡು ಬಂದ ೪ ನೂರು ಜನಕ್ಕೆ ಮೇಲೆ ಸೂಚಿಸಿದಂತೆ ನವಾಬ ಸಾಹೇಬರು ತಕ್ಕ ಹಂಚಿ ತಮ್ಮ ಸೈನ್ಯಕ್ಕೆ ಸೇರಿಸಿಕೊಂಡಿದ್ದಾರೆ. ಇತ್ತ ಹಿಂದುಸ್ತಾನ ಸರಕಾರಕ್ಕೆ ಜನ ಮತಗಣನೆಯ ವಿಷಯದಲ್ಲಿ ಯಾವ ಉತ್ತರವೂ ಪಾಕಿಸ್ತಾನದಿಂದ ಬಂದಿಲ್ಲ. ಒಮ್ಮೆ ಜುನಾಗಡವು ಪಾಕಿಸ್ತಾನಕ್ಕೆ ಸೇರುವುದೆಂಬ ಸುದ್ದಿ ಹಬ್ಬಿದಾಗ ಅದನ್ನು ಸುಳ್ಳೆಂದು ಸಾರಿದ ನವಾಬರ ಸರಕಾರವಿಂದು ಪಾಕಿಸ್ತಾನದೊಡನೆ ಒಳಸಂಚು ನಡೆಸಿದ್ದನ್ನು ಕಂಡರೆ ಅದರ ಕುತಂತ್ರ ಇನ್ನೂ ಆಳವಾಗಿದೆಯೆಂದು ಹೇಳದಿರಲಾಗದು. ಒಕ್ಕೂಟದ ಸಂಸ್ಥಾನ ಖಾತೆಯ ಕಾರ್ಯದರ್ಶಿಗಳಾದ ರಾ. ಬ. ವಿ. ಪಿ. ಮೆನನ್ನರು ಕಳೆದ ತಿಂಗಳು ಜುನಾಗಡಕ್ಕೆ ಹೋದಾಗ ಮಂಗ್ರೋಲದ (ಜುನಾಗಡ ತನ್ನ ಮಾಂಡಲಿಕವೆಂದು ಹೇಳುವ ಒಂದು ಪಾಳೆಯ ಪಟ್ಟು) ಶೇಖರು ಜುನಾಗಡದಿಂದ ಸ್ವತಂತ್ರರಾಗಿ ಸೇರ್ಪಡೆ ಪತ್ರಕ್ಕೆ ಸಹಿ ಹಾಕಿದ ಒಂದೇ ಗಂಟೆಯ ನಂತರ ಜುನಾಗಡದ ಸೈನ್ಯ ಮಂಗ್ರೋಲಕ್ಕೆ ಮುತ್ತಿಗೆ ಹಾಕಿ ಪಾಕಿಸ್ತಾನ ಸೇರ್ಪಡೆ ಪತ್ರಕ್ಕೆ ಶೇಖರಿಂದ ಒತ್ತಾಯದಿಂದ ಅಂಕಿತ ತೆಗೆದುಕೊಂಡು ಹಿಂದುಸ್ತಾನಕ್ಕೆ ಅವರು ಸೇರಿದ್ದನ್ನು ರದ್ದುಗೊಳಿಸುವಂತೆ ದಿಲ್ಲಿಗೆ ತಂತಿ ಕಳುಹಲಾಯಿತು. ಅನಂತರ ಪಾಕಿಸ್ತಾನ ಸರಕಾರವು ಹಿಂದುಸ್ತಾನಕ್ಕೆ ಪತ್ರ ಬರೆದು ಮಂಗ್ರೋಲಿನ ಹಿಂದುಸ್ತಾನದಲ್ಲಿಯ ಸೇರ್ಪಡೆ ಅಕ್ರಮವೆಂದು ತಿಳಿಸಿತು. ೫೦ ಚಿಕ್ಕ ಪಾಳೆಯಪಟ್ಟುಗಳಿಂದೊಡಗೂಡಿದ ಬಾಬರಿವಾಡದ ಸೇರ್ಪಡೆಯ ಬಗ್ಗೂ ಪಾಕಿಸ್ತಾನವು ಅಕ್ಷೇಪವನ್ನೆತ್ತಿದೆ. ಈ ಮಧ್ಯೆ ಅಲ್ಲಿ ಸಮಾಜ ವಿಘಾತಕ ಚಟುವಟಿಕೆ ಪ್ರಾರಂಭವಾದ್ದರಿಂದ ಹಿಂದುಸ್ತಾನ ಸರಕಾರ ಸೈನ್ಯ ಕಳುಹಿತು. ಇದನ್ನೂ ಪಾಕಿಸ್ತಾನ ಆಕ್ಷೇಪಿಸಿದೆ. ಪರಿಸ್ಥಿತಿ ಹೀಗಿದ್ದರೂ ಹಿಂದುಸ್ತಾನ ಸರಕಾರವು ಮಾತ್ರ ಆಹಾರ ಮುಂತಾದವನ್ನು ಜುನಾಗಡಕ್ಕೆ ಕಳುಹುತ್ತಲೇ ಇದೆ. ಹಿಂದುಸ್ತಾನ ಸರಕಾರ ನಿರ್ವಹಿಸುತ್ತಿರುವ ಅಲ್ಲಿಯ ರೇಲ್ವೆಯನ್ನು ಸರದಾರ ಅಬ್ದುರರಾಬ ನಿಸ್ತಾರರರು ವಹಿಸಿಕೊಳ್ಳುವರೆಂದು ತಿಳಿಯುತ್ತದೆ. ಮತಗಣನೆ ಯಾವ ರೀತಿ ನಡೆಯಬೇಕೆಂಬುದರ ಬಗ್ಗೆ ಪಾಕಿಸ್ತಾನ ಹಿಂದುಸ್ತಾನದ ಅಭಿಪ್ರಾಯ ತಿಳಿದುಕೊಳ್ಳಲು ಅಪೇಕ್ಷಿಸುವುದೆಂದು ಪ್ರಸಿದ್ಧವಾಗಿದೆ; ಇಲ್ಲಿ ಮತಗಣನೆಯ ಮೇರೆಗೆ ಸೇರ್ಪಡೆ ನಿಶ್ಚಿತವಾದರೆ ಕಾಶ್ಮೀರದಲ್ಲೂ ಆರೀತಿ ನಡೆಯಬೇಕೆಂದು ಪಾಕಿಸ್ತಾನ ಕೇಳುವುದೆಂಬ ಸುದ್ದಿಯಿದೆ. ಒಟ್ಟಿನಮೇಲೆ ಅಳಿಯನ ಕುರುಡು ಬೆಳಗಾದೊಡನೆ ತಿಳಿಯಿತೆಂಬ ಮಾತಿನಂತೆ ಜುನಾಗಡದ ಗೋಮುಖ ವ್ಯಾಘ್ರತ್ವವು ಈಗ ಪೂರ ಬಯಲಾಯಿತು. ಪರಿಸ್ಥಿತಿ ಹೀಗೆ ಅನಿಯಂತ್ರಿತವಾಗಿದ್ದರೆ ಅಲ್ಲಿ ಘರ್ಷಣೆ ಉಂಟಾಗುವ ಸಂಭವವಿದೆಯೆಂದು, ಹೇಳಲಾಗುತ್ತದೆ. ಹಿಂದುಸ್ತಾನ ಸರಕಾರವು ಈ ಸಂದರ್ಭದಲ್ಲಿ ನ್ಯಾಯನಿಷ್ಠುರ ಧೋರಣ ತಳೆದು ತಕ್ಕ ಕ್ರಮ ಕೈಗೊಳ್ಳುವುದೆಂದು ಆಶಿಸಲಾಗಿದೆ.

ಮೈಸೂರಲ್ಲಿ ಹೊಣೆಗಾರ ಸರಕಾರ

ಜುಲೈ ೧ರಿಂದ ಹೊಸ ಘಟನೆ ಜಾರಿಯಲ್ಲಿ ಬರುವದು!!

ಮೈಸೂರು ಸಂಸ್ಥಾನ ಕಾಂಗ್ರೆಸ್ಸು ಕೂಡಲೆ ನಡುಗಾಲ ಮಂತ್ರಿಮಂಡಲವನ್ನು ರಚಿಸಲು ಸೂಚಿಸುವದೆಂದೂ ಹೊಸ ಮಂತ್ರಿಮಂಡಲವು ಮಹಾರಾಜರ ಕೃಪಾಛತ್ರದಲ್ಲಿ ಸಂಪೂರ್ಣ ಹೊಣೆಗಾರ ಸರಕಾರದ ತಳಹದಿ ಮೇಲೆ ಘಟನಾ ಮಸೂದೆ ಸಿದ್ಧಪಡಿಸಲು ಲೋಕನಿಯುಕ್ತ ಪ್ರತಿನಿಧಿಗಳನ್ನೊಳಗೊಂಡ ಘಟನಾ ಸಮಿತಿಯನ್ನು ಸ್ಥಾಪಿಸಲು ಕೂಡಲೆ ಉಪಾಯ ಕೈಕೊಳ್ಳುವದೆಂದೂ ೧೯೪೮ ಜುಲೈ ೧ ನೇ ತಾರೀಖಿಗೆ ಹೊಸ ಘಟನೆಯು ಜಾರಿಯಲ್ಲಿ ಬರುವದೆಂದೂ ಮೈಸೂರ ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ತಾ ೧೭ ರ ಸಂಜೆಯಲ್ಲಿ ಮೈಸೂರಲ್ಲಿ ಮಹಾರಾಜರ ಸಂದರ್ಶನ ತೆಗೆದುಕೊಂಡು ಬಂದ ನಂತರ ಪ್ರಚಂಡ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು.

ಅವರು ಹಾಗೆಯೇ ಮುಂದೆ ಸಾಗಿ ಪ್ರಚಲಿತ ರಾಜಕೀಯ ಮುದ್ದೆಗಳ ಮೇಲೆ ಸರಕಾರ ಹಾಗು ಸಂಸ್ಥಾನ ಕಾಂಗ್ರೆಸಗಳ ನಡುವೆ ಕೆಳಗಿನ ಒಡಂಬಡಿಕೆಯಾಗಿರುವದೆಂದು ತಿಳಿಸಿದರು.

(೧) ಸದ್ಯದ ಮಂತ್ರಿ ಮಂಡಳವು ವಿಸರ್ಜಿಸಲ್ಪಟ್ಟು ಅವರ ಸ್ಥಳದಲ್ಲಿ ಹೊಸ ಮಂತ್ರಿಮಂಡಳವು ಪ್ರಸ್ಥಾಪಿಸಲ್ಪಡುವದು. (೨) ಮಂತ್ರಿಮಂಡಳದ ರಚನೆಯ ಬಗ್ಗೆ ಸಂಸ್ಥಾನ ಕಾಂಗ್ರೆಸ್ಸು ಸೂಚನೆಗಳನ್ನು ಮಾಡುವದು. ಈ ಮಂತ್ರಿಮಂಡಳದಲ್ಲಿ ಕನಿಷ್ಠ ೯ ಜನರನ್ನು ತೆಗೆದುಕೊಳ್ಳಲಾಗುವದು, ಅವರಲ್ಲಿ ಕನಿಷ್ಠ ೬ ಜನರು ಕಾಂಗ್ರೆಸದವರಿರುವರು. ಮೂರಕ್ಕೆ ಕಡಿಮೆಯಿಲ್ಲದಷ್ಟು ಜನರನ್ನು ಕಾಂಗ್ರೆಸ್ಸಿನ ಹೊರಗಿನಿಂದ ಯೋಗ್ಯ ತೋರಬಹುದಾದ ಪಕ್ಷಗಳೊಡನೆ ವಿಚಾರ ವಿನಿಮಯ ಮಾಡಿ ಆರಿಸಲಾಗುವದು. (೩) ಮಂತ್ರಿಗಳು ದಿವಾಣರೊಂದಿಗೆ ಶಾಸನ ಸಭೆಯ ವಿಶ್ವಾಸಕ್ಕೆ ಪಾತ್ರರಾಗಿ ಕೆಲಸ ಮಾಡುವರು. (೪) ಮಂತ್ರಿಮಂಡಳದ ನಿರ್ಣಯವು ದಿವಾಣ ಹಾಗು ಮಂತ್ರಿಗಳಿಗೆ ಬಂಧಕವಿರುವದು. (೫) ಸಂಸ್ಥಾನ ಕಾಂಗ್ರೆಸ್ಸು ೯ ಮಂತ್ರಿಗಳಲ್ಲಿ ಮುಖ್ಯ ಮಂತ್ರಿಯನ್ನು ಆರಿಸಬಹುದು. (೬) ಹೊಸ ಮಂತ್ರಿಮಂಡಳವು ಮಹಾರಾಜರ ಕೃಪಾಛತ್ರದಲ್ಲಿ ಸಂಪೂರ್ಣ ಹೊಣೆಗಾರ ಸರಕಾರದ ತಳಹದಿಯಮೇಲೆ ಘಟನಾ ಮಸೂದೆ ಸಿದ್ಧಪಡಿಸಲು ಜನತೆಯ ಪ್ರತಿನಿಧಿಗಳನ್ನೊಳಗೊಂಡ ಘಟನಾ ಸಮಿತಿಯನ್ನು ಸ್ಥಾಪಿಸಲು ಕೂಡಲೇ ಉಪಾಯ ಕೈಕೊಳ್ಳುವದು. (೭) ಸಪ್ಟಂಬರ ೨೪ ಕ್ಕೆ ಹೊರಡಿಸಲ್ಪಟ್ಟ ಘೋಷಣೆಯಲ್ಲಿಯ ೧ ನೇ ಹಾಗು ೨ ನೇ ಪರಿಶಿಷ್ಟದಲ್ಲಿ ಯೋಗ್ಯ ಕಂಡ ಬದಲಾವಣೆಗಳನ್ನು ಮಾಡಲು ಘಟನಾ ಸಮಿತಿಯು ಸ್ವತಂತ್ರವಿರುವದು. (೮) ಹೊಸ ಘಟನೆಯು ೧೯೪೮ ನೇ ಜುಲೈ ೧ಕ್ಕೆ ಜಾರಿಯಲ್ಲಿ ಬರುವದು.

ಸತ್ಯಾಗ್ರಹದ ಅಪೂರ್ವ ವಿಜಯ

ಹೊಣೆಗಾರ ಸರಕಾರದ ಸ್ಥಾಪನೆಗಾಗಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ ೧ ತಿಂಗಳಲ್ಲಿಯೆ ಮೈಸೂರು ಸಂಸ್ಥಾನ ಕಾಂಗ್ರೆಸ್ಸು ಮೈಸೂರಿನ ಇತಿಹಾಸದಲ್ಲಿಯೆ ಅಪೂರ್ವ ವಿಜಯ ಸಂಪಾದಿಸಿದ್ದು, ಮಹಾರಾಜರು ತಮ್ಮ ಅರಮನೆಯಲ್ಲಿ ಜನತೆಯ ಪ್ರತಿನಿಧಿಗಳಿಗೆ ಸಂದರ್ಶನ ಕೊಟ್ಟ ದಿನವು ಮೈಸೂರಿನ ರಕ್ತಾಕ್ಷರ ದಿನವಾಗಿರುವದೆಂದು ಹೇಳಲು ಅಭ್ಯಂತರವಿಲ್ಲ. ಮಹಾರಾಜರ ಸಂದರ್ಶನಕ್ಕಾಗಿ ಮೈಸೂರಿಗೆ ಹೊರಟ ಧುರೀಣರನ್ನು ಬೀಳ್ಕೊಡಲು ಅರಳೆಪೇಟೆ ಕಾಂಗ್ರೆಸ ಭವನದಲ್ಲಿ ಸಾವಿರಾರು ಜನರು ನೆರೆದಿದ್ದರು. ಸರಿಯಾಗಿ ಮಧ್ಯಾನ್ಹ ೧ ಗಂಟೆಗೆ ಧುರೀಣರು ಮಹಾತ್ಮಾ ಗಾಂಧಿಯವರ ವರ್ಣ ಚಿತ್ರದ ಸಮ್ಮುಖದಲ್ಲಿ ಕಾರ್ಯಕರ್ತರ ಆಶೀರ್ವಾದ ಪಡೆದುಕೊಂಡು ಮೈಸೂರಿಗೆ ಹೊರಟರು. ಹಾದಿಯಲ್ಲಿ ಅನೇಕರು ಅವರನ್ನು ಸ್ವಾಗತಿಸಿದರು.

ಮೈಸೂರಲ್ಲಿ ಸ್ವಾಗತ

ಈ ಶುಭ ಪ್ರಸಂಗದ ನಿಮಿತ್ತ ಮೈಸೂರು ನಗರವು ತಳಿರು ತೋರಣಗಳಿಂದಲೂ ಧ್ವಜಗಳಿಂದಲೂ ಶೃಂಗರಿಸಲ್ಪಟ್ಟಿತು. ಧುರೀಣರು ಮೈಸೂರನ್ನು ಪ್ರವೇಶಿಸಿದ ಕೂಡಲೆ ಪ್ರಚಂಡ ಜನಸಮುದಾಯವು ಜಯ ಜಯಕಾರಗಳಿಂದ ಅವರನ್ನು ಸ್ವಾಗತಿಸಿತು. ಬಾಲ ಬಾಲಿಕೆಯರ ಉತ್ಸಾಹಕ್ಕಂತೂ ಮಿತಿಯೆ ಇದ್ದಿಲ್ಲ. ಅವರು ಕೈಯಲ್ಲಿ ಒಂದೀ ರಾಷ್ಟ್ರಧ್ವಜ ಹಿಡಿದುಕೊಂಡು ಪ್ರಚಂಡ ಮೆರವಣಿಗೆ ಹೊರಡಿಸಿಕೊಂಡು ಬಂದಿದ್ದರು. ಒಟ್ಟಿನಲ್ಲಿ 'ಧುರೀಣರಿಗೆ ರಾಜಯೋಗ್ಯ ಸನ್ಮಾನ ದೊರೆಯಿತು. ಸಂಜೆ ೬ ಗಂಟೆಗೆ ಅರಮನೆಯ ಮುಂದೆ ಪ್ರಚಂಡ ಜನಸಮ್ಮರ್ದ ಕೂಡಿತ್ತು. ಬಂದೆ.

ಸತ್ಯಾಗ್ರಹವು ಪ್ರಾರಂಭವಾದಂದಿನಿಂದ ಅರಮನೆಯ ಸಮೀಪದಲ್ಲಿ ಜನರಿಗೆ ಪ್ರವೇಶವಿದ್ದಿಲ್ಲವಾದ್ದರಿಂದ ಧುರೀಣರು ಮಹಾರಾಜರ ಭೆಟ್ಟಿ ತೆಗೆದುಕೊಳ್ಳುವದನ್ನು ನೋಡಲು ಜನರು ಕುತೂಹಲದಿಂದ ಸಮ್ಮಿಲಿತರಾಗಿದ್ದರು. ಮಹಾರಾಜರ ಭೆಟ್ಟಿಗೆ ಹೋಗುವಾಗ ಉದ್ದ ಕೋಟು, ಮುಂಡಾಸು ಹಾಗೂ ಉತ್ತರೀಯ ಧರಿಸಿಕೊಂಡು ಹೋಗಬೇಕೆಂಬ ಬಹುದಿನಗಳಿಂದ ಬಂದ ಸಂಪ್ರದಾಯವನ್ನು ಮುರಿದು ಧುರೀಣರು ಗಾಂಧಿ ಟೊಪ್ಪಿಗೆ ಹಾಗೂ ಕಾಂಗ್ರೆಸವೇಷವಾದ ನೆಹರೂಶರ್ಟ ಹಾಕಿಕೊಂಡು ಒಳಹೋದದ್ದು ನೋಡಿ ಅನೇಕರಿಗೆ ಆಶ್ಚರ್ಯವಾಯಿತು. ನಮ್ಮ ಕಾಂಗ್ರೆಸ್ಸಿಗರು ದಾಸ್ಯವನ್ನು ಕಡಿದೊಗೆದಿರುವರು. ಆದರೆ ರಾಜನಿಷ್ಠೆಯನ್ನಲ್ಲ ಎಂಬು ಇದರಿಂದ ವ್ಯಕ್ತವಾಗುವದೆಂದು ಜನರಲ್ಲಿ ಒಬ್ಬರು ಉದ್ಗಾರ ತೆಗೆದರು. ಅರಮನೆಯಹತ್ತಿರ ಧುರೀಣರ ಹಾದಿಯನ್ನೇ ನೋಡುತ್ತ ನಿಂತಿದ್ದ ದಿವಾಣರಾದ ಸರ್ ರಾಮಸ್ವಾಮಿ ಮುದಲಿಯಾರರು ಶ್ರೀ ಕೆ. ಸಿ. ರೆಡ್ಡಿಯವರನ್ನು ಅಂಬಾ ವಿಲಾಸಕ್ಕೆ ಕರೆದೊಯ್ದು ಮಹಾರಾಜರಿಗೆ ಪರಿಚಯ ಮಾಡಿಕೊಟ್ಟರು ಹಾಗೂ ಅಲ್ಲಿಂದ ಹಿಂತಿರುಗಿದರು. ಅನಂತರ ಸಂಸ್ಥಾನ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರು, ಹಿಂದುಸ್ತಾನ ಘಟನಾಸಮಿತಿಯ ಸಭಾಸದರಾದ ಶ್ರೀ ಎಸ್.ವಿ. ಕೃಷ್ಣಮೂರ್ತಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರೂ ಮೈಸೂರು ಕಾಂಗ್ರೆಸ ಕಾರ್ಯಸಮಿತಿಯ ಸದಸ್ಯರೂ ಆದ ಶ್ರೀ ಎಸ್. ನಿಜಲಿಂಗಪ್ಪ ಹಾಗೂ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿಯ ಕಾಂಗ್ರೆಸ ಪಕ್ಷದ ಧುರೀಣರೂ ಉಪ ಧುರೀಣರೂ ಒಳಗೆ ಬಂದರು. ಶ್ರೀ ಎಚ್. ಸಿ. ದಾಸಪ್ಪನವರು ಮಹಾರಾಜರವರಿಗೆ ಅವರ ಪರಿಚಯ ಮಾಡಿಕೊಟ್ಟರು. ಮಹಾರಾಜರು ಎಲ್ಲರ ಹಸ್ತಾಂದೋಲನ ಮಾಡಿದರು.

ಆ ಮೇಲೆ ಶ್ರೀ ಎಚ್. ಸಿ. ದಾಸಪ್ಪನವರು ಮೈಸೂರು ಜನತೆಯ ಪರವಾಗಿ ಸಿಂಹಾಸನಕ್ಕೆ ತಮ್ಮ ನಿಷ್ಠೆಯನ್ನು ದೃಢಪಡಿಸಿ ಒಡಂಬಡಿಕೆಯಿಂದ ತಾವು ಸಂಸ್ಥಾನದ ಇತಿಹಾಸದಲ್ಲಿ ಹೊಸ ಯುಗದಲ್ಲಿ ಕಾಲಿಟ್ಟಿರುವದಾಗಿ ತಿಳಿಸಿದರು. ಮಹಾರಾಜರು ಉತ್ತರಕೊಡುತ್ತ ಎಲ್ಲರ ಭೆಟ್ಟಿಯಾದ ಬಗ್ಗೆ ಸಂತೋಷ ಪ್ರದರ್ಶಿಸಿ, ಇನ್ನು ಹೆಚ್ಚಿನ ಹೊಣೆಗಾರಿಕೆ ನಿಮ್ಮ ಮೇಲೆ ಇರುವದೆಂದು ತಿಳಿಸಿ, ಎಲ್ಲರಿಗೂ ಸಮಾನ ಸಂಧಿ ಒದಗಿಸಿ ಕೊಟ್ಟು ಮೈಸೂರ ಅರಸರ ಪರಂಪರೆ ಕಾಯ್ದುಕೊಳ್ಳುವಿರಾಗಿ ವಿಶ್ವಾಸವಿದೆಯೆಂದು ಆಶೆ ವ್ಯಕ್ತ ಮಾಡಿದರು. ಹಾಗೆಯೆ ಅವರು ಮುಂದೆ ಸಾಗಿ ಸಂಸ್ಥಾನದ ಉಚ್ಚ ಪರಂಪರೆಗನುಗುಣವಾದ ಹಾಗೂ ಹಿಂದುಸ್ತಾನದ ಉಳಿದ ಸಂಸ್ಥಾನಗಳಿಗೆ ಆದರ್ಶವಾದ ಘಟನೆಯನ್ನು ಸಿದ್ಧಪಡಿಸಲಾಗುವದಾಗಿ ಆಶಿಸಿ ಸಂಸ್ಥಾನದಲ್ಲಿ ಸುಖಶಾಂತಿಗಳು ನೆಲೆಗೊಳ್ಳಲೆಂದು ಚಾಮುಂಡೇಶ್ವರಿ ದೇವಿಯ ಆಶೀರ್ವಾದ ಕೋರಿದರು.

ಈ ರೀತಿ ಮೈಸೂರ ಇತಿಹಾಸದಲ್ಲಿಯ ಒಂದು ಯುಗವು ಮುಗಿದು ಜನರು ಹಾಗೂ ಪ್ರಭುಗಳ ನಡುವೆ ಸೌಹಾರ್ದ ಹಾಗೂ ತಿಳಿವಳಿಕೆಯ ತಳಹದಿಯ ಮೇಲೆ ಇಂದಿನಿಂದ ಹೊಸಯುಗವು ಪ್ರಾರಂಭವಾದಂತಾಯಿತು.



ಮುಂಬಯಿ ಶೇರಪೇಟೆ

ತಾ, ೧೬—

ಟಾಟಾಸ್ಟೀಲ ಡೆಫರ್ಡ್ ರೂ. ೧೮೧೨ರಲ್ಲಿ ಪ್ರಾರಂಭಿಸಿ ೧೭೬೦ಕ್ಕಿಳಿದು ೧೭೮೫ ಕ್ಕೇರಿತು ಆದರೆ ಕಡೆಗೆ ೧೭೫೦ ಕ್ಕಿಳಿದು ೧೮೯೫ಕ್ಕೇರಿ ೧೭೮೫ರಲ್ಲಿ ಕೊನೆಗೊಂಡಿತು. ಸಾದಾ ರೂ. ೩೫೨ರಿಂದ ೩೬೩ ಕ್ಕೇರಿ ೩೫೮-೮-೦ ರಲ್ಲಿ ಮುಕ್ತಾಯಗೊಂಡಿತು. ಇಂಡಿಯನ್ ಕಬ್ಬಿಣ ೩೪—೧—೦ ರಿಂದ ೩೪-೬-೦ ಕ್ಕೇರಿತು. ಬಂಗಾಲ ಸ್ಟೀಲ ೨೬-೫-೦ ಕಿಳಗಿತ್ತು. ಟೆಕ್ಸ್‌ಟೈಲ್‌ನಲ್ಲಿ ಬಾಂಬೆ ಡಾಯಿಂಗ ೧೦೮೦ ರಲ್ಲಿ ತೆರೆದು ೧೦೬೨ ಕ್ಕಿಳಿದು ೧೧೦೫ ಕ್ಕೇರಿತ್ತು. ಕೊಹಿನೂರು ೫೪೮ ಕ್ಕಿಳಿದು ೫೫೯ ರಲ್ಲಿ ಕೊನೆಗೊಂಡಿತು. ಸ್ವದೇಶಿಯು ೫೭೮ ಕ್ಕಿಳಿದು ೫೯೧ ರಲ್ಲಿ ಮುಕ್ತಾಯವಾಯಿತು.

ಚಿನ್ನ ಬೆಳ್ಳಿ

ಚಿನ್ನ ಬೆಳ್ಳಿ ಬಜಾರದಲ್ಲಿಂದು ಕ್ರಮತಪ್ಪಿ ಬೆಲೆಯಲ್ಲಿ ಬಹಳ ತಾರತಮ್ಯವುಂಟಾಗಿದೆ. ಕೊಳ್ಳುವುದೂ ಮಾರುವುದೂ ಬಹಳ ಪರಿಮಾಣದಲ್ಲಿ ನಡೆದಿದೆ. ದಿವಾಳಿ ಬರಲಿರುವುದರಿಂದ ಸಿದ್ಧಬಂಗಾರಕ್ಕೆ ಹೆಚ್ಚಿನ ಬೇಡಿಕೆ ಬರಬಹುದೆಂದು ತರ್ಕಿಸಲಾಗಿದೆ.

ಫಾರ್ವರ್ಡ ಬಂಗಾರ ರೂ. ೯೭-೧೨-೦, ೯೮-೦-೦, ೯೫-೧೨-೦, ೯೭-೨-೦, ೯೬-೨-೦, ೯೭-೬-೦ ಯಲ್ಲಿ ಸುಳಿದಾಡಿತು. ಸಿದ್ಧ ಬಂಗಾರ ರೂ. ೯೮-೪-೦ ರಲ್ಲಿ ಪ್ರಾರಂಭವಾಗಿ ೯೫-೧೪-೦ ಕ್ಕಿಳಿದು ೯೭-೮-೦ ರಲ್ಲಿ ಕೊನೆಗಂಡಿತು. ಕೊಡುಕೊಳುಗೆಳ ಒಟ್ಟು ಮೊತ್ತ ೭ ಸಾವಿರ ತೊಲೆಗಳೆಂದು ಗೊತ್ತಾಗುತ್ತದೆ.

ಫಾರ್ವರ್ಡ್ ಬೆಳ್ಳಿ ರೂಪಾಯಿ ೧೫೪-೮-೦, ೧೫೧-೧೪-೦, ೧೫೪-೦-೦, ೧೫೨-೬-೦, ೧೫೩-೮-೦ ರಲ್ಲಿ ತಿರುಗಿತು. ೯೯೯ ರ ನಯದ ಸಿದ್ಧ ಬೆಳ್ಳಿ ರೂ. ೧೫೫-೮-೦ ರಲ್ಲಿ ಪ್ರಾರಂಭಿಸಿ ೧೫೩-೦-೦ ಕ್ಕಿಳಿದು ೧೫೪-೬-೦ ರಲ್ಲಿ ಕೊನೆಗೊಂಡಿತು. ಬಂದದ್ದು ೧೭೫ ಗಟ್ಟಿಗಳೆಂದೂ ಮಾರಾಟವಾದದ್ದು ೩೫ ಗಟ್ಟಿಗಳೆಂದೂ ತಿಳಿಯುತ್ತದೆ.

ಅರಳೆ

ತಾ. ೧೪

ಅರಳೆ ಪೇಟೆಯಲ್ಲಿಯೂ ಅನಿಶ್ಚಿತ ಸ್ಥಿತಿಯೇ ಇದೆ. ಐ. ಸಿ. ಸಿ. ಜನವರಿಯ ಸುಳಿದಾಟ ಹೀಗಿದೆ:— ರೂ. ೪೬೯-೮-೦, ೪೬೭-೮-೦; ೪೬೭, ೪೬೯, ೪೬೫-೮-೦, ೪೭೬-೮-೦. ಮುಕ್ತಾಯದಲ್ಲಿ ಐ. ಸಿ. ಸಿ. ಜನವರಿ ರೂ. ೪೬೬-೮-೦, ಮಾರ್ಚ ೪೭೦-೪-೦, ಮೇ ೪೭೭, ಜುಲೈ ೪೮೪-೮-೦, ಸೆಪ್ಟಂಬರ ೪೯೦.

೧೨-೧೩ ನೆಯ ತಾರೀಕುಗಳಲ್ಲಿ ಮುಂಬಯಿಗೆ ೨೨,೦೪೦ ಮೂಟೆ ಹತ್ತಿ ಬಂದಿದೆ. ಅದೂ ಸೇರಿ ಇಂದಿಗೆ ಮುಂಬಯಿಗೆ ಬಂದುದು ಒಟ್ಟು ೧,೭೩,೯೫೪ ಮೂಟೆಯಾಗುತ್ತದೆ. ೧೩-೧೪ ರಲ್ಲಿ ನಿರ್ಯಾತಕ್ಕೆ ನಿಗದಿಯಾದ ಹತ್ತಿ ೨೦ ಸಾವಿರ ಮೂಟೆ. ಅದರಲ್ಲಿ ೧೪ ಸಾವಿರ ಜಪಾನಿಗೆಂದು ತಿಳಿಯುತ್ತದೆ. ಸಿದ್ಧ ಹತ್ತಿ:— ಜರಿಲ್ಲ:

೨೦೦ ಮೂಟೆ ಅದಿಲಾಬಾದ ರೂ. ೫೧೫
೧೦೦ ” ಈತ್ವಲ್ ರೂ. ೩೫ (ಜನವರಿಯಲ್ಲಿ)
೧೦೦ ” ವಾರುದ ರೂ. ೩೮ –„–
೧೦೦ ” ಅಕೋಟ ರೂ. ೪೭೦ –„–
೫೦೦ ” ಅಮರಾವತಿ ರೂ, ೪೦೫—೪೫೦
೧೦೦ ” ಧಮನಗಾವ ರೂ. ೪೫೦
೧೦೦ ” ಹಳೆ ಔರಂಗಾಬಾದ ರೂ. ೪೩೫
೧೦೦ ” ಸೇಲು ರೂ.೪೪, ಊಮರಖಂಡ ೪೭೫. ದಿಗೂಸ ೪೮೧.

ಸಾಂಗಲಿ ಪೇಟೆ

ಅರಿಷಣ ಹೇರು	೧೦೦–೧೧೧
ಮೆಣಸಿನಕಾಯಿ ಹೇರು	೧೦೦–೧೫೦
ಶೇಂಗಾ ಖಂಡಿ	೧೧೦

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೨೮೦–೨೯೦
,,	೨	೨೬೫–೨೭೫
,,	೩	೨೫೦–೨೬೦
ಹಳೇ ಜಯವಂತ ಹತ್ತಿ		೨೯೫–೩೦೨
ಜಿನ ಹೊಸದು		೧೮೫–೧೯೫
ಜಿನ ಹಳೇದು		೨೦೦–೨೧೦
ಡಬಲರೋಲ		
ಸಾಜಿನ		೧೮೫–೧೯೦
ಅಪಲಂಡ ಹತ್ತಿ		೨೮೫–೨೯೫

ಸಂ. ದ. ಸಂಸ್ಥಾನದಲ್ಲಿ ಅರಸೊತ್ತಿಗೆಯ ಅಧಿಕಾರದ ಮತ್ತು ಪ್ರಜಾಪ್ರಭುತ್ವ ತತ್ವದ ಸಮನ್ವಯ ಮಾಡಲು ಯತ್ನಿಸಿದ್ದು ಸ್ವಾಗತಾರ್ಹವೆಂದು ದ. ಸಂ. ಪ್ರಾ. ಸಮಿತಿ ಮಹಾಮಂಡಲದಲ್ಲಿ ಅಧ್ಯಕ್ಷ ಡಾ. ಪಟ್ಟಾಭಿಯವರು ಸಾರಿದರು.

ದಕ್ಷಿಣ ಕನ್ನಡ

ಕಳೆದ ೩೦ ರಲ್ಲಿ ಗಂಗೊಳ್ಳಿಯ ಎಸ್. ವಿ. ಎಚ್. ಈ. ಶಾಲಾಂಗಣದಲ್ಲಿ ಶ್ರೀಯುತ ಎಚ್. ರಾಮಕೃಷ್ಣ ಕಾಮತರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ ಸದಸ್ಯರ ಸಭೆಸೇರಿ ಗಂಗೊಳ್ಳಿ ಕೇಂದ್ರ ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ತಾ. ೧ ರಿಂದ ಪಾನನಿರೋಧ ಕಾಯದೆ ಅಮಲಿನಲ್ಲಿ ಬಂದುದರನಿಮಿತ್ತ ಮೆರವಣಿಗೆ, ಧ್ವಜವಂದನೆ ಮುಂತಾದ ಸಂಭ್ರಮದ ಕಾರ್ಯಕಲಾಪಗಳನ್ನು ಕಾರ್ಕಳದ ಪೌರರು ವಿಜೃಂಭಣೆಯಿಂದ ನೆರವೇರಿಸಿದರು. ಸರಕಾರಿ ಅಧಿಕಾರಿಗಳ ಹಾಗೂ ಮಹಾಜನರ ಸ್ನೇಹ ಸಹಕಾರಗಳಿಂದ ಕಾರ್ಯ ಅತಿ ಯಶಸ್ವಿಯಾಗಿ ನಡೆಯಿತು.

ನೇರಳೆಕಟ್ಟೆಯಲ್ಲಿ ಸ್ಥಳೀಯ ಬೋರ್ಡು ಶಾಲೆಯಲ್ಲಿ ಗ್ರಾಮಾಧಿಕಾರಿಗಳೂ ಗ್ರಾಮಸ್ಥರೂ ಸೇರಿ ಮೆರವಣಿಗೆ ಮುಂತಾದ್ದನ್ನು ಹೊರಡಿಸಿ ಮದ್ಯಪಾನನಿಷೇಧ ದಿನಾಚರಣೆಯನ್ನು ಬಹು ಉತ್ಸಾಹದಿಂದ ಜರುಗಿಸಿದರು.

ಮಂಗಳೂರು ಜಿಲ್ಹಾ ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಶೆಟ್ಟರು ಕಾಂ. ಸದಸ್ಯರನ್ನಾಗಿ ಹೊಸಬರನ್ನು ತೆಗೆದುಕೊಳ್ಳುವ ಅವಧಿಯನ್ನು ಈ ತಿಂಗಳ ಅಂತ್ಯದವರೆಗೆ ಬೆಳೆಸಿರುವುದಾಗಿ ಪ್ರಕಟಿಸಿದ್ದಾರೆ.

ಕಳೆದ ತಾ. ೨೮ ರಲ್ಲಿ ಪಾಣೆ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಶ್ರೀ ಪಿ. ಮಾಧವಪಡಿಯಾರರ ಅಧ್ಯಕ್ಷತೆಯಲ್ಲಿ ಸೇರಿ ಅನೇಕ ಮುಖ್ಯಠರಾವುಗಳನ್ನು ಪಾಸುಮಾಡಿತೆಂದು ತಿಳಿಯುತ್ತದೆ.

ಪ್ರೊ. ಬೆನಗಲ್ ಸಂಜೀವರಾಯರು ತಾ. ೮ ರಲ್ಲಿ ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಭಾಷಣ ಮಾಡುತ್ತ ಶಿಕ್ಷಣವೆಂದರೇನೆಂಬುದನ್ನು ಚೆನ್ನಾಗಿ ವಿವರಿಸಿದರು.

ಮಂಗಳೂರು ತಾಲೂಕಿನ ಮೂರ್ತೆಯವ ಶಿಷ್ಟಮಂಡಲವೊಂದು ತಾ. ೬ ರಲ್ಲಿ ಜಿಲ್ಹಾ ಕಲೆಕ್ಟರ ಸೊಂಡರ್ಸ್ ಸಾಹೇಬರನ್ನು ಕಂಡು ಪಾನನಿರೋಧದ ಫಲವಾಗಿ ಉದ್ಯೋಗವಿಲ್ಲದಂತಾದ ಮೂರ್ತೆಯವರಿಗೆ ತಲಾ ರೂ. ೨೦೦ ನ್ನು ಕೊಡಬೇಕೆಂದು ಕೇಳಿಕೊಂಡಿತು.

ದ. ಕ. ಪಂಡಿತ ಸಂಘದ ವಾರ್ಷಿಕಾಧಿವೇಶನವು ತಾ. ೫ ರಲ್ಲಿ ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಪಂ. ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಪಂಡಿತರ ವೇತನದ ಬಗ್ಗೆ ಅಲಕ್ಷ್ಯಮಾಡಿದ ಮದ್ರಾಸ ಸರಕಾರದ ಧೋರಣೆಯನ್ನು ಕುರಿತು ವಿಷಾದ ವ್ಯಕ್ತಪಡಿಸುವುದು ಮುಂತಾದ ಕಾರ್ಯಗಳು ಜರುಗಿದವು.

ಪಾಂಡೇಶ್ವರದ ಹರಿಜನ ನವಚೇತನ ಸಭೆಯ ಕಡೆಯಿಂದ ತಾ. ೨ ರಲ್ಲಿ ಶ್ರೀ ಗೋಪಾಲ ಸತ್ಯನ್ನರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತ್ಯುತ್ಸವವು ಜರುಗಿತು.

ಸುರತ್ಕಲ್ಲಿನ ಗ್ರಾಮ ಯುವಕ ಸಂಘದವರು ಪ್ರಭಾತಫೇರಿ, ಧ್ವಜವಂದನ ಮುಂತಾದ ಕಾರ್ಯಕ್ರಮಗಳಿಂದ ಗಾಂಧಿ ಜಯಂತಿಯನ್ನು ಸಾಂಗವಾಗಿ ನೆರವೇರಿಸಿದರು.

ಮುಲ್ಕಿಯಲ್ಲಿ ಜರುಗಿದ ಗಾಂಧಿಜಯಂತಿಯಲ್ಲಿ ತಾ ೫ ರಂದು ಪ್ರಾದೇಶಿಕ ಭಾಷಾ ದಿನವು ಶ್ರೀ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಪಿ. ಕೆ. ನಾರಾಯಣ ಮೊದಲಾದವರು ಕರ್ನಾಟಕ ಏಕೀಕರಣ ಕನ್ನಡ ಸಾಹಿತ್ಯದ ಸಮಸ್ಯೆ ಇತ್ಯಾದಿ ವಿಷಯಗಳ ಮೇಲೆ ಭಾಷಣ ಮಾಡಿದರು.

ಉಡುಪಿ ಮುನಸಿಪಲ್ ಚುನಾವಣೆಯಲ್ಲಿ ಗುಂಡಿ ಬೈಲು ಮತ್ತು ವಾಡ ನಿಡಂಬೂರು ವಾರ್ಡುಗಳಿಂದ ಶ್ರೀಗಳಾದ ಕೇಶವ ಕಾಮತ್ ಉದ್ಯಾವರ ಮತ್ತು ಎಚ್. ಎನ್. ನಾಯಕ್ ರವರು ಬಹುಮತದಿಂದ ಆರಿಸಿಬಂದರು.

ಕರ್ನಾಟಕ ಪ್ರಾಂತ ರಚನೆ ಕೂಡಲೆ ಆಗತಕ್ಕದೆಂದೂ ಆ ಬಗ್ಗೆ ಪ್ರಾರಂಭದ ಕೆಲಸಗಳನ್ನು ಪ್ರಾರಂಭಿಸಬೇಕೆಂದೂ ಉಡುಪಿಯ ಸಂಯುಕ್ತ ಪತ್ರಿಕೋದ್ಯೋಗಿ ಸಂಘ, ಕರ್ನಾಟಕ ಸಂಘ ಮೊದಲಾದ ಸಂಸ್ಥೆಗಳ ಸಭೆಯಲ್ಲಿ ಪಾಸಾಯಿತು.

ಯೆಡ್ಮೆರು ಶಾಲಾ ರಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಎನ್. ರಾಜು ಶೆಟ್ಟರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು.

ಭೋರ ಪ್ರಜಾ ಸಭೆಯ ಕಾರ್ಯಕಾರೀ ಮಂಡಲವು ಪ್ರಜೆಗಳ ಅಭಿಪ್ರಾಯವಿಲ್ಲದೆ ಸಂಯುಕ್ತ ದಕ್ಷಿಣ ಸಂಸ್ಥಾನದ ಕರಾರು ಪತ್ರಕ್ಕೆ ಸಹಿ ಹಾಕಬಾರದೆಂದು ರಾಜಾಸಾಹೇಬರಿಗೆ ತಿಳಿಸಿದೆ.

ಹಿಂದುಸ್ತಾನದ ಕೈಗಾರಿಕೆಗಳಲ್ಲಿ ಕ್ರಾಂತಿ ಅವಶ್ಯಕ

(ಮೊದಲನೆ ಪುಟದಿಂದ)

ವುದು ನಿಂತುಹೋಗುವಂತಾಯಿತು. ಆದರೆ ಸರಕಾರದ ಧೋರಣವೇನೇ ಇರಲಿ, ಮುಂಬರುವ ಅನೇಕ ವರ್ಷಗಳವರೆಗೆ ವೈಯಕ್ತಿಕ ಉದ್ಯಮ ಸಾಹಸಗಳಿಗೆ ಸ್ಥಾನವಿದೆಯೆಂದು ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳು ಆಶ್ವಾಸನವಿತ್ತದ್ದು ಶ್ಲಾಘ್ಯವಾಗಿದೆ. ಆ ಪ್ರಕಾರ ಅವರು ಯಾವಯಾವ ಹೊಸ ಹೊಸ ರಚನಾತ್ಮಕ ಯೋಜನೆಗಳನ್ನು, ತಮ್ಮ ಧೋರಣವನ್ನು ಅಮಲಿನಲ್ಲಿ ತರಲು, ನಮ್ಮ ಮುಂದೆ ಇಡುವರೆಂಬುದನ್ನು ನಿರೀಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.

ವಿನಿಮಯ ಸೌಕರ್ಯ

ನಮ್ಮ ತೊಂದರೆಗಳ ಪಟ್ಟಿಯಲ್ಲಿ ವಿನಿಮಯ ಸೌಕರ್ಯದ ಅಭಾವವನ್ನೂ ಸೇರಿಸಬಹುದು. ೧೯೪೬—೪೭ ರಲ್ಲಿ ೧೫೦ ಕೋಟಿ ರೂಪಾಯಿಗಳ ಬೆಲೆಯ ಸಾಮಾನುಗಳನ್ನು ಕೊಳ್ಳಲು ಸರಕಾರದ ಅನುಮತಿಪತ್ರ ದೊರೆತಿದ್ದರೂ ಅವುಗಳಲ್ಲಿ ಅತ್ಯಂತ ಅಲ್ಪಾಂಶವನ್ನು ಮಾತ್ರ ಬಳಸಲು ಅನುಕೂಲದೊರಕಿತು. ಆದುದರಿಂದ ಪರರಾಷ್ಟ್ರಗಳಲ್ಲಿ ತಮ್ಮ ರಾಜತಂತ್ರಜ್ಞರನ್ನು ನಿಲ್ಲಿಸಿ ತನ್ಮೂಲಕ ನಮ್ಮ ಸರಕಾರದವರು ಧನವಿನಿಮಯ ಸೌಕರ್ಯವನ್ನು ನಮಗೆ ಒದಗಿಸಿಕೊಟ್ಟು ಉಪಕರಿಸುವುದು ಅತ್ಯಗತ್ಯವಾಗಿದೆ.

ರಕ್ಷಣೆ ಅವಶ್ಯಕ

ನಮ್ಮ ದೇಶದ ಕೈಗಾರಿಕೆಯತ್ತ ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಅದಿನ್ನೂ ಕೇವಲ ಬಾಲ್ಯಾವಸ್ಥೆಯಲ್ಲಿದೆಯೆಂದು ಹೇಳಬೇಕಾಗುತ್ತದೆ. ಇನ್ನು ಬಹಳ ಕಾಲದವರೆಗೆ ನಮ್ಮ ಸರಕಾರ ಅದಕ್ಕೆ ರಕ್ಷಣೆಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಸೂಚಿತವಾದ ಅಂತರ್ರಾಷ್ಟ್ರೀಯ ವ್ಯಾಪಾರ ಪಟವನ್ನು ಭಾರತವು ಸೂಕ್ಷ್ಮವಾಗಿ ನಿರೀಕ್ಷಿಸಬೇಕು. ಆ ತತ್ವಗಳ ಆಚರಣೆಯಿಂದ ನಮ್ಮ ವ್ಯಾಪಾರಕ್ಕೆ ಧಕ್ಕೆ ತಟ್ಟುವಂತಿದ್ದರೆ ಅದನ್ನು ಬಿಟ್ಟುಬಿಡಬೇಕು. ಏಕೆಂದರೆ — ಇಂಗ್ಲೆಂಡು ಅಮೇರಿಕೆಗಳು ಅಲ್ಲಿ ಹೇಳಿರುವ ಪ್ರಕಾರ ಸುಂಕ ಕಡಿಮೆಮಾಡುವುದು, ಕಾದಿಟ್ಟ ಸೌಕರ್ಯಗಳನ್ನು ತೆಗೆದುಹಾಕುವದು, ಇಂತಿಷ್ಟನ್ನೇ ಮಾಡಬೇಕು ಇಲ್ಲವೇ ಕೊಳ್ಳಬೇಕೆಂಬ ನಿಯಂತ್ರಣವನ್ನು ತೆಗೆದುಹಾಕುವದು, ಪರರಾಷ್ಟ್ರದ ಬಂಡವಾಲವನ್ನು ತನ್ನ ರಾಷ್ಟ್ರದ್ದೇ ಎಂದು ಪ್ರತಿಯೊಂದು ರಾಷ್ಟ್ರವೂ ತಿಳಿದುಕೊಳ್ಳುವದು ಈ ಎಲ್ಲ ತತ್ವಗಳನ್ನು, ತಮ್ಮ ಅಧಿಕವಾದ ಸಿದ್ಧ ವಸ್ತುಗಳನ್ನು ಜಗತ್ತಿನಲ್ಲಿ ಮಾರುವುದರಸಲುವಾಗಿ, ಎಲ್ಲರೂ ಒಪ್ಪುವಂತೆ ಮಾಡಲು ಹೆಣಗುತ್ತಿವೆ. ಆದುದರಿಂದ ನಾಳಿನ ನವೆಂಬರ ೨೧ ರಲ್ಲಿ ಹವನದಲ್ಲಿ ಸೇರುವ ಅಂತರ್ರಾಷ್ಟ್ರೀಯ ಸಭೆಯಲ್ಲಿ ಮೇಲೆ ಹೇಳಿದ ಪಟದಲ್ಲಿ ಉಕ್ತವಾದ ತತ್ವಗಳಿಗೊಪ್ಪಿಗೆಕೊಡುವುದರ ಮೊದಲು ಭಾರತ ಸರಕಾರವು ಇಲ್ಲಿಯ ವಣಿಗ್ವರ್ಗದೊಡನೆ ವಿಚಾರವಿನಿಮಯ ಮಾಡುವದೆಂದು ಆಶಿಸುತ್ತೇನೆ.

ವೈಯಕ್ತಿಕ ಉದ್ಯಮ ಸಾಹಸ

ನಮ್ಮ ಹಣಕಾಸಿನ ಮಂತ್ರಿಗಳೆಂದಂತೆ ವೈಯಕ್ತಿಕ ಉದ್ಯಮ ಸಾಹಸ ಇನ್ನೂ ನಡೆಯಬೇಕಾಗಿದೆ. ಅದಕ್ಕೆ ಬಂಡವಾಲಿಗರಲ್ಲಿ ಜನತೆಯ ಶ್ರದ್ಧೆ ಶಿಥಿಲವಾದುದನ್ನು ಸರಕಾರವು ತನ್ನ ಧೋರಣದಿಂದ ತಿದ್ದಿ ದೃಢಪಡಿಸಬೇಕು. ತಲೆತಲಾಂತರದಿಂದ ಬಂದ ವ್ಯಾಪಾರ ಕೌಶಲದ ಜೊತೆಗೆ ಪ್ರಾಮಾಣಿಕತೆ ಮತ್ತು ಬಿಚ್ಚುಮನಗಳಿದ್ದರೆ ವ್ಯಾಪಾರದಲ್ಲಿ ಚಿರ ಯಶಸ್ಸು ಸಿಗುವುದು ಕಟ್ಟಿಟ್ಟದ್ದು; ಅದರಿಂದ ನಮ್ಮ ನಾಡಿನ ವೈಯಕ್ತಿಕ ಉದ್ಯಮ ಸಾಹಸ ಪ್ರಗತಿಯನ್ನು ಹೊಂದದಿರದು. ಸದ್ಯದಲ್ಲಿರುವಂತೆ ಅವ್ಯವಸ್ಥೆಯಿರದಂತಾಗಿ ಅಧಿಕಾರಿಗಳನ್ನಿಟ್ಟು ಮೇಲ್ವಿಚಾರ ನಡೆಸುತ್ತಿರುವುದು ಖಾಸಗಿ ಉದ್ದಿಮೆಗಳ ಏಳಿಗೆಗೆ ಅವಶ್ಯವೆಂಬುದನ್ನು ಹೇಳದಿರಲಾಗದು. ಬ್ರಿಟಿಶ್ ವ್ಯಾಪಾರ ಸಂಸ್ಥೆಗೊಬ್ಬ ಅಧಿಕಾರವುಳ್ಳ ಅಧ್ಯಕ್ಷ ನಿರುವಂತೆ ನಮ್ಮ ಬೇರೆ ಬೇರೆ ಮಂತ್ರಿ ಮಂಡಲಗಳು ಒಂದೇ ದೃಷ್ಟಿಯಿಂದ ಸಾಗುವಂತೆ ನೋಡಿಕೊಂಡು ದೇಶದಲ್ಲಿ ಅಭೂತ ಪೂರ್ವ ರೀತಿಯಿಂದ ಔದ್ಯೋಗೀಕರಣವನ್ನು ಅಮಲಿನಲ್ಲಿ ತರಬೇಕಾದರೆ ಬಹುಮುಖದ ಅಧಿಕಾರವುಳ್ಳ ಒಬ್ಬ ಕೈಗಾರಿಕೆಯ ಮಂತ್ರಿಯನ್ನು ಕೇಂದ್ರ ಸರಕಾರವು ನಿಯಮಿಸಬೇಕಾದದ್ದು ಅಗತ್ಯವಾಗಿದೆ. ದೇಶದ ನಾನಾ ಭಾಗಗಳಲ್ಲಿ ಏಕಭಾವದಿಂದ ಏಕ ಸೂತ್ರವಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಿ ಉತ್ಪಾದನವನ್ನು ವ್ಯವಸ್ಥಿತವಾಗಿ ಹೆಚ್ಚಿಸಲು ಅದು ಬಹಳ ಸಹಕಾರಿಯಾಗುವುದು.

ಸರಕಾರದೊಡನೆ ಸತ್ಸಂಬಂಧ

ನಮ್ಮ ಮಂತ್ರಿಗಳ ಮತ್ತು ನಮ್ಮ ನಡುವಣ ಸಂಬಂಧ ಆದರಭಾವದಿಂದ ಕೂಡಿದ್ದಾಗಿದೆ. ಹಿಂದುಸ್ತಾನದಿಂದ ಸಲ್ಲಬೇಕಾದ ಮತ್ತು ಅದಕ್ಕೆ ಬರಬೇಕಾದ ಹಣಕಾಸಿನ ವಿಚಾರದಲ್ಲಿ ಹೇಗೆ ನೆಹರು ಸರಕಾರ ನಮ್ಮ ಸಂಸ್ಥೆಯ ತಜ್ಞ ಸಮಿತಿಯ ಸಲಹೆಪಡೆಯಿತೋ ಅದೇ ಪ್ರಕಾರ ಇನ್ನು ಮುಂದಾದರೂ ದೇಶದ ಆಗು ಹೋಗುಗಳನ್ನು ನಿರ್ಣಯಿಸುವಂಥ ಮಹತ್ವದ ಆರ್ಥಿಕ ಪ್ರಶ್ನೆಗಳಲ್ಲಿ, ವಾಣಿಜ್ಯ ಮಹಾಮಂಡಲದ ಸಲಹೆಯನ್ನು ಸರಕಾರ ತೆಗೆದುಕೊಳ್ಳುವುದೆಂದು ನನಗೆ ನಂಬಿಗೆಯಿದೆ.

ಹಿಂದುಸ್ತಾನವು ಇನ್ನು ಮುಂದೆ ಕೇವಲ ಪರದೇಶಗಳಿಗೆ ಕಚ್ಚಾ ಮಾಲುಗಳನ್ನು ಕಳುಹುವ ದೇಶವಾಗಿ ಉಳಿಯದು. ತನ್ನ ರಾಷ್ಟ್ರೀಯ ಅರ್ಥಿಕ ಉನ್ನತಿಗಾಗಿ ಅದು ತ್ವರೆಯಿಂದ ವಿಶಾಲ ಪರಿಧಿಯಲ್ಲಿ ವಿವಿಧ ಕೈಗಾರಿಕೆಗಳನ್ನು ಬೆಳೆಸಬೇಕಾಗಿದೆ. ಇದನ್ನರಿತು ಹಿಂದೆ ಹೇಳಿದಂತೆ ನಮ್ಮ ಕೇಂದ್ರ ಸರಕಾರವು ಹಿಂದೀ ವ್ಯಾಪಾರಕ್ಕೆ ಅಗತ್ಯವೆನಿಸುವ ಅಂತರ್ರಾಷ್ಟ್ರೀಯ ಸವಲತ್ತುಗಳನ್ನು ಪಡೆದು ಕೊಡುವುದು ಪ್ರಾಮುಖ್ಯವನ್ನು ಎಷ್ಟು ಹೇಳಿದರೂ ಕಡಿಮೆಯೇ ಎಂದು ಹೇಳ ಬಯಸುತ್ತೇನೆ. ಹಡಗು, ಸಾರಿಗೆ, ಉಪಕರಣ, ಕೂಲಿ ಈ ನಾನಾ ಸಾಧನಗಳನ್ನು ಒದಗಿಸಿಕೊಳ್ಳಲು ಸರಕಾರದ ಸಹಾಯ ಅವಶ್ಯಕವಿದೆಯೆಂದು ಆಗಲೆ ಹೇಳಿದ್ದಾಗಿದೆ. ಆದುದರಿಂದ ಸರಕಾರ ನಮ್ಮೊಡನೆ ಈ ಯತ್ನದಲ್ಲಿ ನೇತೃವಾಗಿ ನಡೆಸಿಕೊಂಡು ಹೋಗುವುದೆಂದು ಆಶಿಸುತ್ತೇನೆ.


ಇಂದಿನ ಸರಕಾರದ ಸಹಕಾರ ಮನೋಭಾವವು ನಮ್ಮ ಮುಂದಿನ ಸಂಬಂಧವನ್ನು ರೂಪಿಸುವದೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ; ಆ ಬಗ್ಗೆ ನಾವು ಸಂದೇಹಪಡಲು ಯಾವ ಕಾರಣವೂ ಇಲ್ಲ.

ಹೀಗೆ ಸರಕಾರ, ಬಂಡವಾಲ ಮತ್ತು ಕೂಲಿಗಳಲ್ಲಿ ಸರಿಯಾದ ಸಹಕಾರ ಮನೋಭಾವವಿದ್ದು ಪರಸ್ಪರ ವಿಚಾರವಿನಿಮಯದಿಂದ ಮತ್ತು ಉತ್ಪಾದನ ಸಾಧನ, ಧನವಿನಿಮಯ, ಯಂತ್ರೋಪಕರಣಗಳ ವಿಕ್ರಯ ಮುಂತಾದ್ದನ್ನು ಶೀಘ್ರದಲ್ಲೇ ಸಾಧಿಸಿಕೊಳ್ಳಲು ಅಗತ್ಯವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವದರಿಂದ ದೇಶಕ್ಕೆ ಇಂದು ಎದುರಾಗಿರುವ ಅರ್ಥಿಕ ಪ್ರಶ್ನೆಯನ್ನು ಬಿಡಿಸಲು ನಾವು ಯತ್ನಿಸುವದು ಅವಶ್ಯ ಕರ್ತವ್ಯವೆಂಬ ಮಾತನ್ನು ಒತ್ತಿ ಹೇಳಬಯಸುತ್ತೇನೆ. ಈ ಕಾರ್ಯದಲ್ಲಿ ದ್ವಿಗುಣಿತ ಉತ್ಸಾಹದಿಂದ ವಣಿಗ್ವರ್ಗವು ಮುನ್ನಡೆ ಯಿಡುವುದೆಂದು ನನಗೆ ಭರವಸೆಯಿದೆ.

ಕಡೆಯದಾಗಿ ನಮ್ಮ ವಣಿಗ್ಮಂಡಲದ ಹಣಕಾಸಿನ ಪರಿಸ್ಥಿತಿಯನ್ನೂ ಕಾರ್ಯಾಲಯದಲ್ಲಿ ತಜ್ಞ ಕಾರ್ಯಕರ್ತರನಿಟ್ಟು ಕಾರ್ಯ ನಡೆವ ಬಗೆಯನ್ನು ಸುಧಾರಿಸಬೇಕೆಂಬ ಬಗ್ಗೆ ನಾನು ಒಂದೆರಡು ಮಾತುಗಳನ್ನು ಇಲ್ಲಿ ಹೇಳದಿರಲಾರೆ. ಹಿಂದಿನ ನಮ್ಮ ಮಂಡಲದ ಮುಂಗಡ ಪತ್ರಿಕೆಗಳು ತಾಳ ತಪ್ಪಿದಂತೆ ಇನ್ನು ತಪ್ಪಬಾರದು! ಆ ಬಗ್ಗೆ ಸದಸ್ಯ ವ್ಯಕ್ತಿ ಹಾಗೂ ಸಂಸ್ಥೆಗಳು ಈ ಮಂಡಲದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮುಂದೆ ಬಂದ ಹೊರತು ನಮ್ಮ ಕಾರ್ಯವನ್ನು ವಿಸ್ತರಿಸಿ ಯಶಸ್ವಿಯಾಗಿ ಸಾಗಿಸುವುದು ದುಸ್ಸಾಧ್ಯವೆನಿಸಬಹುದು.

ಲಂಡನ್ನಿನಲ್ಲಿರುವ ಭಾರತದ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ಎನ್. ಗಾಂಗುಲಿಯವರು ಜಾಗತಿಕ ಸಂಪರ್ಕ ಪರಿಷತ್ತಿನಲ್ಲಿ ವಾರ್ತಾವಿನಿಮಯದ ಬಗ್ಗೆ ಸಲಹೆ ಕೊಡಲೆಂದು ಹೋದರು.

-- ಈ ವಾರದ ಕತೆ --



ಕಲಿತವರೆಲ್ಲ 'ಕುಮ್ಮಣ್ಣ ಮಂತ್ರಿ'ಗಳೆಂದು ನನ್ನ ಅಜ್ಜನ ಸಿದ್ಧಾಂತ. ಬಿ. ಎ. ಎಂ. ಎ. ಗಳನ್ನು ಎಂದೂ ನಂಬಕೂಡದೆಂದು ಅವನ ಹೇಳಿಕೆ. ಇದಕ್ಕೆ ಅವನು ತನ್ನ ಅನುಭವದ ಬತ್ತಳಿಕೆಯಿಂದ ಸಾವಿರಾರು ಉದಾಹರಣೆಗಳ ಬಾಣಗಳನ್ನು ಎಸೆಯುತ್ತಾನೆ. ಆಗ ಅವ ಥೇಟು ಭೀಷ್ಮನಂತೆ ಕಾಣುತ್ತಾನೆ!

ಆದರೆ ನಮ್ಮ ನೆರೆಮನೆಯ ಗೋಪಾಲರಾಯರು ಮಾತ್ರ ಅಪವಾದವೆಂದೂ, ಅವರಂಥ ದೊಡ್ಡ ಮನಸ್ಸಿನ ದೊಡ್ಡ ಗುಣದ ದೊಡ್ಡ . . . ಜನರು ಕಾಣಲೂ ಸಿಗುವದಿಲ್ಲವೆಂದೂ ನಾವೆಲ್ಲಾ ಇಂಗ್ಲೀಷು ಬಿಂಗ್ಲೀಷು ಕಲಿತರೆ ಅವರಂತೆ ವರ್ತಿಸಲು ಕಲಿಯಬೇಕೆಂದೂ ನಮ್ಮ ಅಜ್ಜನವರ ಉಪದೇಶ. ತುರ್ತ ನಾವು 'ಹು' ಅಂದಿದ್ದೇವೆ. ಮುದುಕರ ಮನಸ್ಸು ನೋಯಿಸುವದು ದೊಡ್ಡ ಗುಣವಲ್ಲ ಅಂತ.

ಗೋಪಾಲರಾಯರ 'ದೊಡ್ಡ ಗುಣ' ವನ್ನು ಅಜ್ಜ ಅನೇಕ ಸಾರೆ ಕಂಡಿದ್ದಾನಂತೆ. ಅವುಗಳಲ್ಲೆಲ್ಲ ರಾಯರು ತಮ್ಮ ಈ ಹೆಂಡತಿಯನ್ನು ಇಟ್ಟುಕೊಂಡು ಒಳ್ಳೆಯದಾಗಿ ಮನೆತನ ಸಾಗಿಸುತ್ತ ಬಂದುದೇ ಮುಖ್ಯ.

ರಾಯರು ಕಾಲೇಜಿನಲ್ಲಿದ್ದಾಗ ಪ್ರೀತಿ, ಸೌಂದರ್ಯ ಎಂದೇನೋ ಕಾವ್ಯಗಳನ್ನೇ ಹೇಳುತ್ತಿದ್ದರೂ ಇಂಥ ಕುರೂಪಿಯನ್ನು ಮದುವೆಯಾದದ್ದು, ಮದುವೆಯಾದುದಷ್ಟೇ ಅಲ್ಲ ಅವಳೊಡನೆ ಸಂಸಾರ ನಡೆಸುತ್ತ ಬಂದುದು, ಎಲ್ಲರಿಗೂ ಪರಮಾಶ್ಚರ್ಯ. ಸ್ವತಃ ರಾಯರಿಗೇ ಹಾಗೆನಿಸುತ್ತದೆಯಂತೆ.

ಆದದ್ದು ಹೀಗೆ. ರಾಯರು ಚೆಲುವಿನ ಬೇಟೆಗಾರರೇನೋ ನಿಜ. ಅದಕ್ಕೆ ತಕ್ಕಂತೆ ಒಂದು ಚೆಲುವೆಯನ್ನು ಬೇಟೆಯಾಡಿ ಅವಳನ್ನು ತನಗೆ ಕೊಡಬೇಕೆಂದು ಅವಳ ವಿಧವೆ—ತಾಯಿಗೆ ಕೇಳಿಕೊಂಡರು. ಬಿ. ಎ. ಆದ ಶ್ರೀಮಂತ ನೌಕರಸ್ಥರು ಮನೆಯ ಬಾಗಿಲಿಗೆ ಬಂದು ಹುಡುಗಿಯನ್ನು ಬೇಡಿದಾಗ ಇಲ್ಲ ಎನ್ನುವ ಪಿತೃಗಳುಂಟೇ? ಆ ಕನ್ಯೆಯ ತಂದೆಯೂ ಸ್ವರ್ಗದಿಂದಲೇ ಕನಸಿನ ಅಂಚೆಯ ಮೂಲಕ ಒಪ್ಪಿಗೆ ಕಳಿಸಿದನು. ಒಂದೆರಡು ದಿನಗಳಲ್ಲಿಯೇ ಮದುವೆಯಾಗಿ ಬಿಟ್ಟಿತು.

. . . ಆಗಿ ಬಿಟ್ಟಿತು ಎನ್ನುವ ಮುಂಚೆ ಒಂದು ಮಾತು. ರಾಯರದೊಂದು ದೊಡ್ಡ ಗುಣ— ಇಷ್ಟು ಕಲಿತವರಾದರೂ ತುಂಬಾ ಆಸ್ತಿಕರು ಅವರು. ಮಡಿ ಮೈಲಿಗೆ, ದೇವರ ಪೂಜೆ, ಶಕುನ, ಭವಿಷ್ಯ ಇಂಥವುಗಳಲ್ಲಿ ಅವರ ನಂಬಿಕೆ ಬಹಳ. ಕಲಿತವರಲ್ಲಿ ಕೆಲವರಾದರೂ ಹೀಗೆ ಆಸ್ತಿಕರಾಗಿದ್ದಾರೆಂದೇ ಪ್ರಪಂಚ ಇನ್ನೂ ಸಾಗಿದೆಯೆಂದು ನಮ್ಮ ಅಜ್ಜನವರು ಹೇಳುತ್ತಾರೆ. ನಮಗೂ ಕೆಲವು ಸಲ ಹಾಗೆ ತೋರಿಲ್ಲ ಅಂತ ಹೇಳಲಾರೆವು. ಇರಲಿ. ಮದುವೆಯಾದ ಹುಡುಗಿ ಸುಂದರಿಯಷ್ಟೇ ಆಗಿದ್ದರೆ ರಾಯರು ಮದುವೆಯಾಗಿ ಬಿಡುತ್ತಿದ್ದರೆಂದು ಹೇಳಲಾಗದು. ಜಾತಕ ರೂಪಾಯಿಗೆ ೧೫॥ ಆಣೆ ಕೂಡಿ ಬಂತು! ಅದರ ಪುಣ್ಯದಿಂದಲೆ ಮದುವೆಯ ಚಪ್ಪರದಲ್ಲಿಯೇ Promotion order—ನವಕರಿಯಲ್ಲಿ ಮೇಲೇರಿಸುವ ಆಜ್ಞೆ ಬಂತು.

ಆ ಆಜ್ಞೆ ಅದೇ ದಿನ ಬರದಿದ್ದರೆ ಮದುವೆಯಾದ ಹೆಣ್ಣನ್ನು ರಾಯರು ಚಪ್ಪರದಲ್ಲಿಯೇ ಬಿಡುವ (divorce) ಪರಿಸ್ಥಿತಿ. ಹೀಗಾಗಿ ಬಿಟ್ಟಿತು ನೋಡಿ— ಅಂತಃಪಟ ಸರಿಯಲು ಮಾಲೆಗಳು ಒಬ್ಬರೊಬ್ಬರ ಕೊರಳಿಗೆ ಬಿದ್ದವು. ಬೆಳಗಿನ ಜಾವದ ಲಗ್ನ. ಮದುಮಕ್ಕಳು ಎಷ್ಟೇ ಉಕ್ಕಂಠಿತರಾಗಿದ್ದರೂ ನಿದ್ದೆಯಿಂದ ಜೋಲಿ ಹೊಡೆಯುತ್ತಿದ್ದರು. ಗ್ಯಾಸದೀಪಗಳಿದ್ದರೂ ಅವುಗಳಿಗೆ ಪಂಪು ಹೊಡೆದು ದೊಡ್ಡದಾಗಿ ಉರಿಸುವಷ್ಟು ಯಾರೂ ಎಚ್ಚರಿದ್ದಿಲ್ಲ. ಪುರೋಹಿತರು ಮಂತ್ರಗೊಣಗೊಣಿಸಿದರು. ಯಾರೋ ಧಾರೆಯೆರೆದ ಹಾಗೆ ಮಾಡಿದರು. ರಾಯರು ಕಣ್ಣು ತಿಕ್ಕಿ ತಿಕ್ಕಿ ನೋಡಿದರು. ಕನ್ಯೆ ಮೊದಲು ಕಂಡಷ್ಟು ಸುಂದರಿಯೇನಿದ್ದಿಲ್ಲ! ಪಟ್ಟೆಯ ಸೀರೆ, ಮೈತುಂಬ ಚಿನ್ನ, ಪಚ್ಚೆ ಕುಂಕುಮ, ಹೂ, ಇವುಗಳಿಂದ ಅವಳ ಸಹಜ ಸೌಂದರ್ಯ ಮುಚ್ಚಿಹೋಗಿದೆಯೆಂದು ಅಂದುಕೊಂಡರು. Beauty unadorned is adorned the most ಅನಲಂಕೃತ ಕಾಂತಂತೇ ವದನಂ ವನಜದ್ಯುತಿ ಎಂಬ ಸಾಲು ಅವರಿಗೆ ಅಂಥ ಜೊಂಪಿನಲ್ಲಿಯೂ ನೆನಪಾಗದೆ ಹೋಗಲಿಲ್ಲ.

ಬೆಳಗಾಯಿತು. ಕನ್ಯೆಯನ್ನು ಕಾಣುವ ಕುತೂಹಲ ರಾಯರದು. ಆದರೆ ಅವಳು ಮಾತ್ರ ನಾಚಿಕೆಯ ಮುದ್ದೆಯಾಗಿ ಕಂಬದ ಮರೆಗೇ ಕುಳಿತಳು. ರಾಯರ ಸಂಶಯ ಹೆಚ್ಚಿತು. ಆದರೆ ಸಂಶಯವನ್ನು ಖಾತ್ರಿಮಾಡಿಕೊಂಡ ಹಾಗೆಲ್ಲ ಹೇಳುವದಾದರೂ ಹೇಗೆ? ಸೂರ್ಯನು ಮೇಲೆ ಮೆಲೆ ಮೇಲೆ ಬಂದಂತೆ ರಾಯರ ಕಣ್ಣು (ಕಳೆದ ರಾತ್ರಿ ನಿದ್ರೆ ಇರದೆ) ಉರಿಯ ಹತ್ತಿತು; ಸಂಶಯ ಹೆಚ್ಚಾಗ ಹತ್ತಿತು.

ರಾಯರ ಹೆಂಡತಿಯ ಪುಣ್ಯ. ಅಷ್ಟರಲ್ಲಿಯೇ ಮೇಲಧಿಕಾರಿ ಪಟ್ಟಕ್ಕೇರಿಸುವ ಆಜ್ಞಾಪತ್ರ ಬಂತು. ಪುರೋಹಿತರೂ ಕನ್ಯೆಯ ಬಳಗದವರೂ ಗುಲ್ಲೆಬ್ಬಿಸಿ ಬಿಟ್ಟರು. "ನೋಡಿದಿರಾ ಹುಡುಗಿಯ ಪುಣ್ಯ! ಮದುವೆಯಾಗಿ ಸರಿಯಾಗಿ ೧೨ ತಾಸು ಆಗಿಲ್ಲ, ಪ್ರಮೋಶನ ಗಂಡನಿಗೆ! ಪರಮೇಶ್ರಿಯ ಪುಣ್ಯ" ಅಂದರು. ರಾಯರಿಗೂ ಹಾಗೆನಿಸಿತು. ಆಜ್ಞಾಪತ್ರ ಬರುವದಿತ್ತೆಂಬದು ಅವರಿಗೆ ಗೊತ್ತು. ಆದರೆ ಅವರು ಯೋಚಿಸಿದ್ದು ಹೀಗೆ: ಈ ಹುಡುಗಿಯ ನಸೀಬು ಕೆಟ್ಟದ್ದಿದ್ದರೆ ನನಗೆ ಮೇಲಿನ ಅಧಿಕಾರ ಪ್ರಾಪ್ತಿ ಆಗದೇ ಹೋದರೂ ಹೋಗಬಹುದಿತ್ತು.'

ಅಂತೂ ಅವರು ತನ್ನ ಅರ್ಧಾಂಗಿಯ ಭಾಗ್ಯರೇಖೆ ಬಲವಾಗಿದೆಯೆಂದು ಮೂಡಿದ ಸಂಶಯವನ್ನು ಮುರುಟಿಸಿಬಿಟ್ಟರು. ಮುಖ್ಯವಾಗಿ ಇದು ಅವರ ದೊಡ್ಡ ಗುಣ.

ಮನೆಗೆ ಬಂದ ಮೇಲೆ ಹೆಂಡತಿಗೆ ಹೇಳಿದರು: "ನಿನ್ನ ತಂಗಿಯನ್ನು ನನಗೆ ತೋರಿಸಿ, ಅವಳನ್ನೇ ನಾನು ಮದುವೆಯಾಗುತ್ತೇನೆನ್ನುವಂತೆ ನಟಿಸಿ, ಯಾರೂ ಮದುವೆಯಾಗದೆ ಬಿದ್ದ ನಿನ್ನನ್ನು ನನಗೆ!"

"ಜಾತಕ ನನ್ನದೇ ಆಗಿತ್ತು ನಿಮಗೆ ತೋರಿಸಿದ್ದು" ಅಂದಳು ಪರಮೇಶ್ರಿ.

"ಹೋಗಲಿ ಬಿಡು. ನಾನು ಚಪ್ಪರದಲ್ಲಿಯೇ ನಿನ್ನನ್ನು ಬಿಟ್ಟರೆ ನಿನಗೆ ಏನು ಅನಿಸಬಹುದು? ಒಂದು ಜೀವನ ಹಾಳಾಗುತಿತ್ತು . . . . ಮೇಲಾಗಿ ನವಕರಿಯ ಉತ್ಕರ್ಷ ಒದಗುವಂತಾಗಿ ನಮ್ಮ ಭವಿಷ್ಯದ ಶುಭವನ್ನೇ ಸೂಚಿಸಿತು. ಅಲ್ಲದಿದ್ದರೆ ಕಟ್ಟಿದ ಕರಿಮಣಿಯನ್ನು ಅಲ್ಲಿಯೇ ಬಿಚ್ಚದಿದ್ದರೆ—ಹರಿಯದಿದ್ದರೆ ನಾನು ಹುಟ್ಟಿದ್ದು ಸುಳ್ಳು!"

" ನಿಮ್ಮ ದೊಡ್ಡ ಗುಣ! " ಅಂದಳು ಪರಮೇಶ್ರಿ.

ವಿಶ್ವಸ್ತ ಮಂಡಲ ಕಾಟೆಗಾಗಿ ಮುಂಗಡ ಪತ್ರ ತಯಾರಿಸುವಲ್ಲಿ ಲೇಕ ಸಕ್ಸಸದ ಭಾರತದ ಪ್ರತಿನಿಧಿ ೭॥ ಲಕ್ಷ ಡಾಲರುಗಳಲ್ಲಿ ನೂರಕ್ಕೆ ೨೦ ರಷ್ಟು ಇಳಿಸುವುದನ್ನು ಬಲವಾಗಿ ವಿರೋಧಿಸಿದರು.

KARMVEER 20-10-47

Reg. No. B. 3148

LICENCE No. 3
Licenced to Post without Prepayment



ಜ್ಯೋತಿಷಿ:— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಅಕ್ಟೋಬರ ೨೦ ರಿಂದ ೨೬ ರ ವರೆಗೆ

ಮೇಷ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಆದರೆ ಸ್ತ್ರೀ ಸುಖ ಉತ್ತಮ. ಮಕ್ಕಳಲ್ಲಿ ಪ್ರಗತಿಯು ಅನೇಕ ಘಟನೆಗಳು. ಆದರೆ ಸ್ವತಃ ನಿಮ್ಮ ಗೂಢ ಮಾತ್ರ ಅವರ ವರ್ತನೆಯು ಕುತ್ಸಿತೆಯುದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಮಂದ ಸ್ಥಿತಿಯಲ್ಲಿ. ಆದರೆ ಸ್ವಲ್ಪ ಅಕಸ್ಮಾತ ಲಾಭವಾಗುವ ಸಂಭವ. ಮಿತ್ರ ಸ್ನೇಹದಲ್ಲಿ ಸ್ವಲ್ಪ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ನಿಮ್ಮ ಮನೆಯಲ್ಲಿ ಇಲ್ಲವೆ ಊರಲ್ಲಿ ಇರ ಲಿಕ್ಕೆ ಮನಸ್ಸು ಬಹಳ ಬೇಸರಗೊಳ್ಳುವದು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅಶ್ವಿನಿಯು ೪ ನೆ ಭರಣಿಯು ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೨೦, ೨೧, ೨೨ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯು ಆರೋಗ್ಯ ಕೆಡುವ ಯೋಗ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪ ರೀತ. ಮುಪ್ಪ ಅಸ್ವರ ಹೇಳಿಕೆಯಿಂದ ಮಕ್ಕಳು ಕೆಲ ಹೊಂದು ಅಪಕೃತ್ಯ ಮಾಡುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಅಪ್ರತಿಷ್ಠೆಯು ಅಂಜಿಕೆ ವಿಪರೀತ. ಸ್ಥಾವರ ಜಂಗಮ ಸಂಗ್ರಹದಲ್ಲಿ ಬಹಳ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿಮ್ಮ ದುರಾಗ್ರಹ ಇಲ್ಲವೆ ಕಾತ್ಸಾರ ಮಾಡುವದರಿಂದ ಗೊಂದಲ ಮತ್ತು ಹಾನಿ. ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸ ಅನುಕೂಲ. ಕೃತ್ತಿಕೆಯು ೪ ನೆ ಮತ್ತು ರೋಹಿಣಿಯು ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೪, ೨೬ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಗೆ ಕಾಯಿಲೆ ವಾಸಿತನದ ಎಲ್ಲ ವಿಷಯಗಳಲ್ಲಿ ಉಭಯತರ ಮತ ಬಹಳ ವಿರುದ್ಧ. ಅಲ್ಲದೆ ಮನೆಯಲ್ಲಿಯು ಎಲ್ಲ ಜನರೂ ತಲೆಯ ಮೇಲೆ ಮೆಣಸು ಅರೆಯುತ್ತಿರುವರು. ಒಳ್ಳೆ ಮನುಷ್ಯ ನೆಂದು ಭಾವಿಸಿಕೊಂಡು ಲಫಂಗನನ್ನು ಮನೆಯಲ್ಲಿ ನೋಕ ರಿಗೆ ಇಟ್ಟುಕೊಳ್ಳುವ ಇಲ್ಲವೆ ಅವನಿಗೆ ಬೇರೆ ಜಗೆಯಿಂದ ಸಹಾಯ ಸಲ್ಲಿಸುವ ದುರ್ಬುದ್ಧಿ. ಉದ್ಯೋಗದಲ್ಲಿ ಬಹಳ ಪ್ರಯತ್ನದಿಂದ ಸಾಧಿಸಿದ ಆಸನವನ್ನು ಸ್ಥಿರವಾಗಿ ಇಟ್ಟು ಕೊಳ್ಳುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಕ್ಕಳಲ್ಲಿ ಒಬ್ಬರ ಉನ್ನತಿಯು ಸಂಗತಿ. ಮಿತ್ರತ್ವದಲ್ಲಿ ವಿರೋಧ. ಪ್ರವಾಸ ತಿರರ್ಥಕ. ಭೆಟ್ಟಿ ಮಧ್ಯಮ. ಆದರೆ ಪತ್ರವ್ಯವಹಾರ ಉತ್ತಮ. ಮೃಗಾದ ೪ ನೆ ಮತ್ತು ಆರಿದ್ರೆಯು ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೦, ೨೧, ೨೫ ಅನುಕೂಲ.

ಕರ್ಕ

ಸ್ವತಃ ನಿಮಗೆ, ಹೆಂಡತಿಗೆ ಮತ್ತು ಮಕ್ಕಳಿಗೆ ಅಲ್ಪ ಸ್ವಲ್ಪ ಕಾಹಿಲೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂ ಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರತಿಷ್ಠೆಯು ಕುಂದಿಗೆ ಹೆಚ್ಚುವ ಪ್ರಸಂಗ. ಆದರೆ ಪ್ರಗತಿ ಮತ್ತು ಲಾಭವೂ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನು ಕೂಲತೆ. ಮಿತ್ರರೊಡನೆ ನೀವು ಹಾಕಿಲ ರೀತಿಯಿಂದ ವರ್ತಿಯುತ್ತ ಕಾಳುವದರಿಂದ ವಿರೋಧ ಉಂಟಾಗುವ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಉತ್ತಮ. ಪುಷ್ಯದ ೪ ನೆ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೨, ೨೪ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಗೆ ಬಹಳ ಮತ್ತುಮಕ್ಕಳಿಗೆ ಕಿರುಕುಳ ಕಾಹಿಲೆಯು ಸಂಭವ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅಸ್ವಸ್ಥ. ಸ್ಥಾವರ ದಲ್ಲಿ ಇಂದಿಲ್ಲ ನಾಳೆ ತೊಂದರೆಯುಂಟಾಗುವಂತೆ ಕೆಲ ಕೆಲ ವು ಕಟಕಟಿ ಉತ್ಪನ್ನವಾಗುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನು ಕೂಲವೆಂದು ಹೇಳಬಹುದು. ಭಾರವಾದ ವೆಚ್ಚ ನಡ ದೀತು. ಮಿತ್ರ ಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಅತಿ ತೊಂದರೆ ಯುದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನು ಕೂಲ. ಮಘಾದ ೪ ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೦, ೨೧, ೨೫ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮವು ಮಕ್ಕಳ ಸುಖ್ಯದಲ್ಲಿ ಹೆಚ್ಚಳ. ಆದರೆ ಆರೋಗ್ಯದ ಬಗ್ಗೆ ಸ್ವಲ್ಪ ಕಳವಳ. ಒಂದು ಅತಿ ಪ್ರಿಯ ಆದರೆ ಮತ್ತೊಂದು ಅಷ್ಟೇ ಅಪ್ರಿಯ. ಹೀಗೆ ಇಬ್ಬರು ಅತಿಥಿಗಳು ಒಂದೇ ಕಾಲಕ್ಕೆ ಬರುವದರಿಂದ ಮನಸ್ಸಿನಲ್ಲಿ ಬಹಳ ತೊಂದರೆ. ಸಂಗ್ರಹದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಇಲ್ಲದ ಹಾಗೆ ಯಶಸ್ಸು ಸಿಕ್ಕುವ ಬಗ್ಗೆ ಮಂಥ ನ್ಯದಲ್ಲಿ ಮಾಡದರಿಕೆ. ಮಿತ್ರತ್ವದಲ್ಲಿ ಅನನುಕೂಲತೆ. ಪ್ರವಾ ಸಾದಿ ಕೆಲಸ ಹಿತದ್ದು. ಆದರೆ ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೨೨, ೨೪, ೨೬ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಆದರೆ ಸ್ತ್ರೀ ಸುಖದಲ್ಲಿ ವಿರಸ ವಾಗುವದರಿಂದ ಗೃಹಕಲಹ. ಸ್ಥಾವರ ಜಂಗಮಗಳಲ್ಲಿ ಸ್ವಲ್ಪ ಹೆಚ್ಚಳ. ಆದರೆ ಅಕಸ್ಮಾತ ಅತೀತರೆಯದರಿಂದ ಗಾಬರಿ ಮತ್ತು ಕಲಹದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಕುಂದುತ್ತ ನಡೆಯುವದು. ಮಿತ್ರ ಸುಖ ಅನುಕೂಲ. ಪ್ರವಾಸ ವಾದದಲ್ಲಿ ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಆದರೆ ಭೆಟ್ಟಿಯು ಕೆಲಸ ತೊಂದರೆಯುದು. ಚಿತ್ರಾದ ೪ ನೆ ಮತ್ತು ಸ್ವಾತಿಯು ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೫, ೨೬ ಅನುಕೂಲ.

ವೃಶ್ಚಿಕ

ಪ್ರಕೃತಿ ಅನುಕೂಲ. ಆದರೆ ಮಾನಸಿಕ ಅಸಮಾ ಧಾನ. ಸ್ತ್ರೀ ಸುಖದಲ್ಲಿ ವಿರಸ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳುಮರಿಗಳಲ್ಲಿ ಸ್ವಲ್ಪ ಉನ್ನತಿ. ಉದ್ಯೋಗದಲ್ಲಿ ಅನುಕೂಲ ಸ್ಥಿತಿ. ಆದರೆ ಪರಾಧೀನತೆಯಿಂದ ಅದರಿಂದ ಬರತಕ್ಕ ಸುಖ ಮತ್ತು ಲಾಭದಲ್ಲಿ ಅಡಚಣೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ತೊಂದರೆಯುದು. ಅನುರಾಧೆಯು ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೧, ೨೨, ೨೪ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ. ಆದರೆ ಸ್ತ್ರೀ ಸುಖ ಅನು ಕೂಲ. ಉಳಿದ ವಿಷಯಗಳಲ್ಲಿ ಗೃಹ ಕಲಹದ ಬೆಂಕಿ ಬಹಳ ಹಬ್ಬುತ್ತಿರುವದು. ಮಕ್ಕಳಿಂದ ನಿಮಗೆ ಪ್ರತ್ಯಕ್ಷ ವಾಗಿ ಅಪ್ರತಿಷ್ಠೆ. ಉದ್ಯೋಗದಲ್ಲಿ ಜೋರಾದ ಪ್ರಗತಿ. ಬಹಳ ಪ್ರತಿಷ್ಠೆ ಮತ್ತು ತುಂಬ ಲಾಭ. ಮಿತ್ರ ಸುಖ ಅತಿ ಉತ್ತಮ. ದಾನ ಧರ್ಮಗಳಲ್ಲಿ ವಿಪರೀತ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಪ್ರತಿಪಕ್ಷಿಗಳು ಹುರಕಿ ಹೊಡೆಯುವದು ಮೊದಲಿಗಿಂತ ಹೆಚ್ಚು ಪ್ರವಾಸಾದಿ ಕೆಲಸ ಹಿತದ್ದು. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೨೨, ೨೪, ೨೪, ೨೫ ಅನು ಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಹೆಂಡತಿ ಮತ್ತು ಮಕ್ಕಳೊಡನೆ ಮೇಲಿಂದ ಮೇಲೆ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಉಳಿದ ವೆಚ್ಚ ಮಾತ್ರ ಇಮ್ಮಡಿ. ನೋಕರಚಾಕರರಿಂದ ಅತ್ಯಂತ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾ ಸಾದಿ ಕೆಲಸ ಸಾಧಾರಣ ಅನುಕೂಲ. ಉತ್ತರಾಷಾಢಾದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೨, ೨೪, ೨೬ ಅನುಕೂಲ.

ಕುಂಭ

ಪ್ರಕೃತಿಗೆ ಬಹಳ ಕ್ಲೇಶ. ಆದರೆ ಹೆಂಡತಿ ಮತು ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳಲ್ಲಿ ಒಬ್ಬರ ದಾದರೂ ಲೌಕಿಕಾಸದ ಉನ್ನತಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಸ್ಥಾವರ ಜಂಗಮ ಗಳಲ್ಲಿ ಬಹಳ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಒಳ್ಳೆ ಯಶಸ್ಸು. ಮಿತ್ರತ್ವದಲ್ಲಿ ತುರಸು. ಭೆಟ್ಟಿ ಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಧನಿಷ್ಠೆಯು ೪ ನೆ ಮತ್ತು ಶತತಾರಿಕೆಯು ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೦, ೨೧, ೨೫, ೨೬ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಆದರೆ ಪ್ರಾಪಂಚಿಕ ಸುಖ ಸಾಧಾ ರಣ. ಬಂಧು ವರ್ಗದವರಲ್ಲಿ ತಿಕ್ಕಾಟ. ಮಕ್ಕಳಿಗೆ ಕ್ಲೇಶದ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅವಚಿತ ಲಾಭದ ಸಂಭವವೂ ಇದೆ. ಸ್ವಪ್ನಗಳು ಶುಭ ಮತ್ತು ಭಾವೀ ಸೂಚಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯು ಮೊದ ಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೧, ೨೨, ೨೪ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ—ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿತವಾಗಿ ಪ್ರಕಟವಾಯಿತು.